# ಅಧ್ಯಾಯ 2

# ಕ್ರಿಸ್ತನು, ಪ್ರವಾದಿಗಳು ಮತ್ತು ದೇವದೂತರಿಗಿಂತ ಶ್ರೇಷ್ಠನು

## (ಭಾಗ 2)

## ಕ್ರಿಸ್ತನು, ಮನುಷ್ಯನ ರಕ್ಷನ, ದೇವದೂತರಿಗಿಂತ ಶ್ರೇಷ್ಠನು (2:1-18)

### ಅಲಕ್ಷ್ಯದ ವಿರುದ್ಧ ಎಚ್ಚರಿಕೆ (2:1-4)

**[1]ಆದದರಿಂದ ನಾವು ಕೇಳಿದ ಸಂಗತಿಗಳಿಗೆ ತಪ್ಪಿ ಹೋದೇವೆಂದು ಭಯಪಟ್ಟು ಅವುಗಳಿಗೆ
ಹೆಚ್ಚಾಗಿ ಲಕ್ಷ್ಯಕೊಡುವವರಾಗಿರಬೇಕು. [2]ಯಾಕೆಂದರೆ ದೇವದೂತರ ಮೂಲಕ ಹೇಳಲ್ಪಟ್ಟ
ವಾಕ್ಯವು ಸ್ಥಿರವಾಗಿದ್ದು ಅದನ್ನು ಮೀರಿ ಮಾಡಿದ ಪ್ರತಿಯೊಂದು ತಪ್ಪಿಗೂ ಅವಿಧೇಯತ್ವಕ್ಕೂ
ನ್ಯಾಯವಾದ ಪ್ರತಿಫಲವುಂಟಾದ ಮೇಲೆ [ನಮ್ಮ ಮುಂದಿಟ್ಟಿರುವ] ಈ [3]ಅತ್ಯಂತ ವಿಶೇಷ
ರಕ್ಷಣೆಯನ್ನು ನಾವು ಅಲಕ್ಷ್ಯಮಾಡಿದರೆ ತಪ್ಪಿಸಿಕೊಳ್ಳುವದು ಹೇಗೆ? ಇದು ಕರ್ತನಿಂದ ಮೊದಲು
ಹೇಳಲ್ಪಟ್ಟಿತು; ಆತನಿಂದ ಕೇಳಿದವರು ಇದನ್ನು ನಮಗೆ ಸ್ಥಿರಪಡಿಸಿದರು; ಮತ್ತು ದೇವರು ಅವರ
ಕೈಯಿಂದ ಸೂಚಕಕಾರ್ಯಗಳನ್ನೂ [4]ಅದ್ಭುತಕಾರ್ಯಗಳನ್ನೂ ನಾನಾ ವಿಧವಾದ
ಮಹತ್ಕಾರ್ಯಗಳನ್ನೂ ನಡಿಸಿ ಪವಿತ್ರಾತ್ಮವರಗಳನ್ನು ತನ್ನ ಚಿತ್ತಾನುಸಾರವಾಗಿ ಅವರಿಗೆ
ಅನುಗ್ರಹಿಸಿ ಅವರ ಮಾತಿಗೆ ಸಾಕ್ಷಿ ಕೊಡುತ್ತಿದ್ದನು.**

ಈ ವಿಭಾಗವು ತಪ್ಪಿ ಹೋಗುವದರಿಂದ ಹಿಡಿದು ದೇವರ ವಾಕ್ಯಕ್ಕೆ ಕಿವಿಗೊಡದೆ ಹೋಗುವಂತದ್ದಕ್ಕೆ (12:14-29) ಸಂಬಂಧಿಸಿದ ಪಾಪಗಳ ವಿರುದ್ಧ ಇಬ್ರಿಯರಿಗೆ ಪುಸ್ತಕದಲ್ಲಿ ನೀಡುವ ಐದು ಎಚ್ಚರಿಕೆಗಳಲ್ಲಿ ಮೊದಲನೆಯದ್ದಾಗಿರುತ್ತದೆ. ಲೇಖಕನು "ಒಂದು ಎಚ್ಚರಿಕೆ ಮಾತನ್ನು" ಕೊಡುವದಕ್ಕೆ ಆರಂಭಿಸುತ್ತಾನೆ (13:22) ಮತ್ತು ಆ ಉದ್ದೇಶಕ್ಕೆ ಮಾತ್ರವೇ ಸೀಮಿತಪಡಿಸಿಕೊಳ್ಳುತ್ತಾನೆ.

**ವಚನ 1.** 1 ರಿಂದ 4 ವಚನಗಳನ್ನು ಅನೇಕ ಸಾರಿ ಆವರಣ ವಾಕ್ಯವೆಂದು ನೋಡಲಾಗಿರುತ್ತದೆ; ಆದರೆ, **ಆದದರಿಂದ** ಎಂಬುದರಿಂದ ಸೂಚಿಸಲ್ಪಟ್ಟಿರುವ ಪ್ರಕಾರ, ಅವುಗಳು ನಿಜವಾಗಿಯೂ ಅಧ್ಯಾಯ 1ರಲ್ಲಿ ಮುಂದಿಡಲಾದ ತರ್ಕಕ್ಕೆ ಹೆಚ್ಚಿನ ರೀತಿಯಲ್ಲಿ ಒಂದು ಮುಕ್ತಾಯವನ್ನು ರೂಪಿಸುತ್ತವೆ. ಲೇಖಕನು ತನ್ನ ವಿವರವಾದ ವಾದವನ್ನು ಮುಕ್ತಾಯಗೊಳಿಸಿದ್ದನು, ಅವನಿಗೆ ಹೇಳುವದಕ್ಕೆ ಇನ್ನೂ ಬಹಳಷ್ಟು ಇದ್ದಿರಬಹುದಾಗಿದ್ದರೂ,

ದೇವದೂತರ ಮೂಲಕ ಕೊಡಲ್ಪಟ್ಟಿರುವ ಒಡಂಬಡಿಕೆಯು ಕ್ರಿಸ್ತನಿಂದ ಕೊಡಲ್ಪಟ್ಟ ಒಡಂಬಡಿಕೆಗೆ ಸಾಟಿಯಾಗಲಾರದು ಎಂದು ಹೇಳುವ ಮೂಲಕ ಮುಕ್ತಾಯಗೊಳಿಸುತ್ತಾನೆ (ವ. 2). ಹೊಸ ಒಡಂಬಡಿಕೆಯು ಒದಗಿಸುವಂತಹ ರಕ್ಷಣೆಯನ್ನು ನಾವು ಅಲಕ್ಷಿಸುವದಾದರೆ ನಮಗೆ ತಪ್ಪಿಸಿಕೊಳ್ಳುವ ಸಾಧ್ಯತೆಯೇ ಇರುವದಿಲ್ಲ (ವ. 3).

5ನೇ ವಚನದಿಂದ ಆರಂಭಗೊಂಡು, ಪ್ರಕರಣ ಗ್ರಂಥ-ಪತ್ರಿಕೆಯು ಮಾನವನ ಕೀಳಾದ ಸ್ಥಾನ ಮತ್ತು ಕ್ರಿಸ್ತನು ಮಾನವ ಸ್ಥಿತಿಯೊಳಗೆ ಪ್ರವೇಶಿಸುವ ಮೂಲಕ ನಮ್ಮನ್ನು ಒಂದುಗೂಡಿಸಿದನೆಂಬುದರ ಕಡೆಗೆ ಗಮನವನ್ನು ತಿರುಗಿಸುತ್ತದೆ. ನಾವು ಹಳೆಯ ಧರ್ಮಶಾಸ್ತ್ರದ ಮಧ್ಯಸ್ಥಿಕೆಯನ್ನು ವಹಿಸಿದ್ದ ದೇವದೂತರಿಗಿಂತಲೂ ಎಷ್ಟೋ ಶ್ರೇಷ್ಠನಾದ ಧರ್ಮಶಾಸ್ತ್ರ ಕೊಡುವವನ ಮೂಲಕ ಎಷ್ಟೋ ಶ್ರೇಷ್ಠವಾದ ಆಶೀರ್ವಾದಗಳನ್ನು ಪಡೆದುಕೊಂಡಿದ್ದೇವಾದ್ದರಿಂದ ನಮ್ಮಿಂದ ಹೆಚ್ಚಿನ ನಿರೀಕ್ಷೆಯನ್ನು ಮಾಡಲಾಗುತ್ತದೆಂದು ಲೇಖಕನು ಪ್ರಬೋಧಿಸುತ್ತಾನೆ. ಇಲ್ಲಿ ತತ್ವವು ಯೇಸುವಿನಿಂದ ಕಲಿಸಲ್ಪಟ್ಟ ಅದೇ ತತ್ವವೇ ಆಗಿರುತ್ತದೆ; ಅಂದರೆ, ಹೆಚ್ಚು ಕೊಡಲ್ಪಟ್ಟಿರುವವರ ಕಡೆಯಿಂದ ಹೆಚ್ಚು ನಿರೀಕ್ಷಿಸಲಾಗುತ್ತದೆ (ಲೂಕ 12:47, 48; ಮತ್ತಾಯ 11:20-24). ನಮಗೆ ಕ್ರಿಸ್ತನಲ್ಲಿ ಎಷ್ಟೋ ಹೆಚ್ಚು ಶ್ರೇಷ್ಠವಾದ ಪ್ರಕಟನೆಗಳು ಮತ್ತು ಆಶೀರ್ವಾದಗಳು ದೊರಕಿರುತ್ತವೆ, ವಿಧೇಯರಾಗುವದಕ್ಕೆ ಮತ್ತು ಆತನಿಗೆ ಸತ್ಯವಂತರಾಗಿ ಉಳಿಯುವದಕ್ಕೆ ನಮಗಿರುವ ಜವಾಬ್ದಾರಿಯು ಸಹ ಎಷ್ಟೋ ಅಧಿಕವಾಗಿರುತ್ತದೆ.

ದೈವಶಾಸ್ತ್ರದಿಂದ ಜೀವನಕ್ಕೆ ಒಂದು ಅನ್ವಯಿಕೆಯನ್ನು ಯಾವಾಗಲೂ ಮಾಡತಕ್ಕದ್ದು, ಮತ್ತು ಇಬ್ರಿಯರಿಗೆ ಪುಸ್ತಕದ ಲೇಖಕನು ಅದನ್ನು ಇಲ್ಲಿ ಸೇರ್ಪಡೆಗೊಳಿಸುವದಕ್ಕೆ ಜಾಗ್ರತೆ ವಹಿಸಿದ್ದನು. ಆತನು ಈ ಪುಸ್ತಕದಲ್ಲಿ ನಿರಂತರವಾಗಿ ದೈವಶಾಸ್ತ್ರದಿಂದ ಅನ್ವಯಗೊಳಿಸುವದರ ಕಡೆಗೆ ಸಾಗುತ್ತಾನೆ. ಕ್ರಿಸ್ತನ ಶ್ರೇಷ್ಠತೆಯನ್ನು ಒಪ್ಪಿಕೊಂಡು ಆ ವಾಸ್ತವಾಂಶದ ಮಹತ್ವವನ್ನು ಜೀವನಕ್ಕೆ ಅನ್ವಯಿಸಿಕೊಳ್ಳದಿದ್ದರೆ ಆ ಮಹಾನ್ ಸತ್ಯವನ್ನು ಹೆಚ್ಚುಕಡಿಮೆ ಬೆಲೆಯಿಲ್ಲದ್ದನ್ನಾಗಿಸುವದು. ಪಾಪಿಯಾದ ಮನುಷ್ಯರನ್ನು ಬಿಡುಗಡೆಗೊಳಿಸುವದಕ್ಕಾಗಿ ತನ್ನ ಮಗನನ್ನು ಲೋಕಕ್ಕೆ ಕಳುಹಿಸಿ ಕೊಡುವದರಲ್ಲಿ ತೋರ್ಪಡಿಸಲ್ಪಟ್ಟಂಥ ದೇವರ ಅಪರಿಮಿತವಾದ ಕೃಪೆಯನ್ನು ದೃಷ್ಟಿಯಲ್ಲಿಟ್ಟುಕೊಂಡು, ಸುವಾರ್ತೆಯ ಸಾರುವಿಕೆಗೆ ಅತ್ಯಂತ ಜಾಗರೂಕವಾಗಿ ಕಿವಿಗೊಡಬೇಕಾದ ಒಂದು ನೈತಿಕವಾದ ಹಂಗನ್ನು ಹೊಂದಿದ್ದೇವೆ.

**ಹೆಚ್ಚಾಗಿ ಲಕ್ಷ್ಯಕೊಡುವವರಾಗಿರಬೇಕು** [περισσῶς, *perissōs*] **ಎಂಬುದು** "ಸಾಧ್ಯವಾದಷ್ಟು ಹೆಚ್ಚಾದ ಗಮನವನ್ನು" **ಎಂಬ ಅರ್ಥದಲ್ಲಿ ಬಳಸಲಾಗಿದೆ**. Phillips ತರ್ಜುಮೆಯಲ್ಲಿ "ಆದದರಿಂದ, ನಾವು ಅತ್ಯಂಥ ಹೆಚ್ಚಾದ ಗಮನವನ್ನು ಕೊಡಬೇಕು" ಎಂದಿರುತ್ತದೆ.

ನಾವು "ಹೆಚ್ಚು ನಿಕಟವಾದ ಗಮನವನ್ನು" ಕೊಡಬೇಕಾಗಿರುವದರಿಂದ, ನಾವು ಹಾಗೆ ಮಾಡದಿದ್ದರೆ ತಪ್ಪಿಹೋಗುವೆವೆಂಬ ಕನಿಷ್ಠ ಸುಳಿವು ಇರುತ್ತದೆ. ಈ ಬುದ್ಧಿವಾದಕ್ಕೆ ಹೆಚ್ಚಾಗಿ ಲಕ್ಷ್ಯವನ್ನು ಕೊಡದವರು ನಿತ್ಯತ್ವದ ಬಗ್ಗೆ ನಿರ್ಲಕ್ಷ್ಯದಿಂದಿರುತ್ತಾರೆಂದಾಗಿದೆ!

**ನಾವು ಕೇಳಿದ ಸಂಗತಿಗಳಿಗೆ** ಹೆಚ್ಚಾಗಿ ಲಕ್ಷ್ಯವನ್ನು ಕೊಡಬೇಕಾಗಿರುತ್ತದೆ. ನಾವು ಏನನ್ನು ಕೇಳಿದ್ದೇವೆ? ಇಲ್ಲಿ ಅರ್ಥಮಾಡಿಕೊಳ್ಳಲ್ಪಟ್ಟಿರುವದೇನೆಂದರೆ ಶುಭವಾರ್ತೆಯಲ್ಲಿ (ಅಥವಾ ಸುವಾರ್ತೆ) ಸೇರಿರುವಂತದ್ದೆಲ್ಲವೂ ಎಂಬದೆ. ಸುವಾರ್ತೆಯನ್ನು ನಾಲ್ಕು ಅಂಶಗಳನ್ನನೊಳಗೊಂಡದ್ದು ಎಂದು ಅರ್ಥನಿರೂಪಿಸಬಹುದು. ಮೊದಲನೆಯದಾಗಿ, ಅದು ಸುವಾರ್ತಾ ಸಂದೇಶದ ತಿರುಳಿನಂತಹ, ನಾವು ನಂಬಿಕೆಯಿಡುವ *ವಾಸ್ತವಾಂಶಗಳನ್ನು*

ಹೊಂದಿದೆ (1 ಕೊರಿಂಥ 15:1-4). ಎರಡನೆಯದಾಗಿ, ಅದು ನಾವು ನಿರೀಕ್ಷೆಯಿಡುವಂತಹ *ವಾಗ್ದಾನಗಳನ್ನು* ಹೊಂದಿದೆ (ರೋಮಾ 8:24; ತೀತನಿಗೆ 1:2), ಅವುಗಳಲ್ಲಿ ಪರಲೋಕದ ನಿರೀಕ್ಷೆ, ನಿತ್ಯಜೀವ, ಮತ್ತು ಪುನರುತ್ಥಾನದಲ್ಲಿ ದೇಹದ ಬಿಡುಗಡೆ, ಮತ್ತು ಈ ಜೀವನದಲ್ಲಿ ದೇವರ ಒದಗಿಸುವಕೆಯ ನಿರೀಕ್ಷೆಗಳು ಸೇರಿರುತ್ತವೆ. ಮೂರನೆಯದಾಗಿ, ಅದರಲ್ಲಿ ವಿಧೇಯವಾಗಬೇಕಾದ ಮತ್ತು ನಾವು ಅಧೀನರಾಗಬೇಕಾದ *ಆಜ್ಞೆಗಳು* ಇರುತ್ತವೆ (ಮತ್ತಾಯ 28:19, 20; ಮಾರ್ಕ 16:15, 16; 2 ತಿಮೊಥೆ 2:2). ನಾಲ್ಕನೆಯದಾಗಿ, ಅದು ತನಗೆ ವಿಧೇಯರಾಗದವರಿಗೆ *ದಂಡನೆ* ಇರುತ್ತದೆಂಬದನ್ನು ಸೂಚಿಸುವಾಗಿದ್ದು, ನಮಗೆ ಭಯಪಡುವದಕ್ಕೆ ಕಾರಣವನ್ನು ಕೊಡುತ್ತದೆ (2 ಥೆಸಲೋನಿಕ 1:7-9; ಮತ್ತಾಯ 25:31, 46; ಇಬ್ರಿಯ 10:26-29 ಮತ್ತು 12:28, 29ರೊಂದಿಗೆ ಹೋಲಿಸಿರಿ).

ನಾವು ಕೇಳಿದ ಸುವಾರ್ತೆಗೆ **ತಪ್ಪಿ ಹೋದೇವೆಂದು ಭಯಪಟ್ಟು** ಅದಕ್ಕೆ ಹೆಚ್ಚಾಗಿ ಲಕ್ಷ್ಯಕೊಡುವವರಾಗಿರಬೇಕು. ಈ ಪದಗುಚ್ಛವು ವಿವಿಧ ರೀತಿಯಲ್ಲಿ ಅನುವಾದಿಸಲ್ಪಟ್ಟಿರುತ್ತದೆ: "ಅವುಗಳನ್ನು ಯಾವದೇ ಸಮಯದಲ್ಲಾದರೂ ತಪ್ಪಿ ಹೋಗುವಂತೆ ಬಿಡದಿರೋಣ" (KJV); "ತಪ್ಪಿ ಹೋಗದಿರೋಣ" (NKJV); ಮತ್ತು "ಹೀಗೆ ನಾವು ತಪ್ಪಿ ಹೋಗದಂತೆ" (NIV). ಈ ಹೇಳಿಕೆಯ ನಿಖರವಾದ ಅರ್ಥದ ಬಗ್ಗೆ ವಿವಾದವಿರುತ್ತದೆ. ನಾವು ಸುವಾರ್ತೆಯಿಂದ ತಪ್ಪಿ ಹೋಗುವೆವೋ ಅಥವಾ ಸುವಾರ್ತೆಯು ನಮ್ಮಿಂದ ತಪ್ಪಿ ಹೋಗುವದೋ? ಲೇಖಕನು ತನ್ನ ವಾಚಕರಿಗೆ "ಎಚ್ಚರಿಕೆಯಾಗಿರಿ!" ಎಂದು ಅಪ್ಪಣೆ ಕೊಡುವವನಾಗಿ ತನ್ನನ್ನು ಸಹ ಸೇರ್ಪಡೆಗೊಳಿಸಿಕೊಳ್ಳುತ್ತಾನೆ.

"ತಪ್ಪಿಹೋಗು" ಎಂಬುದನ್ನು ಅನುವಾದಿಸಿರುವ ಗ್ರೀಕ್ ಪದವು ಅಕ್ಷರಶಃ "ವೇಗವಾಗಿ ಹರಿದು ಹೋಗು" ಎಂದಾಗಿದ್ದು ಅದು ಹೊಸ ಒಡಂಬಡಿಕೆಯೊಳಗೆ ಇಲ್ಲಿ ಮಾತ್ರವೇ ಸಿಕ್ಕುತ್ತದೆ. (ಅದೇ ರೀತಿಯ ಇಬ್ರಿಯ ಪದವೊಂದನ್ನು ಜ್ಞಾನೋಕ್ತಿ 3:21ರಲ್ಲಿ ಬಳಸಲ್ಪಟ್ಟಿರುತ್ತದೆ.) ಅದು παραρρέω (*parareō*) ಎಂಬುದರ ಅನಿಶ್ಚಿತ ಭೂತಕಾಲ, ನಿಷ್ಕ್ರಿಯ, ಸಂಭಾವನಾರ್ಥಕರೂಪ ಆಗಿರುತ್ತದೆ. ಈ ತಪ್ಪಿಹೋಗುವದರ ಕುರಿತು ಹಲವಾರು ದೃಷ್ಟಾಂತಗಳು ಬಳಸಲ್ಪಟ್ಟಿರುತ್ತವೆ: ಒಂದು ಹಡಗು ತನ್ನ ಲಂಗರುದಾಣದಿಂದ ಜಾರಿಕೊಂಡು ತಪ್ಪಿಹೋಗಿ ತನಗೆ ನಾಶನವನ್ನು ತಂದುಕೊಳ್ಳುವದು; ಒಬ್ಬ ನಿರ್ಲಕ್ಷ್ಯದ ಈಜುಗಾರನ ಬೆರಳನಿಂದ ಒಂದು ಬೆಲೆ ಬಾಳುವ ಉಂಗುರವು ಜಾರಿ ಹೋಗುವದು; ಅಥವಾ ಒಬ್ಬ ದೀರ್ಘ-ಅಂತರದ ಓಟಗಾರನು ತನ್ನ ಪಥದಲ್ಲಿ ತಪ್ಪಾದ ತಿರುವು ತೆಗೆದುಕೊಳ್ಳುವದು. ಅಂಥ ತಪ್ಪಿಹೋಗುವಿಕೆಯ ದುರಂತವು 2002ರ ಮೇ ತಿಂಗಳಲ್ಲಿ ಕಣ್ಣಿಗೆ ಕಟ್ಟುವಂತೆ ದೃಷ್ಟಾಂತೀಕರಿಸಲ್ಪಟ್ಟಿತು, ಆ ವೇಳೆ ಒಂದು ಸರಕು ದೋಣಿಯು ತಪ್ಪಿಹೋಗುವಂತೆ ಬಿಡಲ್ಪಟ್ಟು (ಜಾರಿಕೊಂಡು) Oklahoma ಸೇತುವೆ ಅಪ್ಪಳಿಸಿತು. ಸೇತುವೆಯ ಒಂದು ಭಾಗವು ನದಿಯೊಳಗೆ ಕುಸಿದು ಬಿದ್ದಿತು, ಮತ್ತು ಆ ಕ್ಷಣದಲ್ಲಿ ಹಲವಾರು ಕಾರುಗಳು ನೀರಿನಲ್ಲಿ ಕುಸಿದು ಬಿದ್ದು ಅದರಲ್ಲಿದ್ದ ಪ್ರಯಾಣಿಕರು ಮುಳುಗಿ ಹೋಗಿದ್ದರು.

ಆದದರಿಂದ, ಈ ಪದವು ತಿಳಿಸುವ ಯೋಚನೆಯು ಏನೆಂದರೆ ನಾವು ನಮಗೆ ಕಲಿಸಲ್ಪಟ್ಟಿರುವದಕ್ಕೆ ಲಂಗರಿನಂತೆ ಅಂಟಿಕೊಂಡಿರತಕ್ಕದ್ದು ಮತ್ತು ಜೀವನದ ಹಡಗನ್ನು ಬಂದರಿನಿಂದ ಜಾರಿಕೊಂಡು ಹೋಗಿ ಒಡೆದು ಹೋಗುವಂತೆ ಎಂದಿಗೂ ಅನುಮತಿಸಬಾರದು. F. F. Bruce ಹೀಗೆ ಹೇಳುತ್ತಾನೆ, "ಈ ಕ್ರಿಯಾಪದದ ರೂಪಕವಾದ ನಿಖರ ಒತ್ತು ಏನೇ ಆಗಿದ್ದರೂ ಸರಿಯೇ, ನಮ್ಮ ಲೇಖಕನು ಸುವಾರ್ತೆಯನ್ನು ಆಲಿಸಿ ಅದನ್ನು ಸ್ವೀಕರಿಸಿಕೊಂಡಿದ್ದ ಕ್ರೈಸ್ತರಿಗೆ, ತಮ್ಮ ಅರಿಕೆಯನ್ನು ಬಿಟ್ಟು ಬಿಡುವ ಶೋಧನೆಗೆ ಒಳಪಡಿಸಿಕೊಳ್ಳುವದಾದರೆ ಅವರ ಹೋರಾಟವು ನಿರೀಕ್ಷೆಯಿಲ್ಲದ್ದೆಂದು ಎಚ್ಚರಿಸುತ್ತಿದ್ದಾನೆ."[1]

**ವಚನ 2. ದೇವದೂತರ ಮೂಲಕ ಹೇಳಲ್ಪಟ್ಟ ವಾಕ್ಯವು** ಎಂಬ ಪದಗುಚ್ಛವು ಒಂದು ವಿಷಯಾಂತರವಲ್ಲದ, ಆದರೆ ಈ ಮುಂಚೆ ನಡೆದಿರುವದಕ್ಕೆಲ್ಲಾ ಒಂದು ಪರಾಕಾಷ್ಠೆ ಹಾಗೂ ಅವಶ್ಯಕವಾದ ಮುಕ್ತಾಯವನ್ನು ಒದಗಿಸುವ ಒಂದು ವಿಭಾಗವನ್ನು ಆರಂಭಿಸುತ್ತದೆ. ಈ ಬುದ್ಧಿವಾದವು ಪತ್ರಿಕೆಯ ತಿರುಳಿಗೆ ಸಂಬಂಧಿಸಿದ್ದಾಗಿದ್ದು, ಅದೇನೆಂದರೆ ವಾಚಕರನ್ನು ನಂಬಿಕೆಯಿಂದ ಬಿದ್ದು ಹೋಗುವದರಿಂದ ತಪ್ಪಿಸುವದೇ ಆಗಿರುತ್ತದೆ.

ದೇವದೂತರು ಧರ್ಮಶಾಸ್ತ್ರವನ್ನು ಕೊಡುವದರಲ್ಲಿ ಸಹಾಯಕರಾಗಿದ್ದರೆಂಬುದು ಲೇಖಕನ ಕಾಲದಲ್ಲಿ ಸಾಮಾನ್ಯವಾಗಿ ಒಪ್ಪಿದ್ದ ಸಂಗತಿಯಾಗಿತ್ತು. ಈ ಯೋಚನೆಯು ಪ್ರೇರಿತ ಹೇಳಿಕೆಯಿಂದ ಅನುಮೋದನೆ ಹೊಂದಿರುತ್ತದೆ (ಅಪೊಸ್ತಲರ ಕೃತ್ಯಗಳು 7:38, 53; ಗಲಾತ್ಯ 3:19). ದೇವದೂತರು ಧರ್ಮಶಾಸ್ತ್ರದ ಕೊಡುವಿಕೆಯಲ್ಲಿ ಸಹಾಯವನ್ನು ಮಾಡಿದ್ದರು ಎಂಬುದು ಅರ್ಥಮಾಡಿಕೊಳ್ಳಲ್ಪಡದ ಸಂಗತಿಯಾಗಿದ್ದಲ್ಲಿ, ಯೇಸುವು ದೇವದೂತರಿಗಿಂತಲೂ ಶ್ರೇಷ್ಠನಾಗಿದ್ದಾನೆಂಬ ಲೇಖಕನ ವಾದವನ್ನು ವಾಚಕರು ಅಥವಾ ಶ್ರೋತೃಗಳು ಅನಗತ್ಯವೆಂದು ಪರಿಗಣಿಸಿರುತ್ತಿದ್ದರು.

"ದೇವದೂತರ ಮೂಲಕ ಹೇಳಲ್ಪಟ್ಟ ವಾಕ್ಯ"ವು **ತಿದ್ದಲ್ಪಡಲಾಗದ್ದು** (βέβαιος, *bebaios*) ಎಂದು ಹೇಳಲಾಗಿರುತ್ತದೆ, ಅಂದರೆ, "ಸ್ಥಿರವಾದದ್ದು" (NKJV), "ಉರ್ಜಿತವಾದದ್ದು" (RSV), ಅಥವಾ "ಬದ್ಧವಾದದ್ದು" (NIV). ಈ ಬಣ್ಣನೆಯು ಸೂಚಿಸುವದೇನೆಂದರೆ ಧರ್ಮಶಾಸ್ತ್ರದ ಕುರಿತಾದದ್ದೆಲ್ಲವನ್ನೂ ಅಕ್ಷರ ಸಮೇತವಾಗಿ ನೆರವೇರಿಸತಕ್ಕದ್ದು ಎಂಬದೆ; ಅವಿಧೇಯತೆಯು ನಿರ್ದಿಷ್ಟವಾದ ದಂಡನೆಗಳನ್ನು ಉಂಟು ಮಾಡುವದಾಗಿತ್ತು. ಅವಿಧೇಯರಿಗೆ ಕೊಡಲಾಗುತ್ತಿದ್ದ ದಂಡನೆಯ ಮೂಲಕ ಧರ್ಮಶಾಸ್ತ್ರವು ಉರ್ಜಿತವಾದದ್ದೆಂಬುದು ಸಾಬಿತಾಗಿತ್ತು. ಹಳೆಯ ಒಡಂಬಡಿಕೆಯ ಇತಿಹಾಸವು ಈ ವಾಸ್ತವಾಂಶವನ್ನು ವಿವರವಾಗಿ ತಿಳಿಸುತ್ತದೆ. ಈ ವಿಷಯದಲ್ಲಿ ಒಂದು ಸಂಗತಿಯೆಂದರೆ ದುಷ್ಟ ರಾಜರು ನೀತಿವಂತ ಅರಸರಿಗಿಂತಲೂ ಯಾವ ವ್ಯತ್ಯಾಸವೂ ಇಲ್ಲದೆ ಕ್ಲುಪ್ತವಾದ ಆಳ್ವಿಕೆಗಳನ್ನು ಹೊಂದಿದ್ದರು ಎಂಬದೆ.

ಅರಣ್ಯಕಾಂಡ 15:30ನೇ ವಚನವು ಪೂರ್ವಕಲ್ಪಿತವಾಗಿ ಮಾಡುವ ಪಾಪಗಳು, ಅಥವಾ "ಮೊಂಡುತನದಿಂದ" ಮಾಡುವ ಪಾಪಗಳಿಗೆ ಸಿಕ್ಕುವ ದಂಡನೆಗಳನ್ನು ತಿಳಿಸುತ್ತದೆ. ಆ ವಿಧವಾದ ಪಾಪವು ಬಹುಶಃ "ಇಚ್ಛಾಪೂರ್ವಕವಾಗಿ ಪಾಪ ಮಾಡುವದಕ್ಕೆ" ಸಮಾನವಾಗಿರಬಹುದು (ಇಬ್ರಿಯ 10:26). ಒಬ್ಬನು ದೇವರ ವಿರುದ್ಧವಾಗಿ ಪಾಪ ಮಾಡುತ್ತಿದ್ದಾನೆಂಬ ತಿಳುವಳಿಕೆಯಿದ್ದು ಸಹ ಬಂಡಾಯದಿಂದ ಪಾಪ ಮಾಡುವಂಥವನು ಕ್ಷಮಾಪಣೆಯ ಸಾಧ್ಯತೆಗೆ ಯಾವದೇ ಅಥವಾ ಸ್ವಲ್ಪ ಅವಕಾಶವನ್ನು ಕೊಟ್ಟಿರುವಂತೆ ಕಾಣುತ್ತದೆ. ಪ್ರತಿಯೊಂದು ಆಜ್ಞೆಯಲ್ಲಿ, ದೇವರು ಅವಿಧೇಯತೆಗೆ ಸಿಕ್ಕುವ ದಂಡನೆಯನ್ನು ಸೇರ್ಪಡೆಗೊಳಿಸಿದ್ದಾನೆ. ದೇವರ ಪರಿಶುದ್ಧ ಆಜ್ಞೆಗಳಿಗೆ ಪೂರ್ಣವಾಗಿ ಒಳಪಟ್ಟು ನಡೆಯುವಿಕೆಯ ಮೇಲೆ ಅತಿ ಹೆಚ್ಚು ಪ್ರಾಮುಖ್ಯತೆಯು ಕೊಡಲ್ಪಟ್ಟಿರುವದರ ಪ್ರಭಾವಕ್ಕೊಳಗಾಗದೆಯೇ ಒಬ್ಬನು ಧರ್ಮೋಪದೇಶಕಾಂಡವನ್ನು ಓದುವದಕ್ಕಾಗುವದಿಲ್ಲ (ಧರ್ಮೋಪದೇಶಕಾಂಡ 4:2; 28:1, 9, 14-46).

ಹಳೆಯ ಒಡಂಬಡಿಕೆಯು ಒಳಗೊಂಡಿರುವ ಮೂಲಭೂತವಾದ ವಿಷಯಗಳನ್ನು ಅದು ವಿಧೇಯರಾಗುವದರಿಂದ ಸಿಕ್ಕುವ ಆಶೀರ್ವಾದಗಳು ಮತ್ತು ಅವಿಧೇಯರಾಗುವದರಿಂದ ಸಿಕ್ಕುವ ಶಾಪಗಳ ಕುರಿತು ಮಾತಾಡುವಾಗ ಸ್ಫುಟವಾಗಿ ಮುಂದಿಡಲ್ಪಟ್ಟಿರುತ್ತವೆ (ಧರ್ಮೋಪದೇಶಕಾಂಡ 28:15-46). ಧರ್ಮಶಾಸ್ತ್ರವು ಮೃದುತ್ವವನ್ನು ಬೆಂಬಲಿಸಲಿಲ್ಲ, ಆದರೆ ನ್ಯಾಯಕ್ಕೆ ಉತ್ತೇಜನವನ್ನು ನೀಡಿತು. ಉದಾಹರಣೆಗೆ, ಈಗಿನ ಕಾಲದ ಕೆಲವು ನಾಗರಿಕತೆಗಳಲ್ಲಿರುವ "ಒಂದು ಕಣ್ಣಿಗೆ ಪ್ರತಿಯಾಗಿ ಎರಡು ಕಣ್ಣುಗಳು" ಎಂಬ ವಿಧಿಗೆ

ತದ್ವಿರುದ್ಧವಾಗಿ “ಕಣ್ಣಿಗೆ ಪ್ರತಿಯಾಗಿ ಕಣ್ಣು” ಎಂದು ನಿರ್ದಿಷ್ಟವಾಗಿ ತಿಳಿಸಲ್ಪಟ್ಟಿರುತ್ತದೆ (ನೋಡಿರಿ ಯಾಜಕಕಾಂಡ 24:19, 20).[2]

2ನೇ ವಚನದಲ್ಲಿ ಎರಡು ವಿಧವಾದ ಪಾಪಗಳು ಹೆಸರಿಸಲಾಗಿರುತ್ತದೆ. **ಮೀರಿ ಮಾಡಿದ ತಪ್ಪು**, ಅಥವಾ “ಮಿತಿಯನ್ನು ದಾಟಿ ಹೋಗುವದು,” ಇದು ದೇವರ ಧರ್ಮಶಾಸ್ತ್ರವು ನಿರ್ದಿಷ್ಟವಾಗಿ ನಿರ್ಬಂಧ ಮಾಡಿದ್ದ ಕಾರ್ಯವೊಂದನ್ನು ಒಬ್ಬನು ಅಸಡ್ಡೆ ಮಾಡಿದಾಗ ಸಂಭವಿಸಿತ್ತು. ಉದಾಹರಣೆಗೆ, ಧರ್ಮಶಾಸ್ತ್ರವು “ನರಹತ್ಯೆ ಮಾಡಬಾರದು” (ವಿಮೋಚನಕಾಂಡ 20:13) ಎಂದು ಹೇಳುತ್ತದೆ; ಒಬ್ಬ ಆ ನಿಯಮವನ್ನು ಮೀರಿದಾಗ, ಆತನನ್ನು ಮೀರಿ ತಪ್ಪು ಮಾಡಿದವನೆಂದು ಎಣಿಸಲಾಗುತ್ತಿತ್ತು.

**ಅವಿಧೇಯತ್ವ** ಎಂಬುದಕ್ಕಿರುವ ಪದವು ಅಕ್ಷರಶಃ “ಆಲಿಸದಿರುವದು,” ಅಥವಾ ಒಂದು ಅಸಡ್ಡೆಯ ಅಥವಾ ನಿರ್ಲಕ್ಷ್ಯದ ರೀತಿಯಲ್ಲಿ ಕೇಳಿಸಿಕೊಳ್ಳುವದು ಎಂದರ್ಥವಾಗಿದೆ. ಅದರಲ್ಲಿ ಆಜ್ಞಾಪಿಸಲ್ಪಟ್ಟ ನಿರ್ದಿಷ್ಟವಾದ ಕಾರ್ಯವನ್ನು ಮಾಡದಿರುವದು ಸೇರಿರುತ್ತದೆ. ಹೀಗೆ ಒಬ್ಬನು “ಸಬ್ಬತ್ ದಿನವನ್ನು ಜ್ಞಾಪಕದಲ್ಲಿಟ್ಟುಕೊಳ್ಳಲು ವಿಫಲನಾದಾಗ” (ವಿಮೋಚನಕಾಂಡ 20:8), ಆತನು “ಅವಿಧೇಯನಾಗುವವನಾಗಿದ್ದನು.”

ನಾವು ಪಾಪಗಳನ್ನು ಮಾಡದೆ ಬಿಡಲ್ಪಟ್ಟ ಮತ್ತು ಮಾಡಬಾರದ್ದನ್ನು ಮಾಡಿದ್ದು ಎಂದು ಸೂಚಿಸಬಹುದು. ಈ ಪದಗಳು ನಿರ್ದಿಷ್ಟವಾಗಿ ಬೈಬಲಿನಲ್ಲಿ ಬಳಲ್ಪಟ್ಟಿರುವದಿಲ್ಲವಾದರೂ, ಈ ಯೋಚನೆಯಂತೂ ಇರುತ್ತದೆ. ಎರಡೂ ವಿಧವಾದ ಪಾಪಗಳ ಕ್ಷಮಾಪಣೆಗಾಗಿ ಪ್ರಾರ್ಥಿಸುವದು ಸರಿಯಾದದ್ದು ಮತ್ತು ತಕ್ಕದಾದದ್ದು ಆಗಿದೆ. ನಾಶನದಲ್ಲಿರುವ ಅನೇಕರು ಪೂರ್ತಿಯಾಗಿ ಮೀರಿ ಮಾಡಿದ ತಪ್ಪುಗಳಿಗಾಗಿ ದಂಡಿಸಲ್ಪಡುವದಿಲ್ಲ, ಆದರೆ ಒಳ್ಳೇದನ್ನು ಮಾಡುವದಕ್ಕೆ ತಮಗಿದ್ದ ಸದವಕಾಶಗಳಲ್ಲಿ ವಿಫಲರಾಗಿದ್ದಕ್ಕೆ ದಂಡಿಸಲ್ಪಡುವರು – ಯಾಕೆಂದರೆ ಅದು ಸಹ ಪಾಪವಾಗಿದೆ (ಯಾಕೋಬ 4:17).

**ನ್ಯಾಯವಾದ ಪ್ರತಿಫಲವುಂಟಾ** [ಗುವದು] ಎಂಬುದು ಹಳೆಯ ಒಡಂಬಡಿಕೆಯಲ್ಲಿ ಸಾಕಷ್ಟು ದೃಷ್ಟಾಂತಗೊಳಿಸಲ್ಪಟ್ಟಿರುವ ಮೂಲತತ್ವವಾಗಿದೆ. ಒಬ್ಬ ಸುಳ್ಳುಸಾಕ್ಷಿ ಹೇಳುವವನನ್ನು ಆತನ ಸುಳ್ಳು ಸಾಕ್ಷಿಯಿಂದ ದಂಡನೆಯನ್ನು ಅನುಭವಿಸಿದವನ ರೀತಿಯಲ್ಲಿಯೇ ಅದೇ ದಂಡನೆಯನ್ನು ಅನುಭವಿಸಬೇಕಿತ್ತು (ಧರ್ಮೋಪದೇಶಕಾಂಡ 19:16-20). ಅಂಥ ವಿಧವಾದ ದಂಡನೆಯು ಖಂಡಿತವಾಗಿಯೂ “ನ್ಯಾಯವಾದದ್ದು.” ದುರಾಶೆಯುಳ್ಳ ಆಕಾನನು ಅವಿಧೇಯತೆಯ ಕಾರಣದಿಂದ ಕಲ್ಲೆಸೆದು ಕೊಲ್ಲಲ್ಪಟ್ಟನು (ಯೆಹೋಶುವ 7:24, 25). ಒಬ್ಬ ವೇಶ್ಯೆಯನ್ನು ಕಲ್ಲೆಸೆದು ಕೊಲ್ಲಬೇಕಿತ್ತು (ಧರ್ಮೋಪದೇಶಕಾಂಡ 22:21). ಹೊಸ ಒಡಂಬಡಿಕೆಯಲ್ಲಿ ದಂಡನೆಯು ಕಡಿಮೆ ಕಠಿಣವಾದದ್ದೆಂದು ಯೋಚಿಸದಿರಬೇಕೆಂದರೆ, ನಾವು ಅನನೀಯ ಮತ್ತು ಸಪ್ಪೈರಳ ಬಗ್ಗೆ ಗಮನಕ್ಕೆ ತಂದುಕೊಳ್ಳಬಹುದು (ಅಪೊಸ್ತಲರ ಕೃತ್ಯಗಳು 5:1-11). ಒಬ್ಬ ಮನುಷ್ಯನನ್ನು ದುರಾಶೆಯ ಕಾರಣದಿಂದ ಮರಣ ದಂಡನೆಗೊಳಪಡಿಸಿದ ಒಂದು ಉದಾಹರಣೆಯು ಹಳೆಯ ಒಡಂಬಡಿಕೆಯಲ್ಲಿರುತ್ತದೆ (ಯೆಹೋಶುವ 7), ಮತ್ತು ಅದೇ ಕಾರಣಕ್ಕಾಗಿ ಜನರು ಮರಣವನ್ನು ಅನುಭವಿಸುವ ಹೊಸ ಒಡಂಬಡಿಕೆಯ ಒಂದು ಉದಾಹರಣೆಯು ಇಲ್ಲಿರುತ್ತದೆ (ಅಪೊಸ್ತಲರ ಕೃತ್ಯಗಳು 5).

ನಮ್ಮ ದೇವರು “[ಪ್ರತಿಯೊಬ್ಬ ಮನುಷ್ಯನಿಗೂ] ಅವನ ಕೃತ್ಯಗಳಿಗೆ ಸರಿಯಾಗಿ ಪ್ರತಿಫಲವನ್ನು ಕೊಡುವ” ನ್ಯಾಯವಂತನಾದ ದೇವರಾಗಿದ್ದಾನೆ (2 ತಿಮೊಥೆ 4:14; ನೋಡಿರಿ ಪ್ರಕಟನೆ 20:13). ಆತನು ನಿಜವಾಗಿಯೂ “ಪಕ್ಷಪಾತಿಯಲ್ಲದ”ವನು (ಅಪೊಸ್ತಲರ ಕೃತ್ಯಗಳು 10:34). ಮೋಶೆಯ ಧರ್ಮಶಾಸ್ತ್ರವು ಕ್ರಿಸ್ತನ ಧರ್ಮಶಾಸ್ತ್ರಕ್ಕಿಂತ ಕಡಿಮೆಯಾದದ್ದಾಗಿತ್ತು,

ಆದಾಗ್ಯೂ ಧರ್ಮಶಾಸ್ತ್ರಕ್ಕೆ ಅವಿಧೇಯನಾದವನಿಗೆ ಕಟ್ಟುನಿಟ್ಟಾಗಿ ಮತ್ತು ಖಂಡಿತವಾಗಿ ದಂಡನೆಯನ್ನು ಕೊಡಲಾಗುತ್ತಿತ್ತು. ಹೊಸ ಒಡಂಬಡಿಕೆಯ ಅಡಿಯಲ್ಲಿ ಕಡಿಮೆ ದಂಡನೆಯೇನೂ ಇರುವದಿಲ್ಲ ಎಂಬುದನ್ನು ಹೋಲಿಕೆಯು ತೋರಿಸಿ ಕೊಡುತ್ತದೆ. ಇದು ಇಬ್ರಿಯರಿಗೆ ಪುಸ್ತಕವು ಬರೆಯಲ್ಪಡುವ ಸಮಯದಲ್ಲಿ ರಬ್ಬಿಗಳಲ್ಲಿ ಇರುತ್ತಿದ್ದ ಒಂದು ಸಾಮಾನ್ಯ ವಿಧವಾದ ತರ್ಕವಾಗಿತ್ತು; ಇದು ಲ್ಯಾಟಿನ್ ಭಾಷೆಯಲ್ಲಿ *a minori ad maius* ಎಂದು ಕರೆಯಲ್ಪಡುತ್ತದೆ.[3] ಇಬ್ರಿಯ ಭಾಷೆಯಲ್ಲಿ ಇದು *qal wachomer* ("ಹಗುರ ಮತ್ತು ಭಾರ" ಎಂದರ್ಥ). ಅಂಥ ತರ್ಕವು, "ಕಡಿಮೆಯಾದದ್ದರಿಂದ ಹೆಚ್ಚಾದದ್ದರ ಕಡೆಗೆ ಸಾಗುವದಾಗಿದ್ದು," "ಇನ್ನು ಎಷ್ಟೋ ಹೆಚ್ಚಾಗಿ" ಎಂಬ ತತ್ವವೆಂದು ಸಹ ಕರೆಯಲ್ಪಡಬಹುದು. ಕ್ರಿ.ಶ. ಮೊದಲ ಶತಮಾನದಲ್ಲಿ, ರಬ್ಬಿ Hillelನು ಧರ್ಮಶಾಸ್ತ್ರವನ್ನು ವ್ಯಾಖ್ಯಾನಿಸುವದಕ್ಕೆ ತನಗಿರುವ ಏಳು ನಿಯಮಗಳಲ್ಲಿ ಈ ತರ್ಕವನ್ನು ಸಹ ಪಟ್ಟಿ ಮಾಡಿದ್ದನು.[4]

ಒಬ್ಬನು ಹೊಸ ಒಡಂಬಡಿಕೆಯ ಅಡಿಯಲ್ಲಿ ತನ್ನ ಪಾಪಗಳಿಗೆ ಹಗುರವಾದ ದಂಡನೆ ಸಿಕ್ಕುವದೆಂದು ಯೋಚಿಸುವದಾದರೆ ಅದು ಆತನ ತಪ್ಪು ಕಲ್ಪನೆಯಾಗಿರುತ್ತದೆ. ದೇವರು ತನ್ನ ಅಪಾರವಾದ ಕೃಪೆಯಲ್ಲಿ, ದಂಡನೆಯ ಅಗತ್ಯವಿಲ್ಲದೆ ಪಾಪವನ್ನು ನಿರ್ಲಕ್ಷಿಸುವನೆಂದು ನಂಬುವದು ತಪ್ಪಾದದ್ದು. ನಿಜವಾಗಿಯೂ ಆತನ ಕೃಪೆಯು ಅಪಾರವಾದದ್ದೇ, ನಾವು ವರ್ಣಿಸಬಹುದಾದದ್ದಕ್ಕಿಂತಲೂ ಅಪಾರವಾಗಿರುತ್ತದೆ, ಆದರೆ ದೇವರ ಕನಿಕರದ ಕಾರಣದಿಂದ ಅಥವಾ ಮೀರುವಿಕೆಗಳನ್ನು ನಿರ್ಲಕ್ಷಿಸಲಾಗುವದು ಎಂಬ ಕಾರಣದಿಂದ ಒಬ್ಬನು ನಿರ್ಭೀತಿಯಿಂದ ಪಾಪ ಮಾಡಬಹುದೆಂದು ಊಹಿಸಿಕೊಳ್ಳಕೂಡದು. ಈಗಲೂ ವಿಧೇಯತೆಯ ಅಗತ್ಯವಿರುತ್ತದೆ. ಆದದರಿಂದ ಇಬ್ರಿಯರಿಗೆ ಪುಸ್ತಕವು ನಾವು ಪೂರ್ಣವಾಗಿ ಪಶ್ಚಾತ್ತಾಪ ಪಟ್ಟರೂ ಸರಿಯೇ ಪಡದಿದ್ದರೂ ಸರಿಯೇ, ನಮ್ಮ ಕನಿಕರವುಳ್ಳ ದೇವರು ನಮ್ಮ ಪಾಪಗಳನ್ನು ಮತ್ತು ದೋಷಗಳನ್ನು ನಿರ್ಲಕ್ಷಿಸುವನು ಎಂಬ ಸ್ವಚ್ಛಂದವಾದ ಯೋಚನೆಯನ್ನು ಮಾಡುವದಕ್ಕೆ ದೊಡ್ಡ ತಡೆಯಾಗುವದು. ದೇವರ ವಾಕ್ಯಕ್ಕೆ ವಿಧೇಯರಾಗುವದರ ಪ್ರಾಮುಖ್ಯತೆಯ ಬಗ್ಗೆ ಇಬ್ರಿಯರಿಗೆ ಪುಸ್ತಕದಲ್ಲಿ ಒಂದಕ್ಕಿಂತ ಹೆಚ್ಚು ಸಾರಿ ಒತ್ತಿ ಹೇಳಲ್ಪಟ್ಟಿರುತ್ತದೆ (ನೋಡಿರಿ 10:26-29; 12:25).

ದೇವರು ಮೂರ್ಖತನ ತಪ್ಪುಗಳನ್ನು ಕ್ಷಮಮಿಸುತ್ತಾನಾದ್ದರಿಂದ ಆತನು ಅಂಧಾಭಿಮಾನದ ದೋಷಗಳನ್ನು ದಾಟಿಕೊಂಡು ಹೋಗುವನೆಂಬದಾಗಿ ಎಲ್ಲಿಯೂ ಹೇಳಲ್ಪಟ್ಟಿಲ್ಲ. ನಮ್ಮೆಲ್ಲರಿಗೂ ಪಶ್ಚಾತ್ತಾಪದ ಹೃದಯಗಳ ಅಗತ್ಯವಿದೆ. ಯೇಸುವಿನ ರಕ್ತದಿಂದ ನಮ್ಮ ಆತ್ಮಗಳ ನಿರಂತರವಾದ ಶುದ್ಧಿಯನ್ನು ಹೊಂದಿಕೊಳ್ಳಬೇಕಾದರೆ (1 ಯೋಹಾನ 1:7-10), ನಾವು ದೇವರ ಚಿತ್ತವನ್ನು ಅರ್ಥಮಾಡಿಕೊಳ್ಳುವಾಗ ಅದಕ್ಕೆ ವಿಧೇಯರಾಗುವದಕ್ಕೆ ಹಂಬಲಿಸಬೇಕು. "ಯೇಸುವಿನ ಅದ್ಭುತವಾದ ಕೃಪೆಯು" ನಮ್ಮ ಪಾಪವನ್ನು ಅಲ್ಪ ಜಿಗಪ್ಸೆಯುಳ್ಳದ್ದಾಗಿ ಮಾಡುತ್ತದೆಂದು ಮತ್ತು ದಂಡನೆಯ ತೀರ್ಪಿಗೆ ಯೋಗ್ಯವಲ್ಲದ್ದನ್ನಾಗಿ ಮಾಡುತ್ತದೆಂದು ನಾವು ಯೋಚಿಸುವದಾದರೆ, ನಾವು ಅದನ್ನು "ಅಗ್ಗವಾದ ಕೃಪೆ"ಯನ್ನಾಗಿ ಮಾರ್ಪಡಿಸಿದ್ದೇವೆ ಮತ್ತು ನಮ್ಮನ್ನು ಮಿತಿಮೀರಿದ ಭರವಸೆಯುಳ್ಳ ಪಾಪಿಗಳನ್ನಾಗಿ ಮಾಡಿಕೊಳ್ಳುತ್ತೇವೆ. "ಗುಡಾರ"ದಲ್ಲಿದ್ದ ಪಾಪವು ದೇವರು ತನ್ನ ಸಭೆಯ ಮೂಲಕ ಮಾಡುವ ಕೆಲಸಕ್ಕೆ ಒಂದು ಅತ್ಯಂಥ ದೊಡ್ಡ ಅಡಚಣೆಯಾಗಿರುತ್ತದೆ.

**ವಚನ 3.** ನಮ್ಮ ಮುಂದಿಟ್ಟಿರುವ **ಈ ಅತ್ಯಂಥ ವಿಶೇಷ ರಕ್ಷಣೆಯನ್ನು ನಾವು ಅಲಕ್ಷ್ಯ ಮಾಡಿದರೆ ತಪ್ಪಿಸಿಕೊಳ್ಳುವದು ಹೇಗೆ?** ಈ ಪ್ರಶ್ನೆಯು ಇನ್ನೊಂದು ಪ್ರಶ್ನೆಯನ್ನೆಬ್ಬಿಸುತ್ತದೆ: ನಾವು ಯಾವದರಿಂದ ತಪ್ಪಿಸಿಕೊಳ್ಳೋಣ? ನಿತ್ಯವಾದ ಮರಣ ಎಂಬುದು ಸರಿಯಾದ

ವ್ಯಾಖ್ಯಾನವಾಗಿರತಕ್ಕದ್ದು; ಬೇರೆ ರೀತಿಯಲ್ಲಿ ಹೇಳಿದರೆ ಆ ವಾಕ್ಯಭಾಗದ ಒತ್ತನ್ನು ಕಡಿಮೆಗೊಳಿಸಿದಂತಾಗುತ್ತದೆ. ಪೇತ್ರನು ಕ್ರೈಸ್ತರಿಗೆ "ನಿಮ್ಮನ್ನು ಕರೆದದ್ದನ್ನು ದೃಢಪಡಿಸಿಕೊಳ್ಳಿರಿ" ಎಂದು ಬುದ್ಧಿವಾದ ಹೇಳುತ್ತಾನೆ (2 ಪೇತ್ರ 1:10). ಒಬ್ಬ ದೇವಮನುಷ್ಯನು ತನ್ನ ಕರೆಯುವಿಕೆಯು ಈಗಾಗಲೇ ಸಂಪೂರ್ಣ ಖಚಿತವೆಂದಾಗಿ ಇರುವದಾದರೆ ಏಕೆ ಆತನು ಕ್ರಿಸ್ತನು ನೀಡಿದ ಕರೆಯನ್ನು ದೃಢಪಡಿಸಿಕೊಳ್ಳಬೇಕು? Edgar J. Goodspeed ಅದನ್ನು ಈ ವಿಧವಾಗಿ ಹೇಳುತ್ತಾನೆ: "ಈ ಕಾರಣಕ್ಕಾಗಿಯೇ ನಾವು ಕೇಳಿರುವಂಥ ಸಂದೇಶಕ್ಕೆ ಅತ್ಯಂತ ಹೆಚ್ಚು ಸೂಕ್ಷ್ಮವಾದ ಗಮನವನ್ನು ಕೊಡಬೇಕು, ಅದರ ಮೇಲಿನ ನಮ್ಮ ಹಿಡಿತವನ್ನು ಎಂದಿಗೂ ಕಳಕೊಳ್ಳದಿರುವದಕ್ಕಾಗಿಯೇ."

ಎಬ್ಬಿಸಲ್ಪಟ್ಟ ಪ್ರಶ್ನೆಯು ಭಾವೋತ್ತೇಜಕವಾದದ್ದು, ಯಾಕೆಂದರೆ ಉತ್ತರವು ಸನ್ನಿವೇಶದಲ್ಲಿಯೇ ಇರುತ್ತದೆ ಮತ್ತು ಅದು ಬೇರೊಂದು ಕಡೆಯಲ್ಲಿ ಸ್ಪಷ್ಟವಾಗಿ ಕೊಡಲ್ಪಟ್ಟಿರುತ್ತದೆ. *ತಪ್ಪಿಸಿಕೊಳ್ಳುವ ದಾರಿಯೇ ಇಲ್ಲ!* ಎರಡನೆಯ ಥೆಸಲೋನಿಕ 1:8-10 ವಾಕ್ಯಭಾಗವು ಸುವಾರ್ತೆಗೆ ಅವಿಧೇಯರಾಗುವವರಿಗೆ ಏನು ಸಂಭವಿಸುವದೆಂಬುದನ್ನು ನಮಗೆ ತಿಳಿಯಪಡಿಸುತ್ತದೆ. ಕರ್ತನು ಹಿಂದಿರುಗಿ ಬರುವಾಗ, ಆತನು "ದೇವರನ್ನರಿಯವದರಿಗೂ ತನ್ನ ಸುವಾರ್ತೆಗೆ ಒಳಪಡದವರಿಗೂ ಪ್ರತೀಕಾರವನ್ನು ಸಲ್ಲಿಸುವನು. ಆ ದಿನದಲ್ಲಿ ಆತನು ತನ್ನ ಪವಿತ್ರರ ಮೂಲಕ ಪ್ರಭಾವ ಹೊಂದುವವನಾಗಿಯೂ ನಾವು ನಿಮಗೆ ಹೇಳಿದ ಸಾಕ್ಷಿಯನ್ನು ನಂಬಿದವರೆಲ್ಲರ ಮೂಲಕ ತನ್ನ ವಿಷಯದಲ್ಲಿ ಆಶ್ಚರ್ಯ ಹುಟ್ಟಿಸುವವನಾಗಿಯೂ ಬರುವಾಗ ಅಂಥವರು ಕರ್ತನ ಸಮ್ಮುಖಕ್ಕೂ ಆತನ ಪರಾಕ್ರಮದ ವೈಭವಕ್ಕೂ ದೂರವಾಗಿ ನಿತ್ಯನಾಶನವೆಂಬ ದಂಡನೆಯನ್ನು ಅನುಭವಿಸುವರು."

ಏಕೆ ಅಲ್ಲಿ ತಪ್ಪಿಸಿಕೊಳ್ಳುವದಕ್ಕೆ ಅವಕಾಶವೇ ಇರುವದಿಲ್ಲ? ಯಾಕೆಂದರೆ ಪಾಪಿಯು ಅತಿ ತಡವಾಗಿ ಹೋಗುವ ತನಕ ವಿಧೇಯನಾಗುವದನ್ನು ವಿಳಂಬ ಮಾಡಿರಬೇಕು ಅಥವಾ ತಾನು ಪಶ್ಚಾತ್ತಾಪ ಪಡುವದಕ್ಕೆ ಸಾಧ್ಯವಾಗದಷ್ಟು ತನ್ನ ಹೃದಯದಲ್ಲಿ ಕಠಿಣಗೊಂಡಿರಬಹುದಾಗಿದೆ. ಇವುಗಳಲ್ಲಿ ಯಾವದೇ ಸ್ಥಿತಿಯು ಪಾಪಿಗೆ ನಿರೀಕ್ಷೆಯನ್ನು ಸಂಪೂರ್ಣ ನಿರ್ನಾಮಗೊಳಿಸುತ್ತದೆ. ಸತ್ಯವಾಗಿಯೂ, ಯಜಮಾನನು ಬಾಗಲನ್ನು ಮುಚ್ಚಿ ಬಿಡುವ ಒಂದು ಹಂತ ಇರುತ್ತದೆ ಮತ್ತು ಹೊರಗೆ ನಿಂತುಕೊಂಡು ಪ್ರವೇಶಕ್ಕೆ ಅವಕಾಶ ಕೊಡುವಂತೆ ಬೇಡಿಕೊಳ್ಳುವವನ ಮೊರೆಯನ್ನು ನಿರಾಕರಿಸುವನು (ಲೂಕ 13:24-28).

ಕಡಿಮೆ ದರ್ಜೆಯ ಧರ್ಮಶಾಸ್ತ್ರವಾಗಿದ್ದ ಹಳೆಯ ಒಡಂಬಡಿಕೆಯ ಅಡಿಯಲ್ಲಿ ಮಿತಿಮೀರಿದ ಭರವಸೆಯಿಂದ ಮಾಡಿದ ಪಾಪಕ್ಕೆ ದಂಡನೆಯಿಂದ ತಪ್ಪಿಸಿಕೊಳ್ಳಲು ದಾರಿಯಿಲ್ಲವಾದರೆ, ಹೊಸ ಒಡಂಬಡಿಕೆಗೆ ಅವಿಧೇಯರಾಗುವವರಿಗೆ ತಪ್ಪಿಸಿಕೊಳ್ಳುವದಕ್ಕೆ ಯಾವದೇ ದಾರಿಯು ಇರುವದಕ್ಕೆ ಸಾಧ್ಯ? ಕ್ರಿಸ್ತನಲ್ಲದೆ ರಕ್ಷಣೆಯ ಬೇರೆ ಯಾವ ಮಾರ್ಗವೂ ಇರುವದಿಲ್ಲ; ನಾವು ಆತನನ್ನು ನಿರಾಕರಿಸುವದಾದರೆ, ನಮಗೆ ವಿಮೋಚನೆಯ ಯಾವ ನಿರೀಕ್ಷೆಯೂ ಇರುವದಿಲ್ಲ (ನೋಡಿರಿ 10:26; ಯೋಹಾನ 14:6).

ಜನರು ಸಕಾರಾತ್ಮಕವಾಗಿ ಯೇಸುವನ್ನು ತಿರಸ್ಕರಿಸದೆಯೇ ಅಥವಾ ಅಸಡ್ಡೆ ಮಾಡದೆಯೇ ನಾಶನಕ್ಕೆ ಹೋಗಬಲ್ಲರು. ನಾವು ಕ್ರಿಸ್ತನ "ಉಪದೇಶಗಳನ್ನು" ನಿರ್ಲಕ್ಷಿಸುವದಾದರೆ, ನಾಶನಕ್ಕೆ ಗುರಿಯಾಗುವದು ನಮ್ಮ ತೀರ್ಪಾಗುವದು. "ನಿರ್ಲಕ್ಷ" (ἀμελέω, *ameleō*) ಎಂಬ ಪದದ ಅರ್ಥವು "ಒಂದರ ಕುರಿತು ಅಲಕ್ಷ್ಯದಿಂದಿರುವದು." ನಾವು ಲೋಕದ ಯಾವದೇ ಆಸಕ್ತಿಯ ಬಗ್ಗೆ ಅಲಕ್ಷ್ಯದಿಂದಿದ್ದರೆ ಅದು ಅಭಿವೃದ್ಧಿಗೊಳ್ಳಲಾರದು. ನಮ್ಮ ಆತ್ಮೀಕ ಹಿತಾಸಕ್ತಿಯು ಅದಕ್ಕಿಂತ ವ್ಯತ್ಯಾಸವಾಗಿರಬೇಕೆಂದು ನಾವು ಏಕೆ ನಿರೀಕ್ಷಿಸಬೇಕು? ಒಬ್ಬನು ಕೊಲೆಗಾರ, ವ್ಯಭಿಚಾರಿ,

ಅಥವಾ ಕುಡಿಕನು ಆಗಿರುವದರಿಂದ ದೂರವಿರುವಾಗ, ಆತನಿಗೆ ತಾನು ನೀತಿವಂತನೆಂದು ನಿರ್ಣಯಿಸಲ್ಪಡುವದಕ್ಕೆ ಯಾವ ನೆಲೆಯೂ ಇರುವದಿಲ್ಲ. ಅಂಥದ್ದು "ನಾನು ಕಳ್ಳನಲ್ಲ, ನನ್ನ ವ್ಯಪಾರ ಅಭಿವೃದ್ಧಿಗೊಳ್ಳುವದು ಮತ್ತು ನಾನು ಸ್ವಲ್ಪ ಕಾಲದಲ್ಲಿಯೇ ಶ್ರೀಮಂತನಾಗುವೆನು" ಎಂದು ಹೇಳಿದಷ್ಟೆ ತಾರ್ಕಿಕವಲ್ಲದ್ದಾಗಿದೆ. ನಮ್ಮಿಂದ ಹೆಚ್ಚು ನಿರೀಕ್ಷಿಸಲ್ಪಡತಕ್ಕದ್ದು, ಯಾಕೆಂದರೆ ನಮಗೆ ಹಳೆಯ ಒಡಂಬಡಿಕೆಯ ಅಡಿಯಲ್ಲಿ ಜೀವಿಸಿದವರು ಕನಸು ಕಾಣಬಹುದಾದದ್ದಕ್ಕಿಂತಲೂ ಎಷ್ಟೋ ಹೆಚ್ಚು ಶ್ರೇಷ್ಠವಾದ ರಕ್ಷಣೆ ಮತ್ತು ನಿತ್ಯವಾದ ವಿಶ್ರಾಂತಿಗಳು ವಾಗ್ದಾನ ಮಾಡಲ್ಪಟ್ಟಿವೆ.

ಇಕ್ಕಟ್ಟಾದ ದಾರಿಯನ್ನು ಪ್ರವೇಶಿಸುವನು ಶ್ರದ್ಧೆಯನ್ನು ಅನ್ವಯಿಸಿಕೊಳ್ಳತಕ್ಕದ್ದು (ಲೂಕ 13:23, 24). ನಮ್ಮ "ಅತ್ಯಂತ ವಿಶೇಷ ರಕ್ಷಣೆ"ಯು ಇಡೀ ಲೋಕಕ್ಕಿಂತಲೂ ಹೆಚ್ಚು ಬೆಲೆಯುಳ್ಳದ್ದಾಗಿದೆ. ಅದು ಅತ್ಯಂತ ವಿಶೇಷವುಳ್ಳದ್ದು ಯಾಕೆಂದರೆ ಅದು ನಮ್ಮನ್ನು ಪಾಪದಿಂದ ಮತ್ತು ಅಪಾಯಗಳಿಂದ ರಕ್ಷಿಸುತ್ತದೆ ಹಾಗೂ ದೊಡ್ಡ ಪ್ರತಿಫಲಗಳನ್ನು ಉಂಟು ಮಾಡುತ್ತದೆ. "ಅದು ಎಷ್ಟೊಂದು ಅದ್ಭುತವಾದದ್ದೆಂದರೆ ಅದಕ್ಕೆ ತಕ್ಕಷ್ಟು ನ್ಯಾಯವನ್ನು ಒದಗಿಸುವದಕ್ಕೆ ಯಾವ ಭಾಷೆಯೂ ಸಾಕಾಗುವದಿಲ್ಲ."[5] ನಾವು ದೇವರ ರಕ್ಷಣೆಯ ಯೋಜನೆಯನ್ನು ತಿರಸ್ಕರಿಸುವದಾದರೆ ನರಕದ ನಿಜವಾದ ಅಪಾಯವಿರುತ್ತದೆ.

ಕ್ರೈಸ್ತತ್ವದ ಸತ್ಯವನ್ನು ತಮ್ಮಿಂದ ತಪ್ಪಿ ಹೋಗುವಂತೆ ಬಿಡಬಾರದೆಂದು ತನ್ನ ವಾಚಕರಿಗೆ ಎಚ್ಚರಿಕೆಯ ಮಾತನ್ನು ಹೇಳಿದ ಬಳಿಕ, ಲೇಖಕನು ದೇವರ ಸಂದೇಶದ ವಿಷಯದಕ್ಕೆ ಹಿಂದಿರುಗುತ್ತಾನೆ. 2:3, 4ರಲ್ಲಿ, ಆತನು ಅದರ ಮೌಲ್ಯವನ್ನು ಅರ್ಥಮಾಡಿಕೊಂಡನು.

**ಇದು ಕರ್ತನಿಂದ ಮೊದಲು ಹೇಳಲ್ಪಟ್ಟಿತು.** ಈ ಸಂದೇಶವು ವಿಶಿಷ್ಟವಾಗಿ ಕ್ರಿಸ್ತನದ್ದೇ ಆಗಿದೆ. ಖಂಡಿತವಾಗಿಯೂ, ಸತ್ಯದ ಪೂರ್ಣವಾದ ಸಂದೇಶವು ಮೊದಲು ಸ್ನಾನಿಕನಾದ ಯೋಹಾನನಿಂದ ಸಾರಲ್ಪಡಲಿಲ್ಲ, ಆದರೆ ಯೇಸುವಿನಿಂದಲೇ ಸಾರಲ್ಪಟ್ಟಿತು. ಸಭೆಯು ಯೋಹಾನನಿಂದ ಆರಂಭಗೊಳ್ಳಲಿಲ್ಲ ಮತ್ತು ಆರಂಭಗೊಂಡಿರಲು ಸಾದ್ಯವಿಲ್ಲ. ರಾಜ್ಯವು ಯೋಹಾನನ ಮರಣದ ಬಳಿಕ ಆರಂಭಗೊಂಡಿತು, ಮತ್ತು ಇದು ಯೇಸು ಏಕೆ "ಪರಲೋಕರಾಜ್ಯದಲ್ಲಿರುವ ಚಿಕ್ಕವನು ಅವನಿಗಿಂತಲೂ ದೊಡ್ಡವನೆಂದು" ಹೇಳಿದನೆಂಬುದನ್ನು ವಿವರಿಸುತ್ತದೆ (ಮತ್ತಾಯ 11:11). ಯೋಹಾನನ ಕುರಿತು ಯೇಸು ಮಾಡಿದ ಈ ಘೋಷಿಸುವಿಕೆಯು ಹಾಜರಿದ್ದ ಯೇಸುವಿನ ಶಿಷ್ಯರು ಪಂಚಾಶತ್ತಮದ ಬಳಿಕ ರಾಜ್ಯದ ಭಾಗವಾಗುವರು ಮತ್ತು ಆ ಕಾರಣದಿಂದ ಯೋಹಾನನಿಗಿಂತಲೂ ದೊಡ್ಡವರಾಗುವರು ಎಂಬುದನ್ನು ತೋರ್ಪಡಿಸುತ್ತದೆ. ಇದು ಯೇಸುವಿನ ಶಿಷ್ಯರು ಯೋಹಾನನಿಗಿಂತ ಉತ್ತಮವಾದ ಗುಣನಡತೆಯನ್ನು ಹೊಂದಿದ್ದರೆಂದು ಹೇಳುವಂತೆ ಅಲ್ಲ, ಆದರೆ ರಾಜ್ಯದಲ್ಲಿರುವವರು ಹೆಚ್ಚು ಶ್ರೇಷ್ಠವಾದ ಆಶೀರ್ವಾದಗಳನ್ನು ಹೊಂದಿದ್ದಾರೆಂದಷ್ಟೆ ಆಗಿದೆ. ಮತ್ತಾಯ 11:11ರಲ್ಲಿನ ಹೇಳಿಕೆಯು ಯಾವನಾದರೂ ಯೋಹಾನನ ವೈಯಕ್ತಿಕ ಶ್ರೇಷ್ಠತೆಯನ್ನು ಮೀರಿಸಿರುತ್ತಾನೆಂದು ಹೇಳಿಕೊಳ್ಳುವದರಿಂದ ನಮ್ಮನ್ನು ನಿರ್ಬಂಧಗೊಳಿಸುತ್ತದೆ.

ಹಳೆಯ ಒಡಂಬಡಿಕೆಯ ವಿಷಯದಲ್ಲಿದ್ದ ಹಾಗೆಯೇ ಸುವಾರ್ತೆಯು ಮೊದಲು ದೇವದೂತರ ಮೂಲಕ ಹೇಳಲ್ಪಟ್ಟಿದ್ದರೆ ಎಂಬುದಕ್ಕಿಂತಲೂ ಸುವಾರ್ತೆಯು ಮೊದಲು "ನಮ್ಮ ಕರ್ತನ ಮೂಲಕ" ಹೇಳಲ್ಪಟ್ಟಿತು ಎಂಬುದು ಹೆಚ್ಚು ಇದು ಪ್ರಭಾವಶಾಲಿಯಾಗಿರುತ್ತದೆ. ಯೆಹೂದಿಕರಣಗೊಳಿಸುವವರು ಹೀಗೆ ಹೇಳುತ್ತಿದ್ದಿರಬಹುದು, "ನಮ್ಮ ಧರ್ಮಶಾಸ್ತ್ರವು ದೇವದೂತರಿಂದ ಕೊಡಲ್ಪಟ್ಟಿದೆ ಮತ್ತು ಸುವಾರ್ತೆಯು ಮನುಷ್ಯರಿಂದ ಸಾರಲ್ಪಡುತ್ತಿದೆ." ಹೇಗೂ, ಹೊಸ ಒಡಂಬಡಿಕೆಯ ಮಧ್ಯಸ್ಥನು ಯೇಸುವೇ ಆಗಿದ್ದಾನೆ.

ಅರಸನಾದ ಕ್ರಿಸ್ತನು ಹತ್ತಿರದಲ್ಲಿದ್ದ ವೇಳೆ ರಾಜ್ಯವು ಹತ್ತಿರವಾಗಿತ್ತು; ಆತನು ರಾಜ್ಯದ

ಸಕಲ ತತ್ವಗಳನ್ನು ಬೋಧಿಸಿದನು, ಅದರ ಸ್ವಭಾವವನ್ನು ತನ್ನ ಗುಣನಡತೆಯ ಮೂಲಕ ತೋರ್ಪಡಿಸಿದನು, ಮತ್ತು ತನ್ನ ಸಂದೇಶವನ್ನು ತನ್ನ ಶಿಷ್ಯರಿಗೆ ಬಿಟ್ಟು ಹೋದನು. ಅವರು ಪವಿತ್ರಾತ್ಮನಿಂದ ಮಾರ್ಗದರ್ಶಿಸಲ್ಪಟ್ಟಂತೆ, ಅವರು ಅದನ್ನು ಅನ್ವಯಗೊಳಿಸುತ್ತಿದ್ದರು, ವಿಸ್ತರಿಸುತ್ತಿದ್ದರು, ಮತ್ತು ರಾಜ್ಯವು ಬಂದಾದ ಮೇಲೆ ಅದರನ್ನು ಸ್ಪಷ್ಟಗೊಳಿಸುತ್ತಿದ್ದರು. ಕೊಲೊಸ್ಸೆ 1:13ನೇ ವಚನವು ಕೊಲೊಸ್ಸೆಯಲ್ಲಿನ ದೇವಜನರನ್ನು ಆಗ ರಾಜ್ಯದೊಳಗೆ ಇರುವವರೆಂದು ಕರೆಯುತ್ತದೆ! ಯೇಸುವು ಇಲ್ಲಿ ಮತ್ತು 7:14ರಲ್ಲಿ "ಕರ್ತನು" ಎಂದು ಗುರುತಿಸಲ್ಪಟ್ಟಿದ್ದಾನೆ, ಅದರರ್ಥವು ಆತನು ತನ್ನ ರಾಜ್ಯದ ಮೇಲೆ ಆಳ್ವಿಕೆ ಮಾಡುವವನು ಎಂದಾಗಿದೆ (ಎಫೆಸ 5:5 ಸೂಚ್ಯಾರ್ಥವಾಗಿ ತಿಳಿಸುವ ಪ್ರಕಾರ, ತಂದೆಯಾದ ದೇವರ ಜೊತೆಗೂಡಿದವನಾಗಿ).

ಕರ್ತನಿಂದ ಕೊಡಲ್ಪಟ್ಟದ್ದಾಗಿ, ಸುವಾರ್ತೆಯು **ಆತನಿಂದ ಕೇಳಿದವರು ನಮಗೆ ಸ್ಥಿರಪಡಿಸಿದರು**. ಸುವಾರ್ತೆಯನ್ನು ಸ್ಥಿರಪಡಿಸುವ ಅಧಿಕಾರವು ಅಪೊಸ್ತಲರಿಗೆ ಯೇಸುವಿನಿಂದ ವಾಗ್ದಾನ ಮಾಡಲ್ಪಟ್ಟಿತು (ಮಾರ್ಕ 16:17, 18), ಮತ್ತು ಅವರು ಅದನ್ನು ಪೂರ್ಣವಾಗಿ ಬಳಿಸಿಕೊಂಡರು (ಮಾರ್ಕ 16:19, 20). ಇದು "ಪವಿತ್ರಾತ್ಮನ ವರಗಳಿಂದ"[6] ಅನುಗ್ರಹಿಸಲ್ಪಟ್ಟ ಅದ್ಭುತಕರವಾದ ಶಕ್ತಿಯ ಮೂಲಕ ಮಾಡಲ್ಪಟ್ಟಿತು. ಕ್ರಿಸ್ತನು ಮತ್ತು ಅಪೊಸ್ತಲರು ಸಾರಿದ ಹೊಸ ಸಂದೇಶವನ್ನು ನಿಜವೆಂದು ಸಾಭಿತುಪಡಿಸಿಕೊಳ್ಳಲು, ಅವರಿಗೆ ಸ್ವಾಭಾವಿಕವಾದ ಶಕ್ತಿಗಳು ಇರುವದು ಅವಶ್ಯಕವಾಗಿತ್ತು. ಇಬ್ರಿಯರಿಗೆ ಪುಸ್ತಕದ ಲೇಖಕನು ಕರ್ತನಿಂದ ಮಾತಾಡಲ್ಪಟ್ಟ ಈ ಸಂದೇಶವು ಪವಿತ್ರಾತ್ಮನ ಅದ್ಭುತಕರವಾದ ವರಗಳ ಮೂಲಕ ದೇವರಿಂದ ಗೋಚರವಾಗುವ ರೀತಿಯಲ್ಲಿ ಅನುಮೋದಿಸಲ್ಪಟ್ಟಿತೆಂಬುದನ್ನು ದೃಡೀಕರಿಸುತ್ತಾನೆ. ಹೊಸ ಸಂದೇಶವು ದೃಢೀಕರಿಸುವದಕ್ಕಾಗಿ ದೈವಿಕ ಶಕ್ತಿಯ ತೋರ್ಪಡುವಿಕೆಯನ್ನು ಅವಶ್ಯಕಗೊಳಿಸಿತು. ಉದಾಹರಣೆಗೆ, ಕರ್ತನು ಸಂಶಯವನ್ನು ವ್ಯಕ್ತಪಡಿಸಿದ್ದ ತೋಮನಿಗೆ ಪುನರುತ್ಥಾನಗೊಂಡ ಕರ್ತನು ಕಾಣಿಸಿಕೊಳ್ಳುವ ಕುರಿತು ಹೇಳುವ ಮೂಲಕ ಯೋಹಾನನು ತನ್ನ ಸುವಾರ್ತೆಯ ಬರವಣಿಗೆಯಲ್ಲಿ ಪರಾಕಾಷ್ಠೆಯನ್ನು ತಲುಪಿದ್ದನು. ತೋಮನು ಆ ಭಾನುವಾರದಂದು ಯೇಸುವನ್ನು ಕಂಡಾಗ, ಹೀಗೆ ಅರಿಕೆ ಮಾಡಿದನು, "ನನ್ನ ಸ್ವಾಮಿ [ಕರ್ತನು], ನನ್ನ ದೇವರು!" (ಯೋಹಾನ 20:28). ಬಳಿಕ ಯೋಹಾನನ ಹೇಳಲ್ಪಟ್ಟ ಪ್ರಮೇಯವು ಹೀಗೆ ಮುಂದುವರೆಯುತ್ತದೆ:

> ಯೇಸು ಇನ್ನು ಬೇರೆ ಎಷ್ಟೋ ಸೂಚಕಕಾರ್ಯಗಳನ್ನು ತನ್ನ ಶಿಷ್ಯರ ಮುಂದೆ ಮಾಡಿದನು. ಅವುಗಳು ಈ ಗ್ರಂಥದಲ್ಲಿ ಬರೆದಿರುವದಿಲ್ಲ. ಆದರೆ ಯೇಸು ದೇವಕುಮಾರನಾದ ಕ್ರಿಸ್ತನೆಂದು ನೀವು ನಂಬುವಂತೆಯೂ, ನಂಬಿ ಆತನ ಹೆಸರಿನ ಮೂಲಕವಾಗಿ ಜೀವವನ್ನು ಪಡಕೊಳ್ಳುವಂತೆಯೂ ಇಷ್ಟೆಲ್ಲಾ ಬರೆದದೆ (ಯೋಹಾನ 20:30, 31).

ನಾವು ಶಾಸ್ತ್ರಗಳನ್ನು ಓದಿ, ನಂಬಿದಾಗ, ಮತ್ತು ವಿಧೇಯರಾದಾಗ ಆ ಶಾಸ್ತ್ರಗಳಿಂದ ಸಂಪೂರ್ಣವಾದ ರಕ್ಷಣೆಯು ನಂಬಿಕೆ ಮೂಲಕ ಸಂಪಾದಿಸಿಕೊಳ್ಳಲ್ಪಡುತ್ತದೆ. ಆದುದರಿಂದ, ನಮಗೆ ನಂಬಿ ರಕ್ಷಣೆಯನ್ನು ಹೊಂದಿಕೊಳ್ಳುವದಕ್ಕೆ ಆಧುನಿಕ ಅದ್ಭುತಗಳ ಅಗತ್ಯತೆಯಿರುವದಿಲ್ಲ. ದೇವರು ಏಕೆ ಅನಗತ್ಯವಾದದ್ದನ್ನು ಮಾಡುವನು?

ಪುನರುತ್ಥಾನದ ಕುರಿತಾಗಿ ಪ್ರಾಚೀನ ಮತ್ತು ಆಧುನಿಕ ಸಂದೇಹವಾದಿಗಳ ಎಲ್ಲಾ ನಿರಾಕರಣೆಗಳು ಸಹ ಕರ್ತನ ಮರಣದ ಕೇವಲ ಐವತ್ತು ದಿನಗಳ ನಂತರದಲ್ಲಿ ಯೆರೂಸಲೇಮಿನೊಳಗೆ ಸಾವಿರಾರು ಜನರು ಆತನ ಪುನರುತ್ಥಾನವನ್ನು ನಂಬಿದರೆಂಬ

ವಾಸ್ತವಾಂಶವನ್ನು ಬದಲಾಯಿಸುವದಕ್ಕೆ ಸಾಧ್ಯವಿಲ್ಲ. ಆತನ ಪುನರುತ್ಥಾನದ ಕುರಿತು ಅವರಿಗೆ ಮನವರಿಕೆಯಾಗಿರಲಿಲ್ಲವಾದರೆ, ಯೆರೂಸಲೇಮಿನಲ್ಲಿ ಸಭೆಯು ಆರಂಭಗೊಂಡಿರುತ್ತಿರಲಿಲ್ಲ. ಇದು ಹೊಸ ಒಡಂಬಡಿಕೆಯು ಮುಖ್ಯ ಗಮನವನ್ನು ಕೊಡುವಂತಹ ಅತ್ಯಂಥ ದೊಡ್ಡ ಅದ್ಭುತವಾಗಿದೆ. ಇಬ್ರಿಯ 2:4ನೇ ವಚನವು ವಿವಿಧ ಆತ್ಮೀಕ ಶಕ್ತಿಗಳು ("ವರಗಳು") ಕೊಡಲ್ಪಟ್ಟಿರುವ ಉದ್ದೇಶವು ವಾಕ್ಯವನ್ನು ದೃಢೀಕರಿಸುವದಾಗಿದೆ ಎಂಬುದನ್ನು ಪುನರ್ದೃಢೀಕರಿಸುತ್ತದೆ. ಅದು ಸಾಧಿಸಲ್ಪಟ್ಟ ಬಳಿಕ, ಅಂಥ ಶಕ್ತಿಗಳು ಅನಂತರದ ಪೀಳಿಗೆಗಳಿಗೆ ಅನಾವಶ್ಯಕಗೊಂಡವು, ಅವರ ಬಳಿಯಲ್ಲಿ ಶಾಸ್ತ್ರಗಳಲ್ಲಿ ಪ್ರಕಟಗೊಂಡಿರುವ ಶಕ್ತಿಶಾಲಿ ವಾಕ್ಯವಿರುತ್ತದೆ.

**ವಚನ 4.** ಒಂದು ದೃಢೀಕರಿಸಲ್ಪಟ್ಟಿರುವ ಸಂದೇಶವು ನಿರಂತರವಾದ ಅದ್ಭುತಗಳ ಮೂಲಕ ಸತತವಾಗಿ ಪುನರ್ದೃಢೀಕರಿಸಲ್ಪಡುವ ಅಗತ್ಯವಿರುವದಿಲ್ಲ. ಅಮೆರಿಕದ ಉಚ್ಚ ನ್ಯಾಯಾಲವು ಒಂದು ನಿರ್ದಿಷ್ಟವಾದ ಪ್ರಕರಣದಲ್ಲಿ ಈ ಮುಂಚೆ ತೀರ್ಪೊಂದನ್ನು ಕೊಟ್ಟರೆ, ಸ್ಥಾಪಿಸಲ್ಪಟ್ಟ ತತ್ವವು ಸತ್ಯವಾದದ್ದಾಗಿ ಉಳಿಯುವದು ಮತ್ತು ಅದು ಯಾವದೇ ಕೆಳ ನ್ಯಾಯಾಲಯದಲ್ಲಿ ಸಹ ಅನ್ವಯವಾಗುವಂಥದ್ದು. ಅದೇ ರೀತಿಯಲ್ಲಿ, ದೇವರ ವಾಕ್ಯದ ಪ್ರಕಟಣೆಯು ಒಂದೇ ಸಾರಿ ಶಾಶ್ವತವಾಗಿ ದೃಢೀಕರಿಸಲ್ಪಟ್ಟಿರುತ್ತದೆ.

ಅದ್ಭುತಕರವಾದ ಸೂಚಕಕಾರ್ಯಗಳು ಅಪೊಸ್ತಲತ್ವದ ಪುರಾವೆಯಾಗಿತ್ತು (2 ಕೊರಿಂಥ 12:12) ಮತ್ತು ಎಲ್ಲಿಯ ತನಕ ಪುರಾವೆಯ ಅಗತ್ಯವಿತ್ತೋ ಅಲ್ಲಿಯ ತನಕ ಮುಂದುವರೆದವು. **ಸೂಚಕಕಾರ್ಯಗಳು** ಮತ್ತು **ಮಹತ್ಕಾರ್ಯಗಳು** ಇವುಗಳು ಒಂದೇ ಸಂಗತಿಯ ಬೇರೆ ಬೇರೆ ದೃಷ್ಟಿಕೋನಗಳಾಗಿದ್ದವು. ಒಂದು "ಸೂಚಕಕಾರ್ಯ"ವು ವೀಕ್ಷಿಸುವವನಿಗೆ ಅದ್ಭುತಕರವಾದ ಘಟನೆಯು ದೇವರ ಹಾಗೂ ಸಂದೇಶಕನ ಕುರಿತು ಒಂದು ಸಂದೇಶವನ್ನು ತಿಳಿಯಪಡಿಸಿತೆಂಬುದನ್ನು ಸೂಚಿಸುತ್ತದೆ. ಸೂಚಕಕಾರ್ಯಗಳು "ಮಹತ್ಕಾರ್ಯಗಳು" ಎಂದು ಕರೆಯಲ್ಪಟ್ಟವು ಯಾಕೆಂದರೆ ಅವುಗಳು ನೋಡುವವರ ಮನಸ್ಸುಗಳಲ್ಲಿ ಆಶ್ಚರ್ಯವನ್ನುಂಟು ಮಾಡುತ್ತಿದ್ದವು. ಅದ್ಭುತಗಳು ನಡಿಸಲ್ಪಡಲಿಲ್ಲ ಎಂಬದಾಗಿ ಯಾವನೂ ತಾರ್ಕಿಕವಾಗಿ ವಾದಿಸುವದಕ್ಕೆ ಸಾಧ್ಯವಿಲ್ಲ; ಅವರು ಕೇವಲ ಈ ಕಾರ್ಯಗಳು ಸೈತಾನನ ಅಧಿಕಾರದಿಂದ ಮಾಡಲ್ಪಡುತ್ತವೆಂದು ಆಕ್ಷೇಪಣೆಯನ್ನಷ್ಟೆ ಮಾಡಬಲ್ಲವರಾಗಿದ್ದರು (ಮತ್ತಾಯ 12:22-28).

**ಮಹತ್ಕಾರ್ಯಗಳು** ಮತ್ತು ಪ್ರಕಟನೆ ಜೊತೆಜೊತೆಯಾಗಿ ಸಾಗಿದವು ಯಾಕೆಂದರೆ ಹೊಸ ಪ್ರಕಟನೆಗೆ ಹೊಸ ದೃಢೀಕರಣದ ಅಗತ್ಯವಿರುತ್ತದೆ. ದೇವರು ಹೊಸ ಪ್ರಕಟನೆಯನ್ನು ಕೊಟ್ಟಾಗ, ಅದಕ್ಕೆ ದೈವಿಕ ಅನುಮೋದನೆಯಿರುತ್ತದೆಂಬುದನ್ನು ತೋರಿಸುವದಕ್ಕೆ ಸಂದೇಶ ಸಾರುವವನಿಗೆ ಶಕ್ತಿಗಳನ್ನು ಒದಗಿಸುತ್ತಿದ್ದನು. ಮೋಶೆಯು ಇಸ್ರಾಯೇಲ್ಯರ ಬಳಿಗೆ ಮತ್ತು ಐಗುಪ್ತ್ಯದ ಫರೋಹನ ಬಳಿಗೆ ಕಳುಹಿಸಲ್ಪಟ್ಟ ವೇಳೆ "ಮಹತ್ಕಾರ್ಯಗಳನ್ನು" ಮಾಡಿದನು (ವಿಮೋಚನಕಾಂಡ 4:1-9, 29, 30). ಎಲೀಷನು ನಾಮಾನನನ್ನು — ಆತನು ಅರಸನ ಬಳಿಕ ಎರಡನೆಯ ಸ್ಥಾನದಲ್ಲಿದ್ದ ಸಿರಿಯಾದ ಒಬ್ಬ ಸೇನಾನಾಯಕನಾಗಿದ್ದನು — ಮತ್ತು ಆತನಿಗೆ ದೇವರ ಶಕ್ತಿಯ ಕುರಿತು ಮನವರಿಕೆ ಮಾಡಿಕೊಟ್ಟನು. ನಿಸ್ಸಂಶಯವಾಗಿ, ಆತನ ಮೂಲಕವಾಗಿ, ಆತನ ದೇಶದವರಲ್ಲಿ ಕೆಲವರು ಸತ್ಯ ದೇವರಲ್ಲಿ ನಂಬಿಕೆಯಿಡುವವರಾದರು (2 ಅರಸು 5).

ಹೊಸ ಶಾಸ್ತ್ರ ಮತ್ತು ಮಹತ್ಕಾರ್ಯಗಳು ಜೊತೆ ಜೊತೆಯಾಗಿಯೇ ಸಾಗುತ್ತವೆಂಬುದನ್ನು ಎಷ್ಟು ಸಾರಿ ಒತ್ತಿ ಹೇಳಿದರೂ ಅದು ಅತಿಯಾಗುವದಿಲ್ಲ. ತನಗೆ ಮಹತ್ಕಾರ್ಯಗಳನ್ನು ಮಾಡುವ ಶಕ್ತಿಯೆಂದು ಹೇಳಿಕೊಳ್ಳುವವರಿಗೆ ಒಬ್ಬನು "ನಿನ್ನ ಹೊಸ ಶಾಸ್ತ್ರಗಳು ಎಲ್ಲಿ?" ಎಂದು ಸವಾಲು ಹಾಕಬಹುದು.[7] ಅದೇ ರೀತಿಯಲ್ಲಿಯೇ, "ಹೊಸ ಶಾಸ್ತ್ರ" ಬರೆಯುವವರಿಗೆ ಒಬ್ಬನು, "ಯೇಸು

ಮತ್ತು ಅಪೊಸ್ತಲರು ಮಾಡಿದ ಮಹತ್ಕಾರ್ಯಗಳಿಗೆ ಹೋಲಿಸಬಹುದಾದ ನಿನ್ನ ಮಹತ್ಕಾರ್ಯಗಳು ಎಲ್ಲಿ? ಉದಾಹರಣೆಗೆ, ನೀನು ಯಾರನ್ನು ಸತ್ತವರೊಳಗಿಂದ ಎಬ್ಬಿಸಿರುವಿ?" ಎಂದು ಕೇಳುವ ಮೂಲಕ ಸವಾಲು ಹಾಕಬಹುದು.

ಕ್ರಿಸ್ತನ ಸಂದೇಶವು ನಿಜವಾದ ಅದ್ಭುತಗಳಿಂದ ದೃಢೀಕರಿಸಲ್ಪಟ್ಟಿತು (ನೋಡಿರಿ ಯೋಹಾನ 20:30; ಮಾರ್ಕ 2:10-12). ಮಾರ್ಕ 2ನೇ ಅಧ್ಯಾಯದಲ್ಲಿನ ಅದ್ಭುತವು ಪಾಪಗಳನ್ನು ಕ್ಷಮಿಸುವದಕ್ಕೆ ಕ್ರಿಸ್ತನಿಗಿರುವ ಶಕ್ತಿ ಮತ್ತು ಅಧಿಕಾರಗಳನ್ನು ತೋರ್ಪಡಿಸಿತು. ಆತನು ಕುಂಟನನ್ನು ಗುಣಪಡಿಸುವದಕ್ಕೆ ಶಕ್ತನಾದ್ದರಿಂದ, ಅದು ಒಂದು ಅಸ್ವಾಭಾವಿಕವಾದ ಕ್ರಿಯೆಯೆಂಬುದು ಸ್ಪಷ್ಟವಾಗಿದ್ದು, ಆತನು ಸ್ವತಃ ದೇವರ ಸ್ಥಾನದಲ್ಲಿದ್ದುಕೊಂಡು ನಡೆದುಕೊಳ್ಳುತ್ತಿದ್ದಾನೆ ಮತ್ತು ಪಾಪಗಳನ್ನು ಕ್ಷಮಿಸುವದಕ್ಕೆ ಸಹ ಶಕ್ತನೆಂಬುದು ಸ್ಪಷ್ಟಗೊಂಡಿತ್ತು. ಅದ್ಭುತಕರವಾದ ಶಕ್ತಿಗಳು ಅವುಗಳನ್ನು ನಡಿಸುವವನು ದೇವರ ವಕ್ತಾರನಾಗಿದ್ದಾನೆಂಬುದಕ್ಕೆ ಪುರಾವೆಗಳಾಗಿದ್ದವು.

ದೈವಿಕ ಸಂದೇಶಗಳನ್ನು ಅದ್ಭುತಗಳ ಮೂಲಕವಾಗಿ ದೃಢೀಕರಿಸುವದು ಸಾರಭೂತವಾಗಿ ಇಬ್ರಿಯರಿಗೆ ಪುಸ್ತಕವನ್ನು ಬರೆಯುವ ಹೊತ್ತಿಗೆ ಗತವಾಗಿತ್ತು. ಇದು 2:2-4 ಮತ್ತು ಬೇರೆ ಕಡೆಯಲ್ಲಿ ಸೂಚ್ಯಾರ್ಥವಾಗಿ ತಿಳಿಸಲ್ಪಟ್ಟಿರುತ್ತದೆ (ನೋಡಿರಿ ಮಾರ್ಕ 16:20; ಯೋಹಾನ 20:30, 31). "ವಾಕ್ಯವನ್ನು ಸ್ಥಿರಪಡಿಸುವ" ಸೂಚಕಕಾರ್ಯಗಳು (ಮಾರ್ಕ 16:20) ಮಾರ್ಕನು ಬರೆಯುವ ಹೊತ್ತಿಗೆ ಪೂರ್ತಿಗೊಂಡಿದ್ದವು. ಈ ಬಲಪಡಿಸುವಿಕೆಗಳು, ಅಥವಾ **ಪವಿತ್ರಾತ್ಮವರಗಳು**, ಅವರಿಗೆ ಒದಗಿಸಲ್ಪಟ್ಟ ಅದ್ಭುತಕರವಾದ ಶಕ್ತಿಗಳು ವಾಕ್ಯವನ್ನು ಸಾಕಾಗುವಷ್ಟರ ಮಟ್ಟಿಗೆ ದೃಢೀಕರಿಸುವ ತನಕ ಇರತಕ್ಕವುಗಳಾಗಿದ್ದವು; ಬಳಿಕ ಅವುಗಳು ಗತಿಸಿ ಹೋಗಲಿದ್ದವು (1 ಕೊರಿಂಥ 13:8-10; ಎಫೆಸ 4:8-13). ದೇವರ ದೃಢೀಕರಿಸಲ್ಪಟ್ಟಿರುವ ಚಿತ್ತವು, ಅವಶ್ಯಕವಾದ ಮಾರ್ಗದರ್ಶನವನ್ನು ಒದಗಿಸಬಲ್ಲದ್ದಾಗಿದ್ದು, ಅದು "ವರಗಳ" ಅಗತ್ಯತೆಯನ್ನು ಅಂತ್ಯಗೊಳಿಸಿತು. ಪೌಲನು ಸಭೆಯಲ್ಲಿ ಬೇಕಾಗಿದ್ದ ಅತ್ಯಂಥ ದೊಡ್ಡ ಅಗತ್ಯತೆಯನ್ನು ತೋರಿಸುತ್ತಾನೆ, ಅದು ಪ್ರೀತಿಯೇ, ಈಗ ಅದು ನಮಗೆ (ಮತ್ತು ಮೊದಲ ಶತಮಾನದವರಿಗೆ) ಯಾವದೇ ಅದ್ಭುತಕರವಾದ ಶಕ್ತಿಗಿಂತಲೂ ಎಷ್ಟೋ ಹೆಚ್ಚು ಪ್ರಾಮುಖ್ಯವಾಗಿರುತ್ತದೆ. ಹೇಗೂ, ಇಬ್ರಿಯರಿಗೆ ಪುಸ್ತಕದ ವಾಚಕರಿಗೆ ಯೇಸುವು ಮಾಡಿದ ಅದ್ಭುತಗಳ ಬಗ್ಗೆ ಚೆನ್ನಾಗಿ ಗೊತ್ತಿತ್ತು. ಅವರಿಗೆ ಇನ್ನಾವದೆ ದೃಢೀಕರಣವು ಅಗತ್ಯವಿರಲಿಲ್ಲ, ಆದರೆ ಇನ್ನಷ್ಟು ಬೋಧನೆಯ ಅಗತ್ಯವಂತೂ ಇತ್ತು, ಅದನ್ನು ಈ ಪತ್ರಿಕೆಯು ಒದಗಿಸಿತ್ತು.

ಇಸ್ರಾಯೇಲ್ಯರು ಕಾನಾನ್ ದೇಶವನ್ನು ಪ್ರವೇಶಿಸಿದ ಬಳಿಕ ಪರಲೋಕದಿಂದ ಮನ್ನಾ ಬೀಳುವದು ನಿಂತು ಹೋದ ಪ್ರಕಾರವೇ, ಸಭೆಯು ವರಗಳ ಅಗತ್ಯವಿದ್ದ "ಶಿಸುತ್ವ"ವನ್ನು ಬಿಟ್ಟಾಗ ಮತ್ತು ವಾಕ್ಯದ ಮೂಲಕ ಪರಿಪಕ್ವಗೊಂಡ ಬಳಿಕ ಅದ್ಭುತಗಳು ನಿಂತು ಹೋದವು. ದೇವರು ತನ್ನ ಜನರಿಗೋಸ್ಕರ ನಿರಂತರವಾಗಿ ಅದ್ಭುತಗಳನ್ನು ಮಾಡಿದಂಥ ದೀರ್ಘವಾದ ಯುಗವೊಂದು ಎಂದಿಗೂ ಇರಲಿಲ್ಲ — ಮತ್ತು ಹಾಗಿರಬೇಕೆಂಬ ಇಂಗಿತವೂ ಇರಲಿಲ್ಲ. ಯೇಸುವು ಇಸ್ರಾಯೇಲ್ ಜನರೊಳಗೆ ಎಷ್ಟೋ ಮಂದಿ ಕುಷ್ಠರೋಗಿಗಳು ಇದ್ದಾಗ್ಯೂ ಅವರಲ್ಲಿ ಒಬ್ಬನಾದರೂ ಶುದ್ಧನಾಗದೆ ಸುರಿಯ (ಸಿರಿಯಾ) ದೇಶದವನಾಗ ನಾಮಾನನು ಮಾತ್ರ ಶುದ್ಧನಾದನು ಎಂಬುದನ್ನು ಉಲ್ಲೇಖ ಮಾಡುವ ಮೂಲಕ ಇದನ್ನು ತೋರಿಸಿ ಕೊಡುತ್ತಾನೆ (ಲೂಕ 4:27).

"ವರಗಳು" (μερισμός, *merismos*) ಅಂದರೆ "ವಿತರಣೆಗಳು" ಅಥವಾ "ಪಾಲು ಮಾಡುವಿಕೆಗಳು" ಎಂದರ್ಥವಾಗಿದೆ. ಈ ಪದವು ರೋಮಾ 1:11ರಲ್ಲಿ ಪೌಲನು ಬಳಸಿರುವ

"ಆತ್ಮೀಕವರಗಳು" (*χάρισμα*, *charisma*) ಎಂಬ ಪದದಂತೆಯೇ ಆಗಿರುವದಿಲ್ಲ. ಆ ಪದವು ಸಹ ಬಹುವಚನ ರೂಪವೊಂದನ್ನು ಹೊಂದಿದೆ, *charismata* (ನೋಡಿರಿ ರೋಮಾ 12:6; 1 ಕೊರಿಂಥ 1:7; 12:4, 9, 28, 30). ಇಬ್ರಿಯ 2:4ರಲ್ಲಿರು ಪ್ರತಿಯೊಂದ ಅಂಶವು ದೇವರ ಸಂದೇಶವನ್ನು ದೃಢೀಕರಿಸುವದರಲ್ಲಿ ಬಳಸಲ್ಪಟ್ಟಿರುತ್ತದೆ. ನಿಜ, *merismos* ಎಂಬ ಪದವು ಬೇರೊಂದು ಕಡೆಯಲ್ಲಿ "ಆತ್ಮೀಕವರಗಳು" ಎಂಬುದನ್ನು ಸೂಚಿಸುವದಕ್ಕೆ ಬಳಸಲ್ಪಟ್ಟಿರುವ *charisma* ಎಂಬ ಪದದಂತೆಯೇ ಆಗಿರುವದಿಲ್ಲ, ಆದರೆ ಒಂದು ಪದವು ಮತ್ತೊಂದನ್ನು ಒಳಗೊಂಡಿರಲಾರದು ಎಂಬುದನ್ನು ಅವಶ್ಯಕವಾಗಿ ಅನುಸರಿಸಬೇಕೆಂದಿಲ್ಲ.

ಸೂಚಕಕಾರ್ಯಗಳು ಅಪೊಸ್ತಲಿಕ ಅಧಿಕಾರಕ್ಕೆ ಒಂದು ಭಯಭಕ್ತಿಯುಳ್ಳ ಗೌರವವನ್ನು ಉಂಟು ಮಾಡಿದ್ದವು (ಅಪೊಸ್ತಲರ ಕೃತ್ಯಗಳು 2:43). ಅಪೊಸ್ತಲರ ಕೃತ್ಯಗಳು 6:6-8ರ ನಂತರದಲ್ಲಿ, ಅಪೊಸ್ತಲರು ವೈಯಕ್ತಿಕವಾಗಿ ಹೋದ ಕಡೆಗಳಲ್ಲೆಲ್ಲಾ ಅಂಥ ಶಕ್ತಿಗಳು ಅನುಗ್ರಹಿಸಲ್ಪಟ್ಟವು (ಅಪೊಸ್ತಲರ ಕತ್ಯಗಳು 8:14-17; 19:1-6; ರೋಮಾ 1:11; 1 ಕೊರಿಂಥ 12:8-10). ಅಪೊಸ್ತಲರು ಎಲ್ಲಿ ವೈಯಕ್ತಿಕವಾಗಿ ಹೋಗುವದಕ್ಕಾ ಗಲಿಲ್ಲವೋ ಅಥವಾ ಹೋಗಲಿಲ್ಲವೋ, ಅಂಥ ವರಗಳನ್ನು ಬೇರೆಯವರಿಗೆ ಅನುಗ್ರಹವಾಗುವಂತೆ ಮಾಡುವದಕ್ಕೆ ಅಧಿಕಾರ ಅಥವಾ ಶಕ್ತಿಯನ್ನು ಹೊಂದಿದವನು ಯಾವನೂ ಇರಲಿಲ್ಲ! ಯೇಸು ಮತ್ತು ಅಪೊಸ್ತಲರು ಸತ್ತವರನ್ನು ಎಬ್ಬಿಸಿದರು (ಅಪೊಸ್ತಲರ ಕೃತ್ಯಗಳು 9:36-43); ಇಂದು ಜೀವಿಸುತ್ತಿರುವ ಯಾವ ವ್ಯಕ್ತಿಯು ಅದನ್ನು ಮಾಡುವದಕ್ಕೆ ಸಾಧ್ಯವಿಲ್ಲ. ನಾವು ಸುಳ್ಳು ಅದ್ಭುತಗಳನ್ನು ಮಾಡುವವರ ಕುರಿತು ಯಾವಾಗಲೂ ಎಚ್ಚರಿಕೆಯಿಂದಿರತಕ್ಕದ್ದು, ಯಾಕೆಂದರೆ ಸತ್ಯದ ಮೇಲೆ ಪ್ರೀತಿಯಿಲ್ಲದವರು ಅದ್ಭುತ ಶಕ್ತಿಗಳಂತೆ ತೋರುವವುಗಳ "ಅಸತ್ಯ ನಡಿಸುವ ಭ್ರಮೆ"ಯಿಂದ ಸೆಳೆಯಲ್ಪಡುವಂತೆ ದೇವರು ಅನುಮತಿಸುವನು (2 ಥೆಸಲೋನಿಕ 2:9-11; ನೋಡಿರಿ ಮತ್ತಾಯ 7:21-23).

## ಕ್ರಿಸ್ತನ ಯಜ್ಞ ಮತ್ತು ಉನ್ನತ್ತಕ್ಕೇರಿಸಲ್ಪಡುವಿಕೆ (2:5-18)

### ಕ್ರಿಸ್ತನು ದೇವದೂತರಿಗಿಂತ ಕಡಿಮೆಯಾಗಿ ಮಾಡಲ್ಪಟ್ಟಿದ್ದು ಮತ್ತು ಮರಣವನ್ನು ಅನುಭವಿಸುವದು (2:5-8)

**5ನಾವು ಪ್ರಸ್ತಾಪಿಸುವ ಮುಂದಣ ಸಾಮ್ರಾಜ್ಯವನ್ನು ಆತನು ದೇವದೂತರಿಗೆ ಅಧೀನ ಮಾಡಲಿಲ್ಲವಲ್ಲಾ. 6ಶಾಸ್ತ್ರದ ಭಾಗದಲ್ಲಿ –**

**ಮನುಷ್ಯನು ಎಷ್ಟು ಮಾತ್ರದವನು; ಅವನನ್ನು ನೀನು ಯಾಕೆ ನೆನಸಬೇಕು?**
**ಮಾನವನು ಎಷ್ಟರವನು; ಅವನಲ್ಲಿ ಯಾಕೆ ಲಕ್ಷ್ಯ ವಿಡಬೇಕು?**
**7ಅವನನ್ನು ದೇವದೂತರಿಗಿಂತ ಸ್ವಲ್ಪವೇ ಕಡಿಮೆಯಾಗಿ ಮಾಡಿದಿಯಲ್ಲಾ;**
**ಪ್ರಭಾವವನ್ನೂ ಮಾನವನ್ನೂ ಅವನಿಗೆ ಕಿರೀಟವಾಗಿ ಇಟ್ಟೀ;**
**8ಎಲ್ಲವನ್ನೂ ಅವನ ಪಾದಗಳ ಕೆಳಗೆ ಹಾಕಿ ಅವನಿಗೆ ಅಧೀನಮಾಡಿದ್ದೀಯಲ್ಲವೇ**

**ಎಂದು ಸ್ಪಷ್ಟವಾಗಿ ಹೇಳಿದನು. ಆತನು ಎಲ್ಲವನ್ನೂ ಮನುಷ್ಯನಿಗೆ ಅಧೀನಮಾಡಿದನೆಂಬದರಲ್ಲಿ ಅವನಿಗೆ ಒಂದನ್ನಾದರೂ ಅಧೀನಮಾಡದೆ ಬಿಡಲಿಲ್ಲವೆಂದು ಹೇಳಿದ ಹಾಗಾಯಿತು; ಆದರೆ ಎಲ್ಲವೂ ಅವನಿಗೆ ಅಧೀನವಾಗಿರುವದನ್ನು ನಾವು ಇನ್ನೂ ಕಾಣುವದಿಲ್ಲ.**

**ವಚನ 5.** 2:1-4 ವಚನಗಳಲ್ಲಿ ಎಚ್ಚರಿಕೆಯ ಮಾತನ್ನು ಹೇಳಿದ ಬಳಿಕ, ಲೇಖಕನು

ದೇವದೂತರಿಗಿಂತ ಯೇಸು ಶ್ರೇಷ್ಠನು ಎಂಬ ವಾದದ ಕಡೆಗೆ ಹಿಂದಿರುಗುತ್ತಾನೆ.

**ಮುಂದಣ ಸಾಮ್ರಾಜ್ಯ** ಎಂಬುದು ನಾವಿ ಈಗ ಜೀವಿಸುವ ಮೆಸ್ಸೀಯನ ಯುಗವಾಗಿರುತ್ತದೆ (ನೋಡಿರಿ 6:5). ಇದು ಪರಲೋಕದಲ್ಲಿ ಯೇಸುವಿಗೆ ಅರಸನಾಗಿ ಕಿರೀಟಧಾರಣೆಯಾಗುವ ಮೂಲಕ ಆರಂಭಗೊಂಡಿತು ಮತ್ತು ಅಪೊಸ್ತಲರ ಕೃತ್ಯಗಳು 2ರಲ್ಲಿ ಪವಿತ್ರಾತ್ಮನು ಆ ರಾಜ್ಯವನ್ನು ಜಾರಿಗೆ ತರುವ ಮೂಲಕ ಅದು ಎಲ್ಲರಿಗೂ ಸ್ಪಷ್ಟಗೊಂಡಿತು. ಅನೇಕಾನೇಕರು ಏನೇ ಯೋಚಿಸಿದರೂ, ಯೇಸುವು ಈ ಯುಗದ ಮೇಲೆ ಆಳ್ವಿಕೆ ಮಾಡುವವನಾಗಿದ್ದಾನೆ (ಮತ್ತಾಯ 28:18). ಅಲ್ಲದೆ ಯೇಸುವಿನ ಸೇವಕರಾಗಿ ಅಪೊಸ್ತಲರು ದೇವಜನರ ಮೇಲೆ ಆಳ್ವಿಕೆಯನ್ನು ಮಾಡುವಂತಹ ಯುಗವೂ ಆಗಿರುತ್ತದೆ. ಅವರು ತಮ್ಮ ಪ್ರಭುತ್ವವನ್ನು ಹೇಗೆ ಸಾಧಿಸಿಕೊಂಡರು? ಅವರು ಪವಿತ್ರಾತ್ಮನಿಂದ ನಡಿಸಲ್ಪಟ್ಟವರಾಗಿ ಅವರ ಬರಹಗಳಲ್ಲಿ ಒದಗಿಸಲ್ಪಟ್ಟಿರುವ ಉಪದೇಶಗಳ ಮೂಲಕವೇ ಆಗಿದೆ (ಮತ್ತಾಯ 19:28).

"ಮುಂದಣ ಸಾಮ್ರಾಜ್ಯ" ಎಂಬ ಮಾತು ಯೇಸುವಿನ ಎರಡನೆಯ ಬರೋಣದ ನಂತರ ಕಾಲಕ್ಕೆ ಅನ್ವಯವಾಗುತ್ತದೆಂದು ಹೇಳುವದು ಇಬ್ರಿಯರಿಗೆ ಪುಸ್ತಕಕ್ಕೆ ಸಂಬಂಧಪಟ್ಟಂತೆ ಆ ಪದಗುಚ್ಛವನ್ನು ಅರ್ಥಹೀನಗೊಳಿಸಿದಂತಾಗುವದು. ಲೇಖಕನು ಮುಂದೆ ಯಾವಾಗಲೋ ಬರುವ ಭವಿಷ್ಯ ಸಹಸ್ರವರ್ಷಾಡಳಿತದಲ್ಲಿ ಅಲ್ಲ, ಆದರೆ ಈಗ ಯೇಸುವಿಗಿರುವ ಶ್ರೇಷ್ಠತೆಯನ್ನು ತೋರಿಸಿ ಕೊಡುತ್ತಿದ್ದಾನೆ.

**ನಾವು ಪ್ರಸ್ತಾಪಿಸುವ** ಎಂಬ ಪದಗುಚ್ಛವು ಇಬ್ರಿಯರಿಗೆ ಪುಸ್ತಕವು ಮೊದಲು ಒಂದು ಪ್ರಸಂಗದ ರೂಪದಲ್ಲಿ ಮಾತಾಡಲ್ಪಟ್ಟಿತ್ತೆಂಬುದಕ್ಕೆ ಒಂದು ಕುರುಹು ಆಗಿರುತ್ತದೆ. ಜಾಗ್ರತೆಯಿಂದ ಓದುವ ಯಾವನೇ ಆಗಲಿ ಇಬ್ರಿಯರಿಗೆ ಪುಸ್ತಕವು ಮೊದಲು ಒಂದು ಪ್ರಸಂಗವಾಗಿ ತಿಳಿಸಲ್ಪಟ್ಟಿತೆಂಬುದನ್ನು ಕಂಡು ಹಿಡಿಯುವದು ಸಾಧ್ಯವಿರುತ್ತದೆ.

**ವಚನ 6. ಒಬ್ಬನು ಒಂದು ಭಾಗದಲ್ಲಿ . . . ಸಾಕ್ಷಿ ಹೇಳಿದ್ದಾನೆ** ಎಂಬುದರ ಅರ್ಥವು ಕೀರ್ತನೆ 8:4-6 ಮೂಲ ಲೇಖಕನು ಅನಾಮಿಕನಾಗಿದ್ದನು, ಅಥವಾ ಮೂಲವು ಕೇವಲ ಪ್ರೇರಿತನಲ್ಲದ ಮಾನವ ಲೇಖಕನಾಗಿದ್ದನು ಎಂದಾಗಿರುವದಿಲ್ಲ. ಬದಲಾಗಿ, ಇಲ್ಲಿ ತಿಳಿಸಲಿಚ್ಛಿಸುವ ಅಂಶವೇನೆಂದರೆ ಸಂದೇಶವು ಬೇರೆ ಎಲ್ಲದಕ್ಕಿಂತಲೂ ಪ್ರಾಮುಖ್ಯವಾದದ್ದು ಎಂಬದೆ. ಇಬ್ರಿಯ 4:4ರಲ್ಲಿ ಅದೇ ರೀತಿಯ ಮಾತು ಬಳಸಲ್ಪಟ್ಟಿದೆ: "ಒಂದು ಸ್ಥಳದಲ್ಲಿ ಏಳನೆಯ ದಿವಸವನ್ನು ಕುರಿತು . . . ಬರೆದದೆ." ಲೇಖಕನಿಗೆ ವಾಕ್ಯಭಾಗದ ಮೂಲದ ಬಗ್ಗೆ ಗೊತ್ತಿತ್ತು ಎಂಬುದು ಸ್ಪಷ್ಟವಾಗಿರುತ್ತದೆ. Philo ಸಹ ಒಂದು ವಾಕ್ಯಾಭಾಗದ ಲೇಖಕನು ಯಾರೆಂಬುದನ್ನು ಖಚಿತವಾಗಿ ತಿಳಿದ ಸಂದರ್ಭದಲ್ಲಿ ಅಂತಹ ಪದಗಳನ್ನು ಬಳಸುತ್ತಿದ್ದನು.[8] ದೇವರೇ ಮೂಲನಾಗಿರುವಾಗ, ಒಬ್ಬನು ಮಾನವ ಲೇಖಕನನ್ನು ಗುರುತಿಸುವ ಅಗತ್ಯವಿಲ್ಲ.

**ಮನುಷ್ಯನು** (ಮನುಷ್ಯ ಕುಮಾರ) ಎಂಬುದು ಕೀರ್ತನೆ 8:4ರಿಂದ ತೆಗೆದುಕೊಂಡಿರುವ ಉಲ್ಲೇಖನವಾಗಿದ್ದು, ಕೀರ್ತನೆಯಲ್ಲಿ ಎಲ್ಲಾ ಮರ್ತ್ಯ ಮನುಷ್ಯರನ್ನು ಸೂಚಿಸುವದಾಗಿ ತೋರುತ್ತದೆ. ಕೆಲವರಿಗಾದರೋ, ಯೇಸು ತನಗೆ ಅನ್ವಯಪಡಿಸಿಕೊಳ್ಳುವ ನೆಚ್ಚಿನ ಮಾತಾಗಿದ್ದು ಅದನ್ನು ಕೀರ್ತನೆಗಾರನು ಪ್ರವಾದನಾತ್ಮಕವಾಗಿ ಹೇಳಿದನೆಂದು ತೋರುವ ಸಾಧ್ಯತೆಯು ಇರುತ್ತದೆ, ಆದರೆ ಇಬ್ರಿಯ ಪದ್ಯರೂಪಗಳ ಸಮಾನತೆಗಳ ಪ್ರಕಾರ ಈ ಪದಗುಚ್ಛವು ಕೇವಲ "ಮಾನವರಿಗೆ" ಮಾತ್ರವೇ ಸಲ್ಲುವಂತದ್ದು ಅಗತ್ಯವಿರುತ್ತದೆ. Bruce ಹೀಗೆ ಬರೆಯುತ್ತಾನೆ, "ವಾಸ್ತವಾಂಶವೇನೆಂದರೆ, ಯೇಸು ತನ್ನನ್ನು ಕುರಿತು ಮನುಷ್ಯಕುಮಾರನು ಎಂದು ಹೇಳಿಕೊಂಡ ಸಮಯದಿಂದಲೂ, ಈ ಮಾತು ಕ್ರೈಸ್ತರಿಗೆ ಅದರ ವ್ಯುತ್ಪತ್ತಿಶಾಸ್ತ್ರದ ಒತ್ತನ್ನು ದಾಟಿ ಅಧಿಕಾರ್ಥಗಳನ್ನು ಹೊಂದಿದ್ದಾಗಿದೆ, ಮತ್ತು ಅದು ಇಬ್ರಿಯರಿಗೆ ಪತ್ರಿಕೆಯ ಲೇಖಕನಿಗೆ

ಸಹ ಹೀಗೆಯೇ ಅಧಿಕಾರ್ಥವನ್ನು ಹೊಂದಿತ್ತು."[9]

ಬೇರೆ ಮಾತುಗಳಲ್ಲಿ ಹೇಳುವದಾದರೆ, "ಮನುಷ್ಯ ಕುಮಾರ" ಎಂಬ ಮಾತಿನ ಅರ್ಥವು "ಮನುಷ್ಯನು" ಎಂದಾಗಿತ್ತು, ಆದರೆ ಅದು ಕ್ರಿಸ್ತನು ಏನಾಗಿದ್ದಾನೆಂಬುದರ ಒಂದು ವಿಧವಾದ ವಿರುದ್ಧವಾದ ಮಾದರಿ ಸಹ ಆಗಿರುತ್ತದೆ.[10] "ಮನುಷ್ಯ ಕುಮಾರ" ಎಂಬುದು ಬೇರೆ ಕಡೆಯಲ್ಲಿ ಅನೇಕ ಸಾರಿ ಯೇಸುವಿಗೆ ಬಳಸಲ್ಪಟ್ಟಿರುವದರಿಂದ (ಉದಾಹರಣೆಗೆ, ದಾನಿಯೇಲ 7:13ರಲ್ಲಿ, ಮತ್ತು ಹೊಸ ಒಡಂಬಡಿಕೆಯಲ್ಲಿ ಎಂಭತ್ತು ಹೆಚ್ಚು ಸಾರಿ), ಈ ವಾಕ್ಯಭಾಗವು ಎರಡು ಅರ್ಥಗಳನ್ನು ಹೊಂದಿದ್ದು, ಮೊದಲ ಅನ್ವಯಿಕೆ ಮನುಷ್ಯನಿಗೆ ಮತ್ತು ಎರಡನೆಯದು ಕ್ರಿಸ್ತನಿಗೆ ಹಾಗೂ ಆತನ ಆಳ್ವಿಕೆಗೆ ಅನ್ವಯಿಸಲ್ಪಟ್ಟಿದೆ ಎಂಬ ಅಭಿಪ್ರಾಯ ಪಡುವದು ಇದಕ್ಕೆ ಪರಿಹಾರವಾಗಿರಬಲ್ಲದು. "ಮನುಷ್ಯ ಕುಮಾರ" ಎಂಬುದು ಮನುಷ್ಯರನ್ನು ಮಾತ್ರವೇ ಸೂಚಿಸುವದಾದರೆ, ಕೀರ್ತನೆಗಾರನಿಗೆ ಆಶ್ಚರ್ಯವುಂಟು ಮಾಡಿದ್ದೇನೆಂದರೆ ಅಲ್ಪನಾದ ಮನುಷ್ಯನ ಮೇಲೆ ದೇವರು ಅಂಥ ಕಳಕಳಿಯನ್ನು ಹೊಂದಿದ್ದನಲ್ಲಾ ಮತ್ತು ಆತನಲ್ಲಿ ಅಷ್ಟೊಂದು ಆಸಕ್ತಿಯನ್ನು ತೋರಿಸಿದ್ದಾನಲ್ಲಾ ಎಂಬದೆ.[11]

೨ನೇ ವಚನದಲ್ಲಿ ಸಾಮಾನ್ಯ ಮನುಷ್ಯ ಮತ್ತು ದೇವರು ಸಮಸ್ತದ ಮೇಲೆ – ಮರಣ ಸೇರಿದಂತೆ (೮ನೇ ವಚನವು ಸೂಚಿಸುವ ಪ್ರಕಾರ ಅದು ಮಾನವನಿಗೆ ಇನ್ನೂ ಅಧೀನಪಡಿಸಲ್ಪಡದ ಒಂದು ಕಾರ್ಯವಾಗಿದೆ) – ಒಡೆಯನಾಗಿ ಇಟ್ಟಿರುವ ಕ್ರಿಸ್ತನ ನಡುವೆ ವಿರುದ್ಧ ಹೋಲಿಕೆಯು ಮಾಡಲ್ಪಟ್ಟಿದೆ. ಯೇಸು ಮನಃಪೂರ್ವಕವಾಗಿ ದೇವರ ಚಿತ್ತಕ್ಕೆ ತಾನು ಅಧೀನವಾಗುವದರೊಳಗೆ ಮರಣವನ್ನು ಭಾಗವಾಗಿ ಸೇರಿಸಿಕೊಂಡಿದ್ದನು. ಆತನು ನಮ್ಮಂತೆಯೇ, ಮರಣಿಸಬೇಕಾಯಿತು. 7 ಮತ್ತು 9 ವಚನಗಳು ಆತನು ದೇವದೂತರಿಗಿಂತ "ಸ್ವಲ್ಪವೇ [ಸ್ವಲ್ಪ ಕಾಲ] ಕಡಿಮೆಯಾಗಿ" ಮಾಡಲ್ಪಟ್ಟನು ಎಂದು ಹೇಳುತ್ತವೆ, ಅದು ಆತನು ಭೂಮಿಯಲ್ಲಿದ್ದ ಸಮಯವನ್ನು ಸೂಚಿಸತಕ್ಕದ್ದಾಗಿದೆ.

ಯೇಸುವಿನ ಕರ್ತೃತ್ವದ ಕುರಿತ ಅಭಿಪ್ರಾಯವು ಶಾಸ್ತ್ರಗಳಲ್ಲಿನ ಬೇರೆ ಭಾಗಗಳಿಗೆ ವ್ಯತೀರಿಕ್ತವಾಗಿರುವದಿಲ್ಲ, ಆದರೆ ಅದು ನಮಗೆ ಉತ್ತರ ಹೇಳುವದಕ್ಕಾಗದಂತಹ ಪ್ರಶ್ನೆಗಳನ್ನು ಎಬ್ಬಿಸುತ್ತದೆ. ಉದಾಹರಣೆಗೆ, ದೇವದೂತರು ಆತನನ್ನು ಕಾಪಾಡುವರು (ಮತ್ತಾಯ 4:5, 6; ನೋಡಿರಿ ಕೀರ್ತನೆ 91:11, 12), ಆದರೆ ಅವರು ಆತನ ಆಜ್ಞೆಯಿಂದ ಹಾಗೆ ಮಾಡಿದರೋ ಅಥವಾ ತಂದೆಯಿಂದ ಕೊಡಲ್ಪಟ್ಟ ಕೆಲಸವಾಗಿ ಮಾಡಿದರೋ? ನಿಶ್ಚಯವಾಗಿಯೂ, ಆತನು ಅವರ ಸಹಾಯವನ್ನು ಆಜ್ಞಾಪಿಸಿ ಕೇಳಿರಬಹುದಿತ್ತು, ಯಾಕೆಂದರೆ ಅವರು ಗೆತ್ಸೇಮನೆಯಲ್ಲಿ ಆತನಿಗೆ ಉಪಚಾರವನ್ನು ಮಾಡುತ್ತಾರೆ (ಲೂಕ 22:43); ಆದರೆ ದೇವದೂತರ ಸಹಾಯಕ್ಕಾಗಿ "ನನ್ನ ತಂದೆಯನ್ನು ಬೇಡಿಕೊಳ್ಳಬೇಕು" ಎಂದು ಹೇಳಿದನು (ಮತ್ತಾಯ 26:53). ಆತನಿಗೆ ಅವರ ಮೇಲೆ ಅಧಿಕಾರವಿದ್ದಿದ್ದರೆ, ಆತನು ತಂದೆಯ ಮೂಲಕ ಹೋಗದೆಯೇ ಅವರಿಗೆ ಆಜ್ಞೆಯನ್ನು ಕೊಟ್ಟಿರುವದಕ್ಕೆ ಸಾಧ್ಯವಿರಲಿಲ್ಲವೋ?

ದೇವರು ಸೃಷ್ಟಿ ಮಾಡಿರುವ ಅಮೋಘವಾದ ವಿಶ್ವಕ್ಕೆ ಹೋಲಿಸಿದರೆ ಮನುಷ್ಯನು ದೂಳಿನ ಕಣದ ಮೇಲಿರುವ ಒಂದು ದೂಳಿನ ಕಣವೇ ಹೊರತು ಮತ್ತೇನಲ್ಲ. "ಸೂರ್ಯನಿಂದ ಮೂರನೆಯ ಬಂಡೆಯಾದ" ನಮ್ಮನ್ನು "ಭೇಟಿ ಮಾಡಿದ" ಸರ್ವಶಕ್ತನಾದ ಸೃಷ್ಟಿಕರ್ತನು ನಮ್ಮ ಮೇಲೆ ಸುರಿಸಿರುವ ಕೃಪೆ ಮತ್ತು ಮಹಿಮೆಗಳು ಎಷ್ಟು ಆಶ್ಚರ್ಯವಾದವುಗಳು! ಖಂಡಿತವಾಗಿಯೂ, ಬೇರೆಯವುಗಳಿಗೆ ಹೋಲಿಸಿದರೆ ಚಿಕ್ಕದಾದ ನಮ್ಮ ಗ್ರಹಕ್ಕೆ ಆತನು ನೀಡಿದ ಭೇಟಿಯ (ನೆನಸುವಿಕೆಯ) ಮುಕುಟಪ್ರಾಯವಾದ ಅಂಶವೆಂದರೆ ಕ್ರಿಸ್ತನ ಬರೋಣವೇ ಆಗಿತ್ತು. ನಮ್ಮ ಮಹತ್ವವಿಲ್ಲದಿರುವಿಕೆಯ ಹೊರತಾಗಿಯೂ, ದೇವರು ನಮ್ಮನ್ನು "ಭೇಟಿ ಮಾಡಿದನು" (ವ. 6;

KJV).

ದೇವರು **ಮನುಷ್ಯನ ಕುರಿತು ಕಳಕಳಿಯುಳ್ಳವನು** ಎಂದು NASBಯು ಹೇಳುತ್ತದೆ, ಅದು ಮೂಲ ಪದಕ್ಕೆ ಒಪ್ಪುವಂತೆ ಉತ್ತಮವಾಗಿ ಭಾವಾನುವಾದವನ್ನು ಒದಗಿಸುತ್ತದೆ. ಆತನು ಸುಮ್ಮನೆ "ಹಾಗೇ ಭೇಟಿ"[12] ಮಾಡುವದಕ್ಕಿಂತಲೂ ಹೆಚ್ಚಿನದನ್ನು ಮಾಡುವಾತನಾಗಿದ್ದಾನೆ. ಯಾಕೋಬ 1:27ನೇ ವಚನವು ದಿಕ್ಕಿಲ್ಲದವರನ್ನು ಮತ್ತು ವಿಧವೆಯರನ್ನು "ಭೇಟಿ ಮಾಡಬೇಕು" ಎಂದರೆ ಅಂಥ ವ್ಯಕ್ತಿಗಳನ್ನು ಹೋಗಿ ನೋಡುವದಕ್ಕಿಂತಲೂ ಹೆಚ್ಚಿನದ್ದಾಗಿದೆ ಎಂಬುದನ್ನು ಸೂಚಿಸುತ್ತದೆ; ಅದರಲ್ಲಿ ಅವರನ್ನು "ಪರಾಮರಿಸುವದು" ಸೇರಿರುತ್ತದೆ. "ಯೋಸೇಫನು ತನ್ನ ಸಹೋದರರಿಗೆ – ನನ್ನ ಅವಸಾನಕಾಲ ಸಮೀಪಿಸಿತು. ಆದರೆ ದೇವರು ನಿಶ್ಚಯವಾಗಿ ನಿಮ್ಮನ್ನು ಪರಾಂಬರಿಸಿ ["ನಿಮ್ಮನ್ನು ಭೇಟಿಮಾಡುವನು"; KJV] ಈ ದೇಶದಿಂದ ತಾನು ಅಬ್ರಹಾಮ್ ಇಸಾಕ್ ಯಾಕೋಬರಿಗೆ ಕೊಡುತ್ತೇನೆಂದು ಪ್ರಮಾಣವಾಗಿ ಹೇಳಿದ ದೇಶಕ್ಕೆ ನೀವು ಹೋಗಿ ಸೇರುವಂತೆ ಮಾಡುವನೆಂದು ತಿಳಿದುಕೊಳ್ಳಿರಿ ಎಂದು ಹೇಳಿದನು" (ಆದಿಕಾಂಡ 50:24). ಒಂದು "ಭೇಟಿ"ಯು ದೇವರು ತನ್ನ ಜನರ ಮೇಲೆ ಆಶೀರ್ವಾದಗಳನ್ನು ತರುವ ಒಂದು ವಿಶೇಷ ಕ್ರಿಯೆಯಾಗಿತ್ತು; ಇದು ಯೇಸುವಿನ ಬರೋಣದ ಮೂಲಕ ಮಾನವರಿಗೆ ಮಾಡಲ್ಪಡುವದಾಗಿತ್ತು. "ದೇವರು ಯೇಸುವಿನ ಮಹತ್ವವಿಲ್ಲದಿರುವಿಕೆಯ ಕಾರಣದಿಂದ ಆತನನ್ನು ಭೇಟಿ ಮಾಡುವನು" ಎಂದು ಹೇಳುವದು ಅತ್ಯಂಥ ಎಡವಟ್ಟಾಗಿ ತೋರುತ್ತದೆ. Robert Milligan ಹೀಗೆ ಹೇಳುತ್ತಾನೆ, "ಕೆಲವರು ವಾದಿಸಿರುವ ಪ್ರಕಾರ, ಇದು ಸಾಮಾನ್ಯವಾಗಿ ಮಾನವರನ್ನು ಸೂಚಿಸುತ್ತದೆ ಮತ್ತು ವೈಯಕ್ತಿಕವಾಗಿ ಯೇಸು ಕ್ರಿಸ್ತನಿಗೆ ಅಲ್ಲ ಎಂಬುದು, ಸ್ವತಃ [ಕೀರ್ತನೆ 8], ಮಾತ್ರವಲ್ಲದೆ ಅಪೊಸ್ತಲರ ವಾದದಿಂದ ಸ್ಪಷ್ಟವಾಗಿರುತ್ತದೆ."[13]

**ವಚನಗಳು 7, 8. ನೀನು ಅವನನ್ನು [ಮನುಷ್ಯ] ದೇವದೂತರಿಗಿಂತ ಸ್ವಲ್ಪವೇ** [ಸ್ವಲ್ಪ ಕಾಲ] **ಕಡಿಮೆಯಾಗಿ ಮಾಡಿದಿಯಲ್ಲಾ** (ವ. 7). ಇದು ಕೀರ್ತನೆ 8:5 ರಿಂದ ತೆಗೆದುಕೊಂಡಿರುವ ಉಲ್ಲೇಖನವಾಗಿದೆ. "ದೇವದೂತರು" ಎಂಬುದನ್ನು ಅನುವಾದಿಸಿರುವ ಪದವು ಇಬ್ರಿಯ ವಾಕ್ಯಭಾಗದಲ್ಲಿ "ದೇವರುಗಳು" (אֱלֹהִים, *'elohim*), ಆದರೆ ಈ ಪದದ ಅರ್ಥವು "ದೈವಿಕ ಜೀವಿಗಳು" ಎಂದು ಸಹ ಆಗಿರಬಲ್ಲದು. ಇದು LXXವು "ದೇವದೂತರು" ಎಂದು ಅನುವಾದ ಮಾಡುವ ಮೂಲಕ ಕೀರ್ತನೆಗೆ ಸರಿಯಾದ ಯೋಚನೆಯನ್ನು ಒದಗಿಸಿದೆಯೆಂಬುದನ್ನು ತೋರಿಸುತ್ತದೆ. NASBಯು ಕೀರ್ತನೆ 8:5ರಲ್ಲಿ *'elohim*ನ್ನು "ದೇವರು" ಎಂದು ಅನುವಾದಿಸುತ್ತದೆ, ಆದರೆ KJVಯಲ್ಲಿ "ದೇವದೂತರು" ಎಂದಿರುತ್ತದೆ.

ಮನುಷ್ಯನು ಈ ಜೀವನದಲ್ಲಿರುವ ವೇಳೆ ನಿರಂತರವಾಗಿ ದೇವದೂತರಿಗಿಂತ ಕಡಿಮೆಯಾದವನಾಗಿರುತ್ತಾನೆ. ಈ ಕಾಲವನ್ನು ನಿತ್ಯತ್ವವನ್ನು ದೃಷ್ಟಿಯಲ್ಲಿಟ್ಟುಕೊಂಡು, NASBಯಲ್ಲಿರುವ ಪ್ರಕಾರ, "ಸ್ವಲ್ಪ ಕಾಲ" ಎಂದು ಪರಿಗಣಿಸಬಹುದು. ಯೇಸು "ಸ್ವಲ್ಪ ಕಾಲ" ಮಾತ್ರವೇ ನಮ್ಮ ಹಾಗೆ ಇದ್ದನು. ಅಲ್ಲಿರುವ ಅಂಶವು ಇದೇ ಆಗಿದ್ದಲ್ಲಿ, ಮೊದಲ ಆದಾಮನಿಂದ ಕಳೆದುಕೊಳ್ಳಲ್ಪಟ್ಟ ಈ ಲೋಕದ ಮೇಲಿನ ನಿಯತ್ರಣ ಮತ್ತು ತನ್ನ ಗಮ್ಯತೆಯನ್ನು ಮನುಷ್ಯನು ಕಡೇ ಆದಾಮನ (ಕ್ರಿಸ್ತನ) ಮೂಲಕ ಮಾತ್ರವೇ ಮರಳಿ ಪಡೆದುಕೊಳ್ಳುವದಕ್ಕೆ ಸಾಧ್ಯವೆಂಬದಾಗಿ ಲೇಖಕನು ಅಭಿಪ್ರಾಯ ಪಡುತ್ತಿದ್ದಾನೆ. ಮನುಷ್ಯನು ಮೂಲತಃ ಅಂಥ ನಿಯಂತ್ರಣ ಹೊಂದಿರಬೇಕೆಂದು ಸೃಷ್ಟಿಸಲ್ಪಟ್ಟನು. ಮರಣದ ಮೇಲಿನ ನಿಯಂತ್ರಣವು ಆದಾಮನ ಪಾಪದ ಮೂಲಕ ಕಳೆದುಕೊಳ್ಳಲ್ಪಟ್ಟಿದ್ದು ಕ್ರಿಸ್ತನಲ್ಲಿ ಮಾತ್ರವೇ ಪುನಃ ಗಳಿಸಿಕೊಳ್ಳಲ್ಪಡಬಲ್ಲದು. ಈ ವಾಸ್ತವಾಂಶವು **ಆದರೆ ಎಲ್ಲವೂ ಆತನಿಗೆ ಅಧೀನವಾಗಿರುವದನ್ನು ನಾವು ಇನ್ನೂ ಕಾಣುವದಿಲ್ಲ** (ವ. 8) ಎಂಬುದನ್ನು ಸ್ಪಷ್ಟೀಕರಿಸುತ್ತದೆ. ಎಲ್ಲವೂ ಮಾನವರ

ಅಧೀನದಲ್ಲಿಡಲ್ಪಟ್ಟಿವಾದರೂ, ಖಂಡಿತವಾಗಿಯೂ ಕ್ರಿಸ್ತನಿಗೆ ಅಧೀನಪಡಿಸಲ್ಪಟ್ಟಿವೆ.

ನೀವು ಹೀಗೆ ಹೇಳಬಹುದು, "ಅಲ್ಲಿ ಮರಣಕ್ಕಿಂತ ಇನ್ನು ಹೆಚ್ಚಿನದ್ದು ಇರುತ್ತದೆ, ಯಾಕೆಂದರೆ ಮನುಷ್ಯನು ನಿಯಂತ್ರಣ ಮಾಡದದಂತಹ ಭೂಮಿಯ ಬಹಳಷ್ಟು ಕಾರ್ಯಗಳಿರುತ್ತವೆ."[14] ಪ್ರಾಣಿಗಳನ್ನು ಯೋಚಿಸಿರಿ, ಹವಮಾನದ ಅಂಶಗಳನ್ನು, ಮತ್ತು ಮನುಷ್ಯನ ನಿಯಂತ್ರಣದಲ್ಲಿಲ್ಲದಂತಹ ಭೂಮಿಯ ಹೊರಪದರುಗಳ ಬಗ್ಗೆ ಯೋಚಿಸಿರಿ. ಒಂದು ವೇಳೆ ಮನುಷ್ಯನು ಒಂದು ದಿನ ಸಕಲ ಪ್ರಾಣಿಗಳನ್ನು, ಹವಮಾನದ ಸಕಲ ಅಂಶಗಳನ್ನು, ಭೂಮಿಯ ಹೊರಪದರುಗಳನ್ನು ನಿಯಂತ್ರಿಸುವವರಾದಾಗ್ಯೂ, ಆತನಿಗೆ ಮರಣವನ್ನು ನಿಯಂತ್ರಿಸುವದಕ್ಕೆ ಶಕ್ತನಾಗಬಹುದಾದ ನಿರೀಕ್ಷೆಯು ಇರುವದಿಲ್ಲ! ಆತನು ಸ್ವಲ್ಪ ಮಟ್ಟಿಗೆ ಆಯುಷ್ಯವನ್ನು ದೀರ್ಘಗೊಳಿಸಿಕೊಳ್ಳಬಲ್ಲನು, ಆದರೆ ಮರಣವು ಆತನ ಶಕ್ತಿಯ ವ್ಯಾಪ್ತಿಯನ್ನು ಮೀರಿದ್ದಾಗಿದೆ. ಅದು ಈ ವಾಕ್ಯಭಾಗದಲ್ಲಿರುವ ಸಂದೇಶದ ಭಾಗವಾಗಿರುತ್ತದೆ.

### ಕ್ರಿಸ್ತನು, ನಮ್ಮ ರಕ್ಷಣೆಯ ಕರ್ತೃ (2:9-13)

**9ಆದರೂ ದೇವದೂತರಿಗಿಂತ ಸ್ವಲ್ಪ ಕಡಿಮೆಯಾಗಿ ಮಾಡಲ್ಪಟ್ಟ ಒಬ್ಬಾತನು, ಅಂದರೆ ಯೇಸುವು, ಪ್ರಭಾವವನ್ನೂ ಮಾನವನ್ನೂ ಕಿರೀಟವಾಗಿ ಹೊಂದಿರುವದನ್ನು ನಾವು ನೋಡುತ್ತೇವೆ. ಮೃತಪಟ್ಟದ್ದರಿಂದಲೇ ಮಾನ ಪ್ರಭಾವಗಳನ್ನು ಹೊಂದಿದನು. ಆತನು ದೇವರ ಕೃಪೆಯಿಂದ ಎಲ್ಲರಿಗೋಸ್ಕರ ಮರಣವನ್ನು ಅನುಭವಿಸಲೇ ಬೇಕಾಗಿತ್ತು.**

**10ಸಮಸ್ತವು ಯಾವನಿಗೋಸ್ಕರವೂ ಯಾವನಿಂದಲೂ ಉಂಟಾಯಿತೋ ಆತನು ಬಹು ಮಂದಿ ಪುತ್ರರನ್ನು ಪ್ರಭಾವಕ್ಕೆ ಸೇರಿಸುವಲ್ಲಿ ಅವರ ರಕ್ಷಣಾ ಕರ್ತನನ್ನು ಬಾಧೆಗಳ ಮೂಲಕ ಸಿದ್ಧಿಗೆ ತರುವದು ಆತನಿಗೆ ಯುಕ್ತವಾಗಿದೆ. 11ಯಾಕೆಂದರೆ ಪವಿತ್ರ ಮಾಡುವಾತನಿಗೂ ಪವಿತ್ರರಾಗುವವರೆಲ್ಲರಿಗೂ ಒಬ್ಬನೇ ತಂದೆ ಇದ್ದಾನೆ. ಈ ಕಾರಣದಿಂದ ಪವಿತ್ರ ಮಾಡುವಾತನು ಪವಿತ್ರರಾಗುವವರನ್ನು ಸಹೋದರರೆನ್ನುವದಕ್ಕೆ ನಾಚಿಕೆಪಡದೆ –**

**12ನಿನ್ನ ನಾಮಮಹಿಮೆಯನ್ನು ನನ್ನ ಸಹೋದರರಿಗೆ ತಿಳಿಸುವೆನು;**
**ಸಭಾಮಧ್ಯದಲ್ಲಿ ನಿನಗೆ ಸ್ತುತಿಪದಗಳನ್ನು ಹಾಡುವೆನು**
**ಎಂತಲೂ**
**ನಾನೂ ದೇವರ ಮೇಲೆ ಭರವಸವಿಟ್ಟ 13ನಾಗಿರುವೆನು**
**ಎಂತಲೂ**
**ಇಗೋ, ನಾನೂ ದೇವರು ನನಗೆ ದಯ ಪಾಲಿಸಿರುವ ಮಕ್ಕಳೂ ಇದ್ದೇವೆ**
**ಎಂತಲೂ ಹೇಳುತ್ತಾನೆ.**

ನಮಗೆ ವಿಶೇಷ ಆಸಕ್ತಿಯನ್ನು ಹೊಂದಿರಬೇಕಾದ ಸತ್ಯವು ಮನುಷ್ಯನ ಅಧೀನದಲ್ಲಿ ಏನು ಇಡಲ್ಪಟ್ಟಿದೆಯೆಂಬುದು ಅಲ್ಲ, ಆದರೆ ಕ್ರಿಸ್ತನು ಏನನ್ನು ನಮಗೋಸ್ಕರ ಗೆದ್ದುಕೊಂಡಿದ್ದಾನೆಂಬದೇ. ಈಗ ನಮ್ಮನ್ನು ಕೇಳಿಕೊಳ್ಳೋಣ, "ನಮ್ಮ ಮಹಾನ್ ವಿಮೋಚಕನು ನಮಗೋಸ್ಕರ ಏನನ್ನು ಮಾಡಿದ್ದಾನೆ?"

**ವಚನ 9.** ಆತನು ಒಂದು ವಿಶೇಷವಾದ ಉದ್ದೇಶಕ್ಕಾಗಿ ಸ್ವಲ್ಪ ಕಾಲ ತನ್ನನ್ನು **ದೇವದೂತರಿಗಿಂತ** ಕಡಿಮೆಯಾಗಿ ಮಾಡಿಕೊಂಡನು. NIV ಮತ್ತು KJV ತರ್ಜುಮೆಗಳು ಯೇಸವು "ದೇವದೂತರಿಗಿಂತ ಸ್ವಲ್ಪ ಕಡಿಮೆಯಾಗಿ ಮಾಡಲ್ಪಟ್ಟನು" ಎಂದು ಹೇಳುತ್ತವೆ. ಈಗ **ಸ್ವಲ್ಪ ಕಾಲ** ಎಂಬುದು ಗ್ರೀಕ್ ಪದಗಳ ಉತ್ತಮ ಅನುವಾದವೆಂದು ಪರಿಗಣಿಸಲಾಗಿರುತ್ತದೆಂದು

Gerald F. Hawthorneನು ಹೇಳುತ್ತಾನೆ.[15] ಈ ಪದಗುಚ್ಛವು ಹೇಗೆ ಅನುವಾದಿಸಲ್ಪಟ್ಟಿದ್ದರೂ ಸರಿಯೇ, ಅರ್ಥವು ಹಾಗೆಯೇ ಉಳಿಯುತ್ತದೆ. ನೇಮಕವಾದ ಕಾಲಕ್ಕಾಗಿ, ಯೇಸುವು ದೇವದೂತರಿಗಿಂತಲೂ ಕಡಿಮೆಯಾದ ಭೂಲೋಕದ ಅಲ್ಪವಾದ ಜೀವಿತವನ್ನು ವಹಿಸಿಕೊಂಡನು. ಆತನು ಮರಣಕ್ಕೊಳಗಾಗುವ ಸಾಮರ್ಥ್ಯ ಹೊಂದುವ ಹಾಗೆ ಆತನು ತನ್ನನ್ನು ತಗ್ಗಿಸಿಕೊಂಡನು. ದೇವದೂತರು ಮರಣಿಸಲು ಸಾಧ್ಯವಿಲ್ಲವೆಂಬುದು ಸತ್ಯವಾದದ್ದು, ಆದರೆ ಅವರಿಗೆ ನಾಶನದಲ್ಲಿರುವ ಪಾಪಿಗಳನ್ನು ರಕ್ಷಿಸುವದಕ್ಕಾಗಲಿ ಅಥವಾ ಮರಣದ ಮೇಲೆ ಮನುಷ್ಯನ ಧೊರೆತನವನ್ನು ಪುನಃಸ್ಥಾಪಿಸುವದಕ್ಕಾಗಲಿ ಸಹ ಅವರಿಗೆ ಸಾಧ್ಯವಿರುವದಿಲ್ಲ.[16]

ಈ ವಿಭಾಗವು, 2:9-13, ವಿಮೋಚಕನು ಬಾಧೆಯನ್ನನುಭವಿಸುವದು ದೈವಿಕ ಯೋಜನೆಯ ಭಾಗವಾಗಿತ್ತು ಎಂಬುದನ್ನು ಪ್ರಕಟಗೊಳಿಸುತ್ತದೆ; ಆತನ ನೋವು ಆಕಸ್ಮಿಕವಾಗಿರಲಿಲ್ಲ. ಅಲ್ಲದೆ ವಿಮೋಚನೆಯ ಪ್ರಕ್ರಿಯೆಗೆ ಮಹಾನ್ ಚಾಲನೆ ಕೊಟ್ಟಾತನು ದೇವರೇ ಆಗಿದ್ದನು ಎಂಬುದನ್ನು ಸಹ ಈ ವಾಕ್ಯಭಾಗವು ತೋರಿಸುತ್ತದೆ.[17] ಆತನ ಅಂತಿಮವಾದ ಗುರಿಯು ಅನೇಕ ಪುತ್ರರನ್ನು ಮಹಿಮೆಗೆ ತರಬೇಕೆಂಬುದಾಗಿತ್ತು.

ಯೇಸು ಮರಣದ ಬಾಧೆಯ ಕಾರಣದಿಂದಾಗಿ ಭೂಮಿಗೆ ಬಂದನು. "ದ್ದರಿಂದಲೇ" (KJV ಯಲ್ಲಿ "ಗಾಗಿ") ὑπέρ (*huper*), ಎಂಬುದರರ್ಥವು "ಪರವಾಗಿ," ಅಥವಾ ಪರ್ಯಾಯವಾಗಿ ಒಂದು ಸ್ವಯಜ್ಞ ಎಂದಾಗಿದೆ. ಕ್ರಿಸ್ತನು ನನಗೆ ಬದಲಾಗಿ, ನನ್ನ ಸ್ಥಾನದಲ್ಲಿ ಸತ್ತನು. ಆತನು ಶಿಲುಬೆಯ ಮೇಲೆ ನನ್ನ ಸ್ಥಾನವನ್ನು ತೆಗೆದುಕೊಂಡಿದ್ದನು! ನಾವು ನಿಜವಾಗಿಯೂ ಹೇಳಬಲ್ಲೆವು, "ಅಲ್ಲಿ, ಕ್ರಿಸ್ತನಲ್ಲಿನ ದೇವರ ಕೃಪೆಯಿಂದಲೇ, ನಾನು ಹೋಗುತ್ತೇನೆ." ಆತನ ಬರೋಣ, ಆತನ ಮರಣಿಸುವಿಕೆ, ಮತ್ತು ಉನ್ನತ್ತಕ್ಕೇರಿಸಲ್ಪಡುವಿಕೆ ಎಲ್ಲವೂ "ದೇವರ ಕೃಪೆಯಿಂದ" ಸಂಭವಿಸಿತು. ಆತನು ದೇವಜನ ಅಥವಾ ಪಾಪಿ "ಎಲ್ಲರಿಗೋಸ್ಕರ" ಮರಣಿಸುವದಕ್ಕೆ ಮನಸ್ಸುಳ್ಳವನಾಗಿದ್ದನು. ಆತನು ತನ್ನ ವೈರಿಗಳಿಗೋಸ್ಕರ ಸಹ ಈ ವಿಧದಲ್ಲಿ ಬಾಧೆಯನ್ನನುಭವಿಸಿದನು (ರೋಮಾ 5:8-10). ಈ ಕೆಳಗಿನ ಚಿತ್ರಾಕ್ಷರವು "grace" (ಕೃಪೆ) ಎಂಬುದನ್ನು ದೃಷ್ಟಾಂತಪಡಿಸುತ್ತದೆ:

G-od's
R-iches
A-t
C-hrist's
E-xpense

ನಮ್ಮ ರಕ್ಷಕನ ನರಾವತಾರ, ಮರಣ, ಪಾಪಪ್ರಾಯಶ್ಚಿತ್ತ, ಮತ್ತು ಮಧ್ಯಸ್ಥಿಕೆಗಳು ದೇವರ ಪ್ರೀತಿಯ ಮೂಲಕವಾಗಿ ನಮ್ಮವುಗಳಾಗಿವೆ (ಯೋಹಾನ 3:16). ಬಾಧೆಯನ್ನನುಭವಿಸುವದಕ್ಕೆ ಆತನು ಮನಸ್ಸುಳ್ಳವನಾಗಿದ್ದ ನಿಮಿತ್ತವಾಗಿ, ಆ ಮೂಲಕ ವಿಧೇಯತೆಯನ್ನು ಕಲಿತುಕೊಂಡವನಾಗಿದ್ದು (5:8, 9), ಈಗ ಆತನು "ತನಗೆ ವಿಧೇಯರಾಗಿರುವವರೆಲ್ಲರಿಗೂ" (5:9) ರಕ್ಷಕನಾಗುವ ಮೂಲಕ **ಮಾನ ಪ್ರಭಾವಗಳನ್ನು ಹೊಂದಿದನು**. ಆತನು ನಮ್ಮ ಮಹಿಮೆಯುಳ್ಳ ರಕ್ಷಕನು, ಮತ್ತು ಆತನಿಗೆ ವಿಧೇಯರಾಗುವವರು ಆದುಕೊಂಡವರಾಗುವರು. ಬೇರೆ ಜನರು, ಐಶ್ವರ್ಯವಂತ ರಾಗಿದ್ದರೂ, ನಮಗೆ ಕ್ರಿಸ್ತನ ಮೂಲಕ ಇರುವ ಈ ಐಶ್ವರ್ಯಕ್ಕೆ ಹೋಲಿಸಿದರೆ ಅವರು ಬಡತನದಲ್ಲಿರುವವರಾಗಿದ್ದಾರೆ.

ಕ್ರಿಸ್ತನು **ಎಲ್ಲರಿಗೋಸ್ಕರ** ಮರಣಿಸಿದನು, ಕೇವಲ "ಆದುಕೊಂಡವರು" ಎನ್ನಿಸಿಕೊಳ್ಳುವ

ಜನರ ಗುಂಪಿಗೋಸ್ಕರ ಮಾತ್ರವೇ ಸಾಯಲಿಲ್ಲ. ಕ್ರಿಸ್ತನ ಮರಣದ ಕುರಿತ ಈ ದೃಢೀಕರಿಸುವಿಕೆಯು "ಮಿತವಾದ ಪ್ರಾಯಶ್ಚತ್ತ"[18] ಎಂಬ ಸಿದ್ಧಾಂತದ ಯಾವದೇ ಹೋಲಿಕೆಯನ್ನು ಒಳಗೊಂಡಿರುವದಿಲ್ಲ. ಆದುಕೊಳ್ಳಲ್ಪಡದವರು ನಾಶನಕ್ಕೆ ಪಾತ್ರರಾಗಿದ್ದರೆ ಮತ್ತು ಯಾವದೇ ನಿರೀಕ್ಷೆಯಿಲ್ಲದವರಾಗಿದ್ದರೆ, ಆತನ ಮರಣವು ಒಂದು ವ್ಯರ್ಥವಾದ ಯಜ್ಞವಾಗಿತ್ತೆಂದಾಗುತ್ತದೆ, ಕನಿಷ್ಠ ಆದುಕೊಳ್ಳಲ್ಪಡದ ಮಾನವರ ಪಾಲಿಗೆ ಎಂದು ಹೇಳಬಹುದು. Marshall Keebleಯು ಆಗಾಗ ಹೀಗೆ ಹೇಳುತ್ತಿದ್ದನು, "ಆದುಕೊಳ್ಳಲ್ಪಡುವಿಕೆಯು ಹೀಗಿರುತ್ತದೆ: ದೇವರು ನಿಮಗಾಗಿ ಮತ ಹಾಕುತ್ತಾನೆ, ಸೈತಾನನು ನಿಮ್ಮ ವಿರುದ್ಧ ಮತ ಹಾಕುತ್ತಾನೆ, ಮತ್ತು ನೀವು ನಿರ್ಧಾರಕವಾದ ಮತವನ್ನು ಹಾಕುವಿರಿ." ಅದು ಅಷ್ಟೊಂದು ಸರಳವಾಗಿದ್ದು, ಒಳ್ಳೇ ಅರ್ಥವನ್ನು ಕೊಡುತ್ತದೆ.

ಈ ತಗ್ಗಿಸಲ್ಪಡುವಿಕೆ ಮತ್ತು ಮರಣದ ಕಾರಣದಿಂದ, ಕ್ರಿಸ್ತನು ಅತ್ಯುನ್ನತಕ್ಕೆ ಏರಿಸಲ್ಪಟ್ಟಿದ್ದಾನೆ. ಈ ಉನ್ನತ್ತಕ್ಕೇರಿಸಲ್ಪಡುವಿಕೆಯ ಜೊತೆಗೆ ಒಂದು ದಿನ ಪ್ರತಿ ಮೊಣಕಾಲುಗಳು ಅಡ್ಡಬಿದ್ದು ಕ್ರಿಸ್ತನನ್ನು ಕರ್ತನೆಂದು ಪ್ರತಿಜ್ಞೆಮಾಡುವವು ಎಂದು ಪೌಲನು ಫಿಲಿಪ್ಪಿಯವರಿಗೆ ಬರೆದ ಪತ್ರಿಕೆಯಲ್ಲಿ ಸೇರ್ಪಡೆಗೊಳಿಸುತ್ತಾನೆ. ಈಗ ಜೀವಿಸುತ್ತಿರುವ ಖ್ಯಾತ ವ್ಯಕ್ತಿಗಳ ಬಗ್ಗೆ ಯೋಚಿಸಿರಿ, ರಾಜಕೀಯದಲ್ಲಿರಬಹುದ, ಮಿಲಿಟರಿ, ಅಥವಾ ಮನೋರಂಜನೆಯ ಜಗತ್ತಿನಲ್ಲಿರಬಹುದು: ಅವರೆಲ್ಲರೂ ಯೇಸುವಿನ ಮುಂದೆ ಅಡ್ಡಬೀಳುವರು (ಫಿಲಿಪ್ಪಿ 2:8-11). ಎಲ್ಲಾ ಜನರು, ತಾವು ಏನೇ ಅಭಿಪ್ರಾಯಗಳನ್ನು ಹೊಂದಿದ್ದರೂ ಸರಿಯೇ, ಒಂದು ಆತನನ್ನು ಪೂರ್ಣವಾಗಿ ಒಪ್ಪಿಕೊಳ್ಳುವವರಾಗುತ್ತಾರೆ! ಯೆಶಾಯನ ದಿನಗಳಲ್ಲಿ, ಈ ಉನ್ನತ್ತಕ್ಕೇರಿಸಲ್ಪಡುವಿಕೆಯು ಆತನ ಮರಣದ ಪರಿಣಾಮವಾಗಿರುತ್ತದೆಂದು ವಾಗ್ದಾನ ಮಾಡಲ್ಪಟ್ಟಿತು (ಯೆಶಾಯ 53:12). ಕ್ರಿಸ್ತನು ಈಗ ದೇವರ ಬಲಗಡೆಯಲ್ಲಿ ಆಳ್ವಿಕೆ ಮಾಡುತ್ತಾನೆ, ಅದರರ್ಥವು ಈಗ ಆತನು ರಾಜಾಧಿರಾಜನಾಗಿ ಮತ್ತು ಕರ್ತಾಧಿಕರ್ತನಾಗಿ ಕಿರೀಟಧಾರಣೆ ಮಾಡಲ್ಪಟ್ಟಿದ್ದಾನೆ ಎಂಬದೆ (1 ತಿಮೊಥೆ 6:15; ಇಬ್ರಿಯ 8:1; ನೋಡಿರಿ ಪ್ರಕಟನೆ 17:14).

ಯಾರಾದರೊಬ್ಬರು ಹೀಗೆ ಕೇಳಬಹುದು, "ಆತನಿಗಿರುವ ಎಲ್ಲಾ ದೈವಿಕ ಶಕ್ತಿಯಿಂದ, ದೇವರು ತನ್ನ ಮಗನ ಸರ್ವೋಚ್ಚವಾ ಯಜ್ಞದ ಮೂಲಕವಲ್ಲದೆ ಬೇರೆ ಯಾವದಾದರೂ ದಾರಿಯ ಮೂಲಕ ರಕ್ಷಣೆಯನ್ನು ಸಾಧಿಸುವದಕ್ಕೆ ಸಾಧ್ಯವಾಗಲಿಲ್ಲ?" "ಒಂದು ದುಷ್ಟ ಲೋಕಕ್ಕಾಗಿ ತನ್ನ ಒಬ್ಬನೇ ಮಗನನ್ನು ಸಾಯುವಂತೆ ಬಿಡುವ ದೇವರ ಕುರಿತು ನಾನು ಉನ್ನತವಾದ ಅಭಿಪ್ರಾಯವನ್ನು ಇಟ್ಟುಕೊಳ್ಳಲಾರೆನು" ಎಂದು ಹೇಳುವ ವ್ಯಕ್ತಿಯು ದೇವರಿಗಿಂತಲೂ ಹೆಚ್ಚಾಗಿ ತನ್ನ ಬಗ್ಗೆ ನಮಗೆ ಹೆಚ್ಚಾಗಿ ತಿಳಿಯಪಡಿಸುವವನಾಗಿದ್ದಾನೆ. ನಮ್ಮ ಪ್ರೀತಿಯ ತಂದೆಗಿಂತಲೂ ಆತನ ಸ್ವಂತ ಜ್ಞಾನವು ಹೆಚ್ಚು ದೊಡ್ಡದೆಂದು ಆತನು ನೆನಸುತ್ತಾನೆ! ಲೋಕವು ರಕ್ಷಣೆ ಹೊಂದುವ ಹಾಗೆ ಆತನು ಹೇಗೆ ಪರ್ಯಾಲೋಚನೆಯನ್ನು ಮಂಡಿಸಬಲ್ಲನು? ಬೇರೊಂದು ಮಾರ್ಗವು ಸಾಧ್ಯವಿದ್ದಿದ್ದರೆ, ದೇವರು ನಿಶ್ಚಯವಾಗಿಯೂ ಅದನ್ನು ಬಳಸಿರುತ್ತಿದ್ದನು.

**ವಚನ 10.** "ರಕ್ಷಣೆಯನ್ನು ಬಾಧ್ಯವಾಗಿ ಹೊಂದಬೇಕಾಗಿರುವವರು" (1:14) "ಪುತ್ರರು" ಎಂದು ಕರೆಯಲ್ಪಟ್ಟಿದ್ದಾರೆ. ಯೇಸುವು "ಎಲ್ಲರಿಗೋಸ್ಕರ ಮರಣವನ್ನು ಅನುಭವಿಸಲೇ ಬೇಕಾಗಿತ್ತು" (ವ. 9), ಅದು ಇಲ್ಲಿ "ಬಾಧ್ಯವಾಗಿ ಹೊಂದುವವರು" ಮತ್ತು "ಪುತ್ರರು" ಆಗಿರುವವರಿಗೆ ಸೀಮಿತವಾಗಿರುತ್ತದೆ.

ಕ್ರಿಸ್ತನ ಮಾನವ ಸ್ವಭಾವವು – ವಿಶೇಷವಾಗಿ ಆತನ ಮರಣ – ಅನೇಕ ಯೆಹೂದ್ಯರಿಗೆ ಒಂದು ಅಡೆತಡೆಯಾಗಿತ್ತು (1 ಕೊರಿಂಥ 1:23). "ಕ್ರಿಸ್ತನು ಸದಾಕಾಲವೂ ಇರುವವನು" (ಯೋಹಾನ 12:34) ಎಂದು ಅವರಿಗೆ ಗೊತ್ತಿತ್ತು. ಯೇಸುವಿನ ಮರಣಕ್ಕೆ ಅವಕಾಶ ನೀಡಿದ

ಆತನ ಮಾನವತೆಯು ದೇವರ ಯೋಜನೆಯ ಭಾಗವಾಗಿತ್ತೆಂಬುದನ್ನು ಹಿಂಜರಿಯುತ್ತಿದ್ದ ಯೆಹೂದಿ ಕ್ರೈಸ್ತರಿಗೆ ಇಬ್ರಿಯರಿಗೆ ಪುಸ್ತಕದ ಲೇಖಕನು ತೋರಿಸಿ ಕೊಡುವದಕ್ಕೆ ಒತ್ತಾಯಿಸಲ್ಪಟ್ಟನು.

ನಮ್ಮ ರಕ್ಷಣೆಯನ್ನು ಸಿದ್ಧಿಗೆ ತರುವದಕ್ಕಾಗಿ ಮರಣಿಸುವದು **ಅದು ಆತನಿಗೆ ಯುಕ್ತವಾಗಿತ್ತು** (ವ. 10). 10ನೇ ವಚನವು ಪ್ರಕರಣ ಗ್ರಂಥದ ಈ ವಿಭಾಗಗಕ್ಕೆ (2:10-18) "ಪ್ರಬಂಧ" ಎಂದು ಕರೆಯಲ್ಪಡಬಹುದು. ಯೇಸುವಿನ ಬಾಧೆಗಳಲ್ಲಿ ಆತನ ಗುರಿಯು **ಬಹು ಮಂದಿ ಪುತ್ರರನ್ನು ಪ್ರಭಾವಕ್ಕೆ** ತರುವದೇ ಆಗಿತ್ತು. ಯೇಸುವಿನ ತುಟಿಗಳಿಂದ ಅದೇ ಉದ್ದೇಶವು ತಿಳಿಸಲ್ಪಟ್ಟಿದ್ದನ್ನು ಮಾರ್ಕನು ಉಲ್ಲೇಖನ ಮಾಡುತ್ತಾನೆ: "ಮನುಷ್ಯಕುಮಾರನು ಸಹ ಸೇವೆ ಮಾಡಿಸಿಕೊಳ್ಳುವದಕ್ಕೆ ಬರಲಿಲ್ಲ, ಸೇವೆ ಮಾಡುವದಕ್ಕೂ ಅನೇಕರನ್ನು ಬಿಡಿಸಿಕೊಳ್ಳುವದಕ್ಕಾಗಿ ತನ್ನ ಪ್ರಾಣವನ್ನು ಈಡು ಕೊಡುವದಕ್ಕೂ ಬಂದನು" (ಮಾರ್ಕ 10:45). ಯೇಸು ನಮ್ಮ ಪಾಪಗಳನ್ನು ಮುಚ್ಚುವದಕ್ಕೆ ಮತ್ತು ಅವುಗಳನ್ನು ದೇವರ ದಾಖಲೆಯೊಳಗಿಂದ ಅಳಿಸಿ ಹಾಕುವದಕ್ಕೆ ಮರಣಿಸಿದನು; ಈ ವಿಧದಲ್ಲಿ ದೇವರ ಪ್ರೀತಿಯು ತೋರ್ಪಡಿಸಲ್ಪಟ್ಟಿತು, ಮತ್ತು ಪ್ರತಿಯಾಗಿ ನಾವು ಮಾಡಬೇಕಾದ ಸ್ಪಂದನೆ ಏನೆಂಬುದನ್ನು ಸ್ಪಷ್ಟವಾಗಿ ಕಾಣುತ್ತೇವೆ (1 ಯೋಹಾನ 4:19).

"ಆತನಿಗೆ ಯುಕ್ತವಾಗಿತ್ತು" ಎಂಬುದು ದೇವರು ನಮ್ಮ ಮೇಲೆ ಇಟ್ಟಿರುವ ಪ್ರೀತಿಯನ್ನು ಸಿದ್ಧಾಂತಪಡಿಸುವದಕ್ಕೆ ಕ್ರಿಸ್ತನ ಮರಣವು ಅತ್ಯುತ್ತಮ ದಾರಿಯಾಗಿತ್ತೆಂಬುದನ್ನು ದೃಢೀಕರಿಸುತ್ತದೆ. Aristotleನು "ಯುಕ್ತವಾಗಿದೆ" ಎಂಬ ಪದವನ್ನು "ಅದು ಈ ವಿಧದಲ್ಲಿಯೇ ಇರತಕ್ಕದ್ದಾಗಿತ್ತು" ಎಂಬರ್ಥವನ್ನು ಸೂಚಿಸುವದಕ್ಕೆ ಬಳಸಿದನು. Bruceನು ಹೀಗೆ ಬರೆಯುತ್ತಾನೆ, "ನಮ್ಮ ಕರ್ತನ ಶ್ರಮೆಗಳಲ್ಲಿಯೇ ನಾವು ದೇವರ ಹೃದಯವೇ ತೆರೆದಿಡಲ್ಪಟ್ಟಿರುವದನ್ನು ನಾವು ಕಾಣುತ್ತೇವೆ; ನಾವು ಆತನನ್ನು 'ಲೋಕವನ್ನು ಕ್ರಿಸ್ತನಲ್ಲಿ ತನಗೆ ಸಮಾಧಾನಪಡಿಸಿಕೊಳ್ಳುತ್ತಿದ್ದದರಲ್ಲಿ' [2 ಕೊರಿಂಥ 5:19] ನೋಡುವಂತೆ ಬೇರೆ ಎಲ್ಲಿಯೂ ದೇವರು ಹೆಚ್ಚು ಪೂರ್ಣವಾಗಿ ಅಥವಾ ಹೆಚ್ಚು ಯೋಗ್ಯವಾಗಿ ಪ್ರಕಟಗೊಳಿಸಲ್ಪಟ್ಟಿರುವದಿಲ್ಲ."[19]

**ಸಮಸ್ತವೂ ಯಾವನಿಗೋಸ್ಕರವೂ ಯಾವನಿಂದಲೂ ಉಂಟಾಯಿತೋ** ಎಂಬುದು 1:2, 3ನ್ನು ಸೂಚಿಸುತ್ತದೆ, ಅಲ್ಲಿ ಯೇಸು "ಎಲ್ಲಕ್ಕೂ ಬಾಧ್ಯನು" ಎಂದು ಕರೆಯಲ್ಪಟ್ಟಿದ್ದಾನೆ. ಆತನು ತನ್ನ ಶಕ್ತಿಯ ವಾಕ್ಯದಿಂದ "ಸಮಸ್ತಕ್ಕೂ ಆಧಾರವಾಗಿದ್ದಾನೆ." ಸಮಸ್ತವೂ ಆತನ ಮೂಲಕವಾಗಿ ಉಂಟು ಮಾಡಲ್ಪಟ್ಟಿತು (ಯೋಹಾನ 1:3; ನೋಡಿರಿ ರೋಮಾ 11:36). ಇಡೀ ಸೃಷ್ಟಿಯೂ ದೇವರ ಮತ್ತು ಕ್ರಿಸ್ತನ ಮಹಿಮೆಗೋಸ್ಕರ ಇರುತ್ತದೆ.

ಆತನು ನಮ್ಮ ರಕ್ಷಣೆಯ **ಕರ್ತನು** (NASB; NIV) ಮತ್ತು "ನಾಯಕನು" (KJV) ಆಗಿದ್ದಾನೆ (ನೋಡಿರಿ 12:2). ಇಲ್ಲಿ "ಕರ್ತನು" (ಕರ್ತೃ) ಎಂಬುದು (ἀρχηγός, *archēgos*) "ದಾರಿ ಕಂಡು ಹಿಡಿಯುವವನು" ಅಥವಾ "ಪ್ರವರ್ತಕ"[20] ಎಂದರ್ಥವನ್ನು ಕೊಡುತ್ತದೆ. ದೇವರ "ಬಹು ಮಂದಿ ಪುತ್ರರು" ಮಹಿಮೆಗೆ ತರಲ್ಪಡುವಂತಾಗಲು ಕ್ರಿಸ್ತನು ರಕ್ಷಣೆಯ ದಾರಿಯನ್ನು ತೋರುತ್ತಾ ಸಾಗಿದನು.[21] ಅರಸನಾದ Jamesನ ಕಾಲದಲ್ಲಿ, ಆತನು ಅಧಿಕೃತ (King James) ಬೈಬಲನ್ನು 1611ರಲ್ಲಿ ಉತ್ಪಾದಿಸುವಂತೆ ಆದೇಶಮಾಡಿದವನಾಗಿದ್ದು, ಆತನ ಕಾಲದಲ್ಲಿ ಸೇನೆಯನ್ನು ಯುದ್ಧದಲ್ಲಿ ನಡಿಸುವಾತನು "ನಾಯಕ" ಆಗಿರುತ್ತಿದ್ದನು. ಪ್ರಾಚೀನವಾದ ಲೌಕಿಕ ಬರಹಗಳಲ್ಲಿ, ಈ ಪದವು ಒಂದು ಪಟ್ಟಣವನ್ನು ಸ್ಥಾಪಿಸಿ, ಅದಕ್ಕೆ ಹೆಸರನ್ನು ಒದಗಿಸಿ, ಅದನ್ನು ಪಾಲಕನಾಗಿ ಕಾಯುತ್ತಿದ್ದ ವೀರನನ್ನು ಸೂಚಿಸಲು ಬಳಸಲ್ಪಡುತ್ತಿತ್ತು.[22] ಅಂಥ ವರ್ಣನೆಯು ಖಂಡಿತವಾಗಿಯೂ ಕ್ರಿಸ್ತನಿಗೆ ಅನ್ವಯವಾಗುತ್ತದೆ, ಆತನು ನಮಗೆ ಮಹಿಮೆಯ ದಾರಿಯನ್ನು

ತೋರಿಸಿದವನು!

ನಮ್ಮನ್ನು **ಸಿದ್ಧಿಗೆ ತರುವ** [ಮೂಲಕ], ಈಗ ಸಹ, ಸರ್ವಶಕ್ತನ ಮಹಿಮಕರವಾದ ಸಿಂಹಾಸನ ಕೋಣೆಯನ್ನು ಪ್ರವೇಶಿಸುವದನ್ನು ನಮಗೆ ಸಾಧ್ಯಗೊಳಿಸಿರುತ್ತಾನೆ (4:15, 16). ಹಾಗಾದರೆ, ಹೇಗೆ ಯೇಸು "ಸಿದ್ಧಿಗೆ ತಂದನು"? "ಸಿದ್ಧಿಗೆ ತಂದನು" (τελειόω, *teleioō*) ಎಂಬ ಕ್ರಿಯಾಪದದ ವಿಷಯದಲ್ಲಿ ನೋಡುವದಾದರೆ, ಅದು "ಒಂದು ಪ್ರಕ್ರಿಯೆಯನ್ನು ಪೂರ್ಣಗೊಳಿಸುವದು" ಎಂದಾಗಿರುತ್ತದೆ. ಈ ಸಂದರ್ಭದಲ್ಲಿ ಪೂರ್ಣತೆಯನ್ನು ಬಾಧೆಯ ಮೂಲಕ ಸಾಧಿಸಲಾಗಿತ್ತು.[23] ಕ್ರಿಸ್ತನು "ಸಿದ್ಧಿಗೆ ಬರುವದು" ಎಂಬುದು ಮುಂಚೆ ಆತನು ನೈತಿಕವಾಗಿ ಕೊರತೆಗಳುಳ್ಳವನಾಗಿದ್ದನು ಎಂದು ಸೂಚಿಸುವದಿಲ್ಲ; ಬದಲಾಗಿ, ಆತನು **ಬಾಧೆಗಳ ಮೂಲಕ** ನಮ್ಮ ಮಹಾಯಾಜಕನಾಗಿರುವದಕ್ಕೆ ಪೂರ್ಣ ಅರ್ಹನಾಗಿ ಮಾಡಲ್ಪಟ್ಟನು ಎಂಬದೆ. ಪರಿಪೂರ್ಣತೆ (ಸಿದ್ಧಿಗೆ ಬರುವಿಕೆ) ಅನೇಕ ಸಾರಿ ಇಬ್ರಿಯರಿಗೆ ಪತ್ರಿಕೆಯಲ್ಲಿ ಬಾಧೆಗಳಿಗೆ ಸಂಬಂಧ ಹೊಂದಿದೆ (ನೋಡಿರಿ 5:8, 9). ಕ್ರಿಸ್ತನು ಬಾಧೆಗಳ ಮೂಲಕ ಪರಿಪೂರ್ಣಗೊಳಿಸಲ್ಪಟ್ಟನು. ಅಂದರೆ, ಆತನು ಪೂರ್ಣಗೊಳಿಸಬೇಕಾಗಿದ್ದ ಕೆಲಸಕ್ಕಾಗಿ "ತಕ್ಕವನಾಗಿ" ಅಥವಾ "ಸಂಪೂರ್ಣ ಪರಿಣಾಮಕರ" ಮಾಡಲ್ಪಟ್ಟನು.[24] ಮಾನವ ರೀತಿಯಲ್ಲಿ ಮಾತಾಡುವದಾದರೆ, ಯೇಸುವಿಗೆ ನಮಗಿರುವಂತೆ ಎಲ್ಲಾ ಶಾರೀರಿಕ ದುರ್ಬಲತೆಗಳಿದ್ದವು; ನಮ್ಮ ಹಾಗೆಯೇ ಆತನು ಸಹ ಬೆಳೆಯಬೇಕಿತ್ತು (ನೋಡಿರಿ ಲೂಕ 2:52). ಮಾನವನ ಪಾಪಗಳಿಗಾಗಿ ದೇವರಿಗೆ ಪ್ರಾಯಶ್ಚಿತ್ತ ಯಜ್ಞವನ್ನು ಅರ್ಪಿಸುವದರಲ್ಲಿ ಪರಿಣಾಮಕರವಾಗಿರುವದಕ್ಕೆ, ಯಾಜಕನು ಮಾನವನ ಅಗತ್ಯತೆ ಮತ್ತು ಸಮಸ್ಯೆಗಳನ್ನು ಸಮಗ್ರವಾಗಿ ಅರ್ಥಮಾಡಿಕೊಳ್ಳಬೇಕಿತ್ತು. ಯೇಸು ನಮ್ಮ ಪಾಪಗಳಿಗಾಗಿ ಪ್ರಾಯಶ್ಚಿತ್ತವಾಗಿ ಮರಣಿಸುವದಕ್ಕೆ ತನ್ನನ್ನು ಒಪ್ಪಿಸಿಕೊಂಡನು; ದೇವರು ಪಾಪಗಳನ್ನು ಕ್ಷಮಿಸುವದರಲ್ಲಿ ನ್ಯಾಯವಂತನಾಗಿರುವಂತಾಗಲು ಆತನು ಇದನ್ನು ಮಾಡಿದನು (ರೋಮಾ 3:23-26).[25]

ನ್ಯಾಯಕ್ಕಾಗಿರುವ ತನ್ನ ಬೇಡಿಕೆಯನ್ನು ನೆರವೇರಿಸುವದು ದೇವರ ಯೋಜನೆಯಲ್ಲಿದ್ದ ದೈವಿಕ ಕಡೆಯ ಭಾಗವಾಗಿತ್ತು, ಆದರೆ ಮಾನವ ಕಡೆಗಿನ ಭಾಗವನ್ನು ಯೇಸು ಸಮಗ್ರವಾಗಿ ಅರ್ಥಮಾಡಿಕೊಳ್ಳಬೇಕಿತ್ತು (2:17, 18). ರಕ್ಷಕನು ಬಾಧೆಗಳಲ್ಲಿದೆ ಪರಿಪೂರ್ಣನಾಗಿರಲಾಗಲಿಲ್ಲವೆಂದು 10ನೇ ವಚನವು ಘೋಷಿಸುತ್ತಾದಾದರೂ, ಆತನ ನರಾವತಾರದ ಹೊರತಾಗಿ ಆತನು ನಮ್ಮ ರಕ್ಷಕನಾಗಿರುವದು ಅಸಾಧ್ಯವಾಗಿರುತ್ತಿತ್ತೆಂದು ಮುಂದಿನ ವಚನವು ತೋರಿಸುತ್ತದೆ. ಈಗ ಆತನು ನಮ್ಮ ಕಷ್ಟಗಳನ್ನು ಅರ್ಥಮಾಡಿಕೊಳ್ಳಬಲ್ಲನು ಯಾಕೆಂದರೆ ಬಾಧೆಗಳಲ್ಲಿ ಆತನು ನಮ್ಮೊಂದಿಗೆ ಪೂರ್ಣವಾಗಿ ಗುರುತಿಸಿಕೊಂಡನು.

**ವಚನ 11.** ಒಬ್ಬ ಯಾಜಕನಾಗಿ ಸೇವೆ ಮಾಡುವವನು ಜನರನ್ನು ಅರ್ಥಮಾಡಿಕೊಳ್ಳಬೇಕಾದರೆ ಆತನು ಅವರೊಳಗೊಬ್ಬನಾಗಿ ಇರಬೇಕಿತ್ತು. NASB ಯಲ್ಲಿ **ಎಲ್ಲರಿಗೂ ಒಬ್ಬನೇ ತಂದೆ ಇದ್ದಾನೆ** ಎಂದಿದೆ, NIVಯಲ್ಲಿ "ಎಲ್ಲರೂ ಒಂದೇ ಕುಟುಂಬದವರು" ಎಂದಿದೆ, ಮತ್ತು NEBಯಲ್ಲಿ "ಎಲ್ಲರೂ ಒಂದೇ ಮೂಲದವರು"[26] ಎಂದಿದೆ. ಧರ್ಮಶಾಸ್ತ್ರದಲ್ಲಿ ಶುದ್ಧೀಕರಿಸುವ ಪ್ರಕ್ರಿಯೆಯಿಂದ ಪವಿತ್ರಗೊಳಿಸಲ್ಪಟ್ಟವನು ಜನರಿಗಾಗಿ ಕಾರ್ಯ ಮಾಡುತ್ತಿದ್ದನು ಮತ್ತು ಆತನು ಅವರಲ್ಲೊಬ್ಬನಾಗಿರುತ್ತಿದ್ದನು. ಈ ವಾಕ್ಯಭಾಗವು ನಿಸ್ಸಂಶಯವಾಗಿ ಯೇಸುವನ್ನು **ಪವಿತ್ರಗೊಳಿಸುವವನು** ಎಂಬದಾಗಿ ಸೂಚಿಸುತ್ತದೆ. ಆತನು ಸತ್ಯದ ಮೂಲಕ ಅಪೊಸ್ತಲರನ್ನು ಶುದ್ಧಮಾಡಬೇಕೆಂದು ತಂದೆಯನ್ನು ಪ್ರಾರ್ಥಿಸಿದಾಗ್ಯೂ ಇದೊಂದು ವಾಸ್ತವಾಂಶವಾಗಿರುತ್ತದೆ (ಯೋಹಾನ 17:17). ಹಳೆಯ ಒಡಂಬಡಿಕೆಯಲ್ಲಿ, ದೇವರು ತನ್ನ ಆದುಕೊಂಡ ಜನರನ್ನು

ಪವಿತ್ರಗೊಳಿಸಿದನು (ವಿಮೋಚನಕಾಂಡ 31:13; ಯಾಜಕಕಾಂಡ 20:8; 22:32; ಯೆಹೆಜ್ಕೇಲ 37:28). ಇಲ್ಲಿ ಒತ್ತು ಕ್ರಿಸ್ತನ ಮೇಲಿರುತ್ತದೆ ಯಾಕೆಂದರೆ ನಾವು ಆತನ ರಕ್ತದ ಮೂಲಕ ಶುದ್ಧೀಕರಿಸಲ್ಪಟ್ಟಿದ್ದೇವೆ (ನೋಡಿರಿ ಇಬ್ರಿಯ 10:29). ಯೇಸು ತನ್ನ ವಿಶ್ವಾಸವನ್ನು ತಂದೆಯಲ್ಲಿ ಇಟ್ಟನು (ವ. 13).

"ಪವಿತ್ರಗೊಳಿಸು" (ἁγιάζω, *hagiazō*) ಎಂಬುದು ಹೊಸ ಒಡಂಬಡಿಕೆಯಲ್ಲಿ ಎರಡು ಅರ್ಥದಲ್ಲಿ ಬಳಸಲ್ಪಟ್ಟಿದೆ: "ಸ್ವಚ್ಛಗೊಳಿಸುವದು, ಪವಿತ್ರಗೊಳಿಸುವದು, ಅಥವಾ ಪರಿಶುದ್ಧಗೊಳಿಸುವದು" ಮತ್ತು "ಒಂದು ಸಾಮಾನ್ಯದಿಂದ ಹಿಡಿದು ಒಂದು ಪವಿತ್ರವಾದ ಬಳಕೆಗಾಗಿ ಪ್ರತಿಷ್ಠೆಗೊಳಿಸುವ ಅಥವಾ ಪ್ರತ್ಯೇಕಿಸು" ಎಂಬದು. ಸಾಮಾನ್ಯವಾದ ಅರ್ಥನಿರೂಪಣೆಯು "ಪ್ರತ್ಯೇಕಿಸು" ಎಂದಾಗಿದೆ, ಮತ್ತು ಮೂಲ ಅರ್ಥವು ಕೇವಲ "ವ್ಯತ್ಯಾಸವಾಗಿರು" ಎಂದಷ್ಟೆ ಆಗಿದೆ. ಈ ಪದದ ನಾಮಪದ ರೂಪವು ἅγιος (*hagios*), ಅದರರ್ಥವು "ದೇವಜನ" (ಪರಿಶುದ್ಧ). ಇಬ್ರಿಯ 10:10ನೇ ವಚನವು "ಯೇಸು ಕ್ರಿಸ್ತನು ಒಂದೇ ಸಾರಿ ದೇಹವನ್ನು ಸಮರ್ಪಣೆಮಾಡುವ" ಮೂಲಕ ನಮಗೆ ಶುದ್ಧೀಕರಣವಾದದ್ದನ್ನು ತೋರಿಸುತ್ತದೆ. ಆತನ ಮರಣದ ಮೂಲಕ ನಾವು ದೇವರನ್ನು ಆರಾಧಿಸುವದಕ್ಕೆ ಮತ್ತು ಸೇವೆ ಮಾಡುವದಕ್ಕೆ ಪ್ರತ್ಯೇಕಿಸಿಡಲ್ಪಟ್ಟಿದ್ದೇವೆ. ಆತನ "ಪರಿಶುದ್ಧ" ಜನರಾಗಿ, ಒಂದು ದಿನ ನಾವು ಆತನ ಮಹಿಮೆಯೊಳಗೆ ಪ್ರವೇಶಿಸುವೆವು.

"ಶುದ್ಧೀಕರಿಸಲ್ಪಡುವದು" ಅಥವಾ "ಪ್ರತ್ಯೇಕಿಸಡಲ್ಪಡುವದು" ಎಂದರೆ ನಾವು ಮಹಿಮೆಗೆ ನಮ್ಮ ದಾರಿಯನ್ನು ಕಂಡುಕೊಳ್ಳುವದಕ್ಕಾಗಿ ಕ್ರಿಸ್ತನಂತೆ ಇರಬೇಕು ಮತ್ತು ಆತನ ಮಾದರಿಯನ್ನು ಅನುಸರಿಸಬೇಕು ಎಂದರ್ಥವಾಗಿದೆ. Bruce ಹೀಗೆ ಹೇಳುತ್ತಾನೆ, "ಶುದ್ಧೀಕರಣವು ಮಹಿಮೆಯ ಆರಂಭವಾಗಿರುತ್ತದೆ, ಮತ್ತು ಮಹಿಮೆಯು ಶುದ್ಧೀಕರಣದ ಪೂರ್ತಿಗೊಂಡಿರುವಿಕೆ ಆಗಿರುತ್ತದೆ."[27] ಸಾಧ್ಯವಾದ ಎಲ್ಲಾ ದಾರಿಯಲ್ಲಿ, ನಾವು ಕ್ರಿಸ್ತನೊಂದಿಗೆ **ಒಂದೇ** ಆಗಬೇಕು, ಆತನು ನಮ್ಮ ಸ್ವಭಾವದಲ್ಲಿ ಪಾಲುಗಾರನಾಗಿ ನಮ್ಮಂತೆಯೇ ಮರಣವನ್ನು ಅನುಭವಿಸುವದಕ್ಕೆ ತನ್ನನ್ನು ಅಧೀನಪಡಿಸಿಕೊಂಡನು. Phillips ಭಾವಾನುವಾದವು ಶುದ್ಧೀಕರಿಸಲ್ಪಟ್ಟವರು ಮತ್ತು ಶುದ್ಧಿ ಮಾಡುವವನು "ಒಂದು ಸಾಮಾನ್ಯ ಮಾನವತೆಯಲ್ಲಿ ಪಾಲುಗಾರರು" ಎಂದು ಹೇಳುತ್ತದೆ. ಈ ಹೇಳಿಕೆಯಲ್ಲದೆ ಬೇರೆ ಯಾವದೂ ಅಷ್ಟೊಂದು ಉತ್ತಮವಾಗಿ Docetic ಅಭಿಪ್ರಾಯವನ್ನು (ಯೇಸು ಮಾನವನಂತೆ ಕಾಣಿಸಿಕೊಂಡನು ಅಥವಾ ಹಾಗೆ *ತೋರಿದನು* ಎಂಬದು; ವ. 14ರ ಮೇಲಿನ ಚರ್ಚೆಯನ್ನು ನೋಡಿರಿ) ಖಂಡಿಸುವದಿಲ್ಲ.

ತಂದೆ, ಮಗ, ಪವಿತ್ರಾತ್ಮರು ಶುದ್ಧೀಕರಿಸುವ ಅಥವಾ "ಭಕ್ತಿವೃದ್ಧಿಗೊಳಿಸುವ" ಮತ್ತು "ಪವಿತ್ರರಾದವರಲ್ಲಿ ಹಕ್ಕನ್ನು ಅನುಗ್ರಹಿಸುವ" (ಅಪೊಸ್ತಲರ ಕೃತ್ಯಗಳೂ 20:32) ವಾಕ್ಯವನ್ನು ಕೊಡುವದರಲ್ಲಿ ಸಹಕಾರ ನೀಡುವರು. 11ನೇ ವಚನದಲ್ಲಿರುವ "ಪವಿತ್ರ ಮಾಡುವಾತನು" ಎಂಬ ಪದವು ಒಂದು ವರ್ತಮಾನಕಾಲ ಕೃದಂತವಾಗಿದ್ದು, ಯೇಸು ತನ್ನ ಕೆಲಸವನ್ನು ನಿರಂತರವಾಗಿ ಮಾಡುತ್ತಾನೆಂಬುದನ್ನು ತೋರಿಸುತ್ತದೆ.

ಆತನು ನಮ್ಮೊಂದಿಗೆ ಹೊಂದಿರುವ ಸಾಮಿಪ್ಯತೆ ಮತ್ತು ಏಕತೆಯ ಕಾರಣದಿಂದ, ಕ್ರಿಸ್ತನು ನಮ್ಮನ್ನು **ಸಹೋದದರೆನ್ನುವದಕ್ಕೆ ನಾಚಿಕೆಪಡದವನು** ಆಗಿದ್ದಾನೆ. ನಾವು ಸಭೆಯ ಪ್ರತಿ ಸದಸ್ಯರ ಮತ್ತು ನಮ್ಮ ಕರ್ತನಾದ ಕ್ರಿಸ್ತನೊಂದಿಗೆ ಸಹೋದರರು (ಅದರಲ್ಲಿ "ಸಹೋದರಿಯರು" ಸೇರಿದ್ದಾರೆ) ಆಗಿರುತ್ತೇವೆ (ಮತ್ತಾಯ 12:50; ರೋಮಾ 8:29; ಇಬ್ರಿಯ 2:17). ಸಭೆಯ ಭಾಗವಾಗಿರುವವರಾಗಿ, ನಾವು ಕ್ರಿಸ್ತನ ಭಾಗ ಸಹ ಆಗಿದ್ದೇವೆ. ನಾವು ಕ್ರೈಸ್ತರಾಗಿರುವ ಮೂಲಕ ಕ್ರಿಸ್ತನನ್ನು ಪ್ರತಿನಿಧಿಸುವ ಪ್ರಕಾರವೇ, ನಾವು ಲೋಕದಲ್ಲಿ ಇಂದು ಸಾಂಕೇತಿಕವಾಗಿ

ಕ್ರಿಸ್ತನಾಗುತ್ತೇವೆ. ಕ್ರಿಸ್ತನು ಹೇಗೆ ಪೌಲನಿಗೆ ಆತನು ತನ್ನನ್ನು ಹಿಂಸಿಸುತ್ತಿದ್ದಾನೆಂದು ಹೇಳುವದಕ್ಕೆ ಶಕ್ತನಾಗಿದ್ದನೆಂಬುದನ್ನು ಇದು ನಮಗೆ ಸ್ಪಷ್ಟಗೊಳಿಸುತ್ತದೆ (ಅಪೊಸ್ತಲರ ಕೃತ್ಯಗಳು 9:4). ಗಂಡ ಮತ್ತು ಹೆಂಡತಿಯ ನಡುವಿನ ನಿಕಟತೆಯು ಕ್ರಿಸ್ತನು ಮತ್ತು ಆತನ ಸಭೆಗೆ ಒಂದು ನಿದರ್ಶನವಾಗಿರುತ್ತದೆ (ಎಫೆಸ 5:22-30). ಕ್ರಿಸ್ತನು ಮತ್ತು ತನ್ನ "ಮಕ್ಕಳು" ಒಂದಾಗುವದು — ಒಂದು ಕುಟುಂಬ ಮತ್ತು ಒಂದೇ ಸ್ವಭಾವ — ದೇವರ ಚಿತ್ತವಾಗಿತ್ತಾದ್ದರಿಂದ, ಕ್ರಿಸ್ತನು ಮರಣವನ್ನು ಸಹ ಹೊಂದುವದಕ್ಕೆ ಹೋಗುವದು ಅವಶ್ಯಕವಾಗಿತ್ತು. ಆದುದರಿಂದ, ನಾವು "ಸಹೋದರ ಕ್ರಿಸ್ತನು" ಎಂಬದಾಗಿ ಸಮರ್ಪಕವಾಗಿಯೇ ಮಾತಾಡಬಹುದಾಗಿದೆ, ಆದಾಗ್ಯೂ ಹೊಸ ಒಡಂಬಡಿಕೆಯಲ್ಲಿ ಇದು ಬಳಸಲ್ಪಟ್ಟಿರುವ ಯಾವದೇ ಉದಾಹರಣೆಯಂತೂ ಇರುವದಿಲ್ಲ. ಅಷ್ಟೊಂದು ಪರಿಶುದ್ಧ ಮತ್ತು ನಿರ್ಮಲನಾದವನು ನಮ್ಮ ವಿಷಯದಲ್ಲಿ ನಾಚಿಕೆ ಪಟ್ಟುಕೊಳ್ಳುವ ಹಕ್ಕು ಹೊಂದಿರಬಹುದಿತ್ತು, ಆದರೆ ಆತನು ಹಾಗೆ ಮಾಡಲಿಲ್ಲ. ಯಾವನು ತನ್ನ ಸಹೋದರರನನ್ನು ಪ್ರೀತಿಸುತ್ತಾನೋ, ಆತನ ಕಷ್ಟಗಳು ಅಥವಾ ಸಮಸ್ಯೆಗಳು ಏನೇ ಆಗಿದ್ದಾಗ್ಯೂ ಸರಿಯೇ, ಆತನ ಬಗ್ಗೆ ಅವನು ಎಂದಿಗೂ ನಾಚಿಕೆ ಪಟ್ಟುಕೊಳ್ಳುವದಿಲ್ಲ.

**ವಚನ 12.** ಈ ವಚನವು ಕೀರ್ತನೆ 22:22ರಿಂದ ಉಲ್ಲೇಖನವನ್ನು ಒಳಗೊಂಡಿದ್ದು ಅದು ಕ್ರಿಸ್ತನು ತನ್ನ ಸಭೆಯೊಂದಿಗೆ ಹೊಂದಿರುವ ನಿಕಟತೆಯನ್ನು ದೃಷ್ಟಾಂತಪಡಿಸುತ್ತದೆ. ಇಬ್ರಿಯರಿಗೆ ಪತ್ರಿಕೆಯು ಬರೆಯಲ್ಪಡುವ ಹೊತ್ತಿಗೆ, ಪ್ರತಿಯೊಬ್ಬ ಕ್ರೈಸ್ತನು — ಖಂಡಿತವಾಗಿಯೂ ಪ್ರತಿಯೊಬ್ಬ ಇಬ್ರಿಯ ಕ್ರೈಸ್ತನು — ಸಹ ಕೀರ್ತನೆ 22 ಮೆಸ್ಸೀಯನ ಕುರಿತಾದದ್ದೆಂಬುದನ್ನು ತಿಳಿದಿದ್ದನು ಯಾಕೆಂದರೆ ಯೇಸು ಅದನ್ನು ಶಿಲುಬೆಯ ಮೇಲಿರುವ ವೇಳೆ ಉಲ್ಲೇಖಿಸಿದ್ದನು. ಕೀರ್ತನೆ 22:1ನೇ ವಚನವು ಮತ್ತಾಯ 27:46 ಮತ್ತು ಮಾರ್ಕ 15:34ರಲ್ಲಿ ಉಲ್ಲೇಖಿಸಲ್ಪಟ್ಟಿದೆ. ಕೀರ್ತನೆ 22:1, 8, 15, 16, ಮತ್ತು 18 ವಚನಗಳೆಲ್ಲವೂ ಹೊಸ ಒಡಂಬಡಿಕೆಯಲ್ಲಿ ಉಲ್ಲೇಖಿಸಲ್ಪಟ್ಟಿರುತ್ತವೆ. ಕೀರ್ತನೆಯಲ್ಲಿ ಮಾತಾಡಿದವನು ಕ್ರಿಸ್ತನಾಗಿದ್ದನು, ಆತ್ಮದಲ್ಲಿದ್ದ ಆತನು ದಾವೀದನ ಮೂಲಕ ಮಾತಾಡಿದನು (ನೋಡಿರಿ 1 ಪೇತ್ರ 1:11). ಕೀರ್ತನೆಯಲ್ಲಿ ಕೆಲವೊಂದು ಸಂಗತಿಗಳು, ಹೇಗೂ, ದಾವೀದನಿಗೆ ಅನ್ವಯವಾಗತಕ್ಕವುಗಳು. ಉದಾಹರಣೆಗೆ, "ನಾನಾದರೋ ಹುಳುದಂಥವನೇ ಹೊರತು ಮನುಷ್ಯನಲ್ಲ" ಎಂಬಂತಹ ಹೇಳಿಕೆ (ಕೀರ್ತನೆ 22:6), ಕ್ರಿಸ್ತನಿಗೆ ಅನ್ವಯವಾಗುವದಕ್ಕೆ ಸಾಧ್ಯವಿಲ್ಲ. ತಾವು ಪ್ರವಾದನೆಯನ್ನು ನೆರವೇರಿಸುತ್ತಿದ್ದಾರೆಂಬುದನ್ನು ತಿಳಿಯದೆಯೇ, ಶಿಲುಬೆಯ ಸುತ್ತಲು ನಿಂತವರು ಕೀರ್ತನೆ 22:8ರಲ್ಲಿ ಮಾತಾಡಿದ ಯೋಚನೆಯಂತೆಯೇ ಆತನಿಗೆ ಅಪಹಾಸ್ಯ ಮಾಡುತ್ತಾರೆ: "ಯೆಹೋವನು ತನ್ನನ್ನು ರಕ್ಷಿಸುವನೆಂದು ಆತನಲ್ಲಿ ಭರವಸವಿಟ್ಟಿದ್ದಾನಲ್ಲಾ; ಆತನು ಇವನನ್ನು ಮೆಚ್ಚಿದ್ದಾದರೆ ರಕ್ಷಿಸಲಿ" (ನೋಡಿರಿ ಮತ್ತಾಯ 27:43). ಸ್ಪಷ್ಟವಾಗಿ, ಕೀರ್ತನೆ 22:13-18ರಲ್ಲಿರುವ ಮಾತುಗಳು ದಾವೀದನಿಗಿಂತಲೂ ಅಧಿಕವಾಗಿ ಯೇಸುವಿಗೆ ಅನ್ವಯವಾಗುತ್ತವೆ.[28]

ಕ್ರಿಸ್ತನು **ಸಭಾಮಧ್ಯದಲ್ಲಿ . . . ಸ್ತುತಿ**[ಸುವವನಾಗಿಯೂ] **ಪದಗಳನ್ನು ಹಾಡುವ**[ವನಾಗಿಯೂ] ಚಿತ್ರಿಸಲ್ಪಟ್ಟಿದ್ದಾನೆ. "ಸಭಾ" ಎಂದು ಅನುವಾದಿಸಲ್ಪಟ್ಟಿರುವ ಪದವು ἐκκλησία (*ekklēsia*, "ಸಭೆ"). ಈ ವಾಕ್ಯಭಾಗವು "ಯೇಸು ಯಾವಾಗ ಸಭೆಯ ಮಧ್ಯದಲ್ಲಿ ಹಾಡಿದನು?" ಎಂಬ ಪ್ರಶ್ನೆಯನ್ನು ಎಬ್ಬಿಸುತ್ತದೆ (ವ. 12). ಆತನು ಸಭಾಮಂದಿರದ ಆರಾಧನಾ ಸಮಯಗಳಲ್ಲಿ ಬಹಳಷ್ಟು ಸಾರಿ ಹಾಡಿರಬಹುದಾದರೂ, ಆತನ ಹಾಡುವಿಕೆಯ ಒಂದೇ ಉದಾಹರಣೆಯು ನಮ್ಮ ಮುಂದಿರುತ್ತದೆ (ಮತ್ತಾಯ 26:30). ಆದರೂ, ಇಲ್ಲಿ ಅರ್ಥವು ಏನೆಂದರೆ ಯೇಸು ತನ್ನ ಸಹೋದರರ ಜೊತೆಗೂಡಿ ಹಾಡುವದನ್ನು ಮುಂದುವರೆಸಿರುತ್ತಾನೆ ಎಂಬದೆ! ಈ ಹೇಳಿಕೆಗೆ "ಸಭೆಯ ನಡುವೆ" (KJV) ಎಂಬದಾಗಿ ಸರಿಯಾದ ಅನುವಾದ

ಮಾಡಲಾಗಿರುತ್ತದೆ, ಅದು ಇಂದು, ಯೇಸು ಒಂದು ಅರ್ಥದಲ್ಲಿ ನಮ್ಮೊಂದಿಗೆ ಹಾಡುತ್ತಾನೆ ಎಂದು ಸೂಚಿಸುವದಾಗಿದೆ.[29] ಇಂದು ಆತನ ಸಹೋದರರಾದ ನಾವು ಆರಾಧನೆಯಲ್ಲಿ ನಾವು ಹಾಡುತ್ತಿರುವಾಗಲೂ, ಆತನು ತನ್ನ ಆತ್ಮದಲ್ಲಿ ಹಾಡುತ್ತಿರಬಹುದು (ಮತ್ತಾಯ 18:20; 28:20).

"ಸಭಾ" ಎಂಬುದು ಆತನ ಸಹೋದರರ ಸಭೆಯನ್ನು ಸೂಚಿಸುತ್ತದೆ, ಆದರೆ ಆ ಸಭೆಗೆ ಮೊದಲ ಶತಮಾನದಲ್ಲಿ ಸಾಮಾನ್ಯವಾದ ಲೌಕಿಕ ಅರ್ಥವೂ ಇತ್ತು (ನೋಡಿರಿ ಅಪೊಸ್ತಲರ ಕೃತ್ಯಗಳು 19:41). ಯೇಸು ಮತ್ತಾಯ 26:30ರಲ್ಲಿ ತನ್ನ ಶಿಷ್ಯರ ಸಂಗಡ ಒಂದು ಕೂಟದಲ್ಲಿ ಇದ್ದನು, ಅದು ಆತನು ತನ್ನ ರಕ್ತದಿಂದ ಕೊಂಡುಕೊಳ್ಳಲಿದ್ದ ಸಭೆ ಆಗಿರಲಿಲ್ಲ (ಅಪೊಸ್ತಲರ ಕೃತ್ಯಗಳು 20:28; ASV). ಹೇಗೂ, ಇಬ್ರಿಯರಿಗೆ ಪತ್ರಿಕೆಯು ಬರೆಯಲ್ಪಡುವ ಹೊತ್ತಿಗೆ, *ekklēsia* ಎಂಬ ಪದವು ತಕ್ಷಣವೇ ಯೇಸು ಕ್ರಿಸ್ತನ ಸಭೆಯನ್ನು ಜ್ಞಾಪಕಕ್ಕೆ ತರುತ್ತಿತ್ತು.

ಈ ತನ್ನ ಸಹೋದರರೊಂದಿಗೆ ಹಾಡುವಿಕೆಯು ಈಗ ಒಂದು ಆತ್ಮೀಕ ರೀತಿಯಲ್ಲಿ ಕ್ರೈಸ್ತರೊಂದಿಗೆ ಹಾಡುವದನ್ನು ಸೂಚಿಸತಕ್ಕದ್ದು. ಈ ವಾಸ್ತವಾಂಶವನ್ನು ಈಗ ಆತನು ಪರಲೋಕದಲ್ಲಿ ನಮ್ಮ ಸಂಗಡ ಕರ್ತನ ಭೋಜನ ಸಂಸ್ಕಾರದಲ್ಲಿ ಪಾಲುಗಾರರನಾಗುವದೊಂದಿಗೆ ಹೋಲಿಕೆ ಮಾಡತಕ್ಕದ್ದಾಗಿದೆ (ಮತ್ತಾಯ 26:29).

**ವಚನ 13. ನಾನು ದೇವರ ಮೇಲೆ ಭರವಸವಿಟ್ಟವನಾಗಿರುವೆನು** ಎಂಬುದು ಯೆಶಾಯ 8:17 ಮತ್ತು 2 ಸಮುವೇಲ 22:3ರ LXX ಅನುವಾದದಿಂದ ತೆಗೆದುಕೊಂಡ ಉಲ್ಲೇಖನವಾಗಿದೆ (ಅಲ್ಲದೆ ಕೀರ್ತನೆ 18:2ನ್ನು ಸಹ ನೋಡಿರಿ). ಯೆಶಾಯ 8:17, 18 ವಚನಗಳು ಅನೇಕ ಸಾರಿ ಕ್ರಿಸ್ತನಿಗೆ "ಒಂದು ಎಡವುವ ಕಲ್ಲು" ಎಂಬದಾಗಿ ಅನ್ವಯಿಸಲ್ಪಟ್ಟಿರುತ್ತದೆ (ಯೆಶಾಯ 8:14).[30] ಆತನು ಭೂಮಿಯಲ್ಲಿದ್ದ ವೇಳೇ, ಯೇಸುವು ಯೆಶಾಯನಂತೆಯೇ, ಪೂರ್ಣವಾಗಿ ಮನುಷ್ಯನಾಗಿರುವ ಸ್ಥಾನದಲ್ಲಿದ್ದನು, ಮತ್ತು ಆದದರಿಂದ ದೇವರಲ್ಲಿ ಭರವಸವಿಡುವ ಅಗತ್ಯವಿತ್ತು. ಹೇಗೂ, ಮತ್ತಾಯ 27:43ರಲ್ಲಿ ಅದು ಕುಚೋದ್ಯವಾಗಿ ಬಳಸಲ್ಪಟ್ಟಿರುತ್ತದೆ, ಅಲ್ಲಿ ಜನರ ಗುಂಪು ಯೇಸುವು "ನಾನು ದೇವಕುಮಾರನು" ಎಂದು ಹೇಳಿದ್ದನ್ನು ಉಲ್ಲೇಖಿಸುತ್ತಾರೆ. ಹಾಗಿದ್ದರೂ, ಇದು ಶಿಲುಬೆಯ ಮೇಲೆ ನಮ್ಮ ಕರ್ತನ ಹೃದಯದ ನಿಜವಾದ ಮಾತುಗಳಾಗಿದ್ದವು. ಶರೀರದಲ್ಲಿರುವ ವೇಳೆ, ಆತನು "ದೇವರ ಮೇಲೆ ಸಂಪೂರ್ಣ ಅವಲಂಬಿತನಾಗಿರು ಮಿತಿಗಳೊಳಗೆ ಜೀವಿಸುವದು" ಅಗತ್ಯವಾಗಿತ್ತು, ಮತ್ತು ತಾನು ಸಂಘಟಿಸಿದ್ದ ದೇವರ ಹೊಸ ಸಮುದಾಯವು ಅದನ್ನೇ ಮಾಡಬೇಕಾಗಿತ್ತು.[31]

ಯೇಸು ತಂದೆಯಲ್ಲಿಟ್ಟಿದ್ದ ಸಂಪೂರ್ಣ ಭರವಸವು ಕೀರ್ತನೆ 16:8-11ರಲ್ಲಿ ವ್ಯಕ್ತಪಡಿಸಲ್ಪಟ್ಟಿದೆ: "ನಾನು ಯೆಹೋವನನ್ನು ಯಾವಾಗಲೂ ನನ್ನೆದುರಿಗೇ ಇಟ್ಟುಕೊಂಡಿದ್ದೇನೆ; ಆತನು ನನ್ನ ಬಲಗಡೆಯಲ್ಲಿ ಇರುವದರಿಂದ ನಾನು ಎಂದಿಗೂ ಕದಲುವದಿಲ್ಲ . . ." ಈ ವಾಕ್ಯಭಾಗವು ಅಪೊಸ್ತಲರ ಕೃತ್ಯಗಳು 2:25-28ರಲ್ಲಿ, ಪಂಚಾಶತ್ತಮ ದಿನದಂದು ಪೇತ್ರನು ಮಾಡಿದ ಪ್ರಸಂಗದಲ್ಲಿ ಉಲ್ಲೇಖಿಸಲ್ಪಟ್ಟಿದೆ. ಈ ಭರವಸವು ಶಿಲುಬೆಯ ಮೇಲೆ ಯೇಸು ತನ್ನ ಆತ್ಮವನ್ನು ತಂದೆಯಾದ ದೇವರಿಗೆ ಒಪ್ಪಿಸಿ ಕೊಡುವಾಗ ಸಂಪೂರ್ಣವಾಗಿ ತೋರ್ಪಡಿಸಲ್ಪಟ್ಟಿತು (ಲೂಕ 23:46). ಪುನಃ ಇಲ್ಲಿ ಒತ್ತು ಕ್ರಿಸ್ತನ ಮಾನವತ್ವದ ಮೇಲೆ ಇರುತ್ತದೆ.

ಯೆಶಾಯ 8:18ನ್ನು ಉಲ್ಲೇಖನ ಮಾಡುತ್ತಾ ಲೇಖಕನು ಹೀಗೆ ಹೇಳುತ್ತಾನೆ, **ಇಗೋ ನಾನೂ ದೇವರು ನನಗೆ ದಯಪಾಲಿಸಿರುವ ಮಕ್ಕಳೂ ಇದ್ದೇವೆ.** ಇದು ಪ್ರವಾದನೆಯು ಎರಡು ವಿಧದಲ್ಲಿ ಅನ್ವಯವಾಗುವ ಇನ್ನೊಂದು ಪ್ರಕರಣದಂತೆ ತೋರುತ್ತದೆ, ಯಾಕೆಂದರೆ ಇದು ನಿಶ್ಚಯವಾಗಿಯೂ ಮೊದಲನೆಯದಾಗಿ ಇಸ್ರಾಯೇಲ್ ಮಕ್ಕಳಿಗೆ ಅನ್ವಯವಾಗುವಂಥದ್ದಾಗಿತ್ತು.[32] ದಾವೀದನ ವಂಶದ ಪ್ರತಿಯೊಬ್ಬ ಅರಸನು ಕ್ರಿಸ್ತನ ಹುದ್ದೆಯನ್ನು

ಪ್ರತಿನಿಧಿಸಿದ ಪ್ರಕಾರವಾಗಿಯೇ, ಪ್ರತಿಯೊಬ್ಬ ನಿಜವಾದ ಪ್ರವಾದಿಯು ಕ್ರಿಸ್ತನ ಪ್ರವಾದನಾ ಹುದ್ದೆಯನ್ನು ಪ್ರತಿನಿಧಿಸುವವನಾಗಿದ್ದನು.

ಕ್ರಿಸ್ತನು "ಪುತ್ರರನ್ನು" ಅಥವಾ "ಮಕ್ಕಳನ್ನು" ಹೊಂದಿರುವನೆಂಬುದು ಹೊಸ ಒಡಂಬಡಿಕೆಯಲ್ಲಿ ಇಬ್ರಿಯರಿಗೆ ಪತ್ರಿಕೆಯಲ್ಲಿ ಮಾತ್ರವೇ ಇರುವ ವಿಶಿಷ್ಟತೆಯಾಗಿದೆ. ಯೆಶಾಯ 53ನೇ ಅಧ್ಯಾಯವು ಬಾಧೆಯನ್ನನುಭವಿಸುವ ಸೇವಕನಿಗೆ "ಸಂತಾನ" ಇರುವದಿಲ್ಲ ಎಂದು ಹೇಳುತ್ತದೆ (ವ. 8), ಆದಾಗ್ಯೂ ಪ್ರವಾದಿಯು ಹೀಗೆ ಸೇರಿಸುತ್ತಾನೆ, ". . . ತನ್ನ ಸಂತಾನವನ್ನು ನೋಡುವನು" (ವ. 10). ಕ್ರಿಸ್ತನು ತನ್ನಮರಣ, ಪುನರುತ್ಥಾನ, ಮತ್ತು ಪರಲೋಕಾರೋಹಣ ಸಮಯದಿಂದ ತನ್ನ ಸಂತಾನವನ್ನು ಸಭೆಯಲ್ಲಿ ನೋಡಿದ್ದಾನೆ. "ಪುತ್ರರು" ಅಥವಾ "ಸಂತಾನ" ಆಗಿರುವವರು ಕ್ರಿಸ್ತನ ಜೊತೆಗೂಡಿ ದೇವರಲ್ಲಿ ಭರವಸವಿಡತಕ್ಕದ್ದು. ಕ್ರಿಸ್ತನು ನಿರಂತರವಾಗಿ ತನ್ನ ಮಕ್ಕಳ ಬಗ್ಗೆ ದೇವರ ಸಂಗಡ ಮಾತಾಡುತ್ತಾನೆ. ಆತನು ಪರಲೋಕದಲ್ಲಿ ನಮ್ಮ ಮಧ್ಯಸ್ಥನಾಗಿ ತಂದೆಯ ಮುಂದೆ ನಮ್ಮನ್ನು ಪ್ರತಿನಿಧಿಸುತ್ತಾನೆ (ಇಬ್ರಿಯ 7:25), ಮತ್ತು ನಾವು ಆತನನ್ನು ಭೂಮಿಯ ಮೇಲೆ ಪ್ರತಿನಿಧಿಸಬೇಕು.

ಇಬ್ರಿಯರಿಗೆ ಪತ್ರಿಕೆಯಲ್ಲಿ ಹಳೆಯ ಒಡಂಬಡಿಕೆಯ ಉಲ್ಲೇಖನಗಳು ಬಳಸಲ್ಪಟ್ಟಿರುವ ರೀತಿಯು ಅವುಗಳನ್ನು ಅವುಗಳ ನಿಜವಾದ ಸನ್ನಿವೇಶದಿಂದ ಹೊರಗೆ ತೆಗೆದುಕೊಳ್ಳುವದಿಲ್ಲ, ಯಾಕೆಂದರೆ ಅವುಗಳೆಲ್ಲಾ ಶಾಸ್ತ್ರಗಳ ಅತ್ಯಂಥ ಶ್ರೇಷ್ಠವಾದ ಸನ್ನಿವೇಶದೊಂದಿಗೆ ಸಾಮರಸ್ಯದಲ್ಲಿರುತ್ತವೆ. ಹಳೆಯ ಒಸಂಬಡಿಕೆಯ ಉತ್ತಮ ಪರಿಚಯ ಹೊಂದಿದ್ದ ಇಬ್ರಿಯ ಕ್ರೈಸ್ತರಿಗೆ ಪರಿಣಾಮಕರವಾಗಿ ಬರೆಯುವದಕ್ಕೆ ಆರಂಭವನ್ನು ಸಹ ಮಾಡಬೇಕೆಂದರೆ, ಲೇಖಕನು ಶಾಸ್ತ್ರಗಳನ್ನು ಎಚ್ಚರಿಕೆಯಿಂದ, ಆತನ ಯೆಹೂದಿ ಸಹೋದರರು ಅಂಗೀಕರಿಸಿಕೊಳ್ಳುವ ರೀತಿಯಲ್ಲಿ ಬಳಸಬೇಕಾಗಿತ್ತು. ಈ ಉಲ್ಲೇಖನಗಳಲ್ಲಿ ಮೊದಲನೆಯದ್ದಕ್ಕೆ ಸಂಬಂಧಿಸಿದಂತೆ, Bruce ಹೀಗೆ ಹೇಳುತ್ತಾನೆ, "C. H. Doddನ ಪ್ರಬಂಧದ ಒಂದು ಉತ್ತಮ ಉದಾಹರಣೆಯೆಂದರೆ ಮೂಲಭೂತ ಹಳೆಯ ಒಡಂಬಡಿಕೆಯ ಉಲ್ಲೇಖನಗಳು ಬೇರ್ಪಡಿಸಲಾದ ಪುರಾವೆ-ವಾಕ್ಯಗಳಲ್ಲ, ಆದರೆ ತಮ್ಮೊಂದಿಗೆ ಸೂಚ್ಯಾರ್ಥದಿಂದ ಸನ್ನಿವೇಶಗಳನ್ನು ಹೊತ್ತೊಯ್ಯುವಂಥವುಗಳಾಗಿವೆ."[33]

ನಮ್ಮಲ್ಲಿ ಒಬ್ಬನಂತಾಗಲು ಮತ್ತು ಮರಣವನ್ನು ಅನುಭವಿಸುವದಕ್ಕಾಗಿ ತನ್ನನ್ನು ತಗ್ಗಿಸಿಕೊಳ್ಳುವ ಮೂಲಕ, ಕ್ರಿಸ್ತನು ದೇವರ ಮಕ್ಕಳು ಮತ್ತು ಬಾಧ್ಯಸ್ಥರಾಗಿ ನಮ್ಮ ಪುತ್ರಸ್ವೀಕಾರವನ್ನು ಸಾಧ್ಯವಾಗಿಸಿದನು. ಮರಣವನ್ನು ಜಯಿಸುವ ಮೂಲಕ, ಆತನು ನಿತ್ಯಜೀವವನ್ನು ನಮ್ಮ ಕೈಗೆಟುಕುವಂತೆ ಮಾಡಿದನು. ನಾವು ಕ್ರೈಸ್ತರಾಗುವಾಗ, ನಾವು ಕ್ರಿಸ್ತನ ಸಹೋದರರಾಗಿ ಮಾಡಲ್ಪಡುತ್ತೇವೆ, ಆತನ ಸಭೆಯ ಶುದ್ಧೀಕರಿಸಲ್ಪಟ್ಟ ಸದಸ್ಯರಾಗಿ ಮಾಡಲ್ಪಡುತ್ತೇವೆ. ನಮಗೋಸ್ಕರ ಸಾಯುವದಕ್ಕೆ ಸಿದ್ಧನಾದವನಿಗೋಸ್ಕರ, ತಂದೆಯಲ್ಲಿ ಸಂಪೂರ್ಣ ಭರವಸವಿಡುವ ಆತನ ಮಾದರಿಯನ್ನು ಅನುಸರಿಸುವವರಾಗಿ ಜೀವಿಸುವದಕ್ಕೆ ನಿರ್ಧಾರ ಮಾಡಿಕೊಳ್ಳೋಣ.

ಬಾಧೆಯನ್ನನುಭವಿಸುವವನಾದ ಕ್ರಿಸ್ತನು ಉನ್ನತ್ತಕ್ಕೇರಿಸಲ್ಪಟ್ಟದ್ದು (2:14-18)

**2:14-16**

**[14]ಇದಲ್ಲದೆ ಮಕ್ಕಳು ರಕ್ತ ಮಾಂಸಧಾರಿಗಳಾಗಿರುವದರಿಂದ ಆತನೂ ಅವರಂತೆಯೇ ಆದನು. ತನ್ನ ಮರಣದಿಂದಲೇ ಮರಣಾಧಿಕಾರಿಯನ್ನು ಅಂದರೆ ಸೈತಾನನನ್ನು ಅಡಗಿಸಿಬಿಡುವದಕ್ಕೂ,**

**[15]ಮರಣಭಯದ ದೆಸೆಯಿಂದ ತಮ್ಮ ಜೀವಮಾನದಲ್ಲೆಲ್ಲಾ ದಾಸತ್ವದೊಳಗಿದ್ದವರನ್ನು ಬಿಡಿಸುವದಕ್ಕೂ ಅವರಂತೆ ರಕ್ತಮಾಂಸಧಾರಿಯಾದನು. [16]ಆತನು ದೇವದೂತರನ್ನು ಹಿಡಿದವನೆಂದು ಬರೆದಿಲ್ಲ; ಅಬ್ರಹಾಮನ ಸಂತತಿಯನ್ನು ಕೈಹಿಡಿದಿದ್ದಾನಷ್ಟೆ.**

ಯೇಸುವಿನ ಕುರಿತಾಗಿ ಎಬ್ಬಿಸಬಹುದಾದ ಅತ್ಯಂಥ ದೊಡ್ಡ ಪ್ರಶ್ನೆಗಳಲ್ಲೊಂದ ಎಂದರೆ ಇದೆ: "ಯೇಸು ಏಕೆ ಮನುಷ್ಯನಾದನು?" 2:14-18ರಲ್ಲಿ ಈ ಪ್ರಶ್ನೆಗೆ ನಾವು ಮೂರು ಹೃದಯಸ್ಪರ್ಶಿಸುವ ಉತ್ತರಗಳನ್ನು ಕಂಡುಕೊಳ್ಳಲಿದ್ದೇವೆ.

**ವಚನ 14.** ಕ್ರಿಸ್ತನು ಮತ್ತು ತನ್ನ **ಮಕ್ಕಳು** ಒಂದು ಕುಟುಂಬವಾಗಬೇಕು ಮತ್ತು ಒಂದೇ ಸ್ವಭಾವದಲ್ಲಿ ಪಾಲುಗಾರರಾಗಬೇಕು ಎಂಬುದು ದೇವರ ಚಿತ್ತವಾಗಿತ್ತಾದದ್ದರಿಂದ, ಕ್ರಿಸ್ತನು ಮರಣವನ್ನು ಹೊಂದುವಷ್ಟರ ತನಕ ಸಹ ಮಾನವ ಜೀವನವನ್ನು ಅನುಭವಿಸುವದು ಅವಶ್ಯಕವಾಗಿತ್ತು. ಆತನು ಸಂಪೂರ್ಣವಾಗಿ ನಮ್ಮಂತೆಯೇ ಇರುವದಕ್ಕಾಗಿ ಮಾನವ ಸ್ವಭಾವವನ್ನು ಧರಿಸಿಕೊಂಡನು. **ಪಾಲುಗಾರ** ಎಂಬುದು κοινωνία (*koinōnia*) ಎಂಬ ಪದದಿಂದ ಬಂದದ್ದಾಗಿದೆ, ಅದು "ಅನ್ಯೋನ್ಯತೆ" ಎಂಬುದಕ್ಕೆ ಇರುವ ಸಾಮಾನ್ಯವಾದ ಪದವಾಗಿದೆ.

NIVಯು ಹೀಗೆ ಹೇಳುತ್ತದೆ, "ಮಕ್ಕಳು ರಕ್ತ ಮತ್ತು ಮಾಂಸವನ್ನು ಹೊಂದಿರುವದರಿಂದ, ಆತನು ಸಹ ಅವರ ಮಾನವತ್ವದಲ್ಲಿ ಪಾಲುಗಾರನಾದನು. . . ." "ಆಗಿರುವದರಿಂದ" ಮತ್ತು "ಪಾಲುಗಾರನಾದನು" ಎಂಬ ಎರಡು ಕ್ರಿಯಾಪದಗಳು ಎರಡು ಬೇರೆ ಬೇರೆಯಾದ ಒತ್ತನ್ನು ಪ್ರತಿಬಿಂಬಿಸುತ್ತವೆ. ಮೊದಲನೆಯದು "ಮನುಷ್ಯರಲ್ಲಿ ಒಂದು ಕುಲವು ಇರುವಷ್ಟು ಕಾಲ ಅವರು ಹಂಚಿಕೊಳ್ಳುವ ಒಂದು ಸಾಮಾನ್ಯವಾದ ಸ್ವಭಾವವನ್ನು ಗುರುತಿಸುತ್ತದೆ," ಮತ್ತು ಎರಡನೆಯದು "ಸ್ವಯಂಚಿತ್ತದಿಂದ ಮಾನವತೆಯನ್ನು ಅಂಗೀಕರಿಸಿಕೊಳ್ಳುವದನ್ನು" ವ್ಯಕ್ತಪಡಿಸುತ್ತದೆ.[34] Docetism (ಕ್ರಿಸ್ತನ ಶರೀರ ಮನುಷ್ಯ ಶರೀರವಲ್ಲವೆಂಬ ಪಾಷಂಡವಾದ), ಒಂದು ಆದಿ ಕ್ರೈಸ್ತ ಪಾಷಂಡವಾದ ಆಗಿದ್ದು, ಯೇಸು ಕೇವಲ ಮಾನವನಂತೆ *ತೋರಿದನಷ್ಟೆ*, ಮಾಂಸ ಮತ್ತು ರಕ್ತನ್ನು ಹಂಚಿಕೊಳ್ಳಲಿಲ್ಲ ಎಂದು ಬೋಧಿಸುವದಾಗಿತ್ತು. "Docetism" ಎಂಬ ಪದವು ಗ್ರೀಕ್ ಪದವಾದ *dokeō* ಎಂಬುದರಿಂದ ಬರುತ್ತದೆ, ಅದರರ್ಥವು "ಹಾಗಿರುವಂತೆ ತೋರು" ಎಂದಾಗಿರುತ್ತದೆ. ಇಬ್ರಿಯರಿಗೆ ಪತ್ರಿಕೆಯು ಆತನ ಶೋಧನೆಗಳು ನಿಜವಾಗಿದ್ದವೆಂದು ತೋರಿಸಿ ಕೊಡುವ ಮೂಲಕ ಆ ಅಭಿಪ್ರಾಯವನ್ನು ಸದಾಕಾಲಕ್ಕೂ ಖಂಡಿಸುತ್ತದೆ (4:14-16; 5:8).

**ಮರಣಾಧಿಕಾರಿ** ಎಂಬುದೇನೆಂದು ನಾವು ತಿಳಿಯದವರಾಗಿರಬಹುದು, ಆದರೆ ಅದು ಜನರನ್ನು ದೇವರಿಂದ ಅಗಲಿಸುತ್ತದೆ ಎಂಬುದನ್ನಂತೂ ಬಲ್ಲೆವು. ಸೈತಾನನು ಪಾಪವನ್ನು ಪ್ರಚೋದಿಸಿದನು, ಮತ್ತು ಪಾಪವು ಮರಣವನ್ನು ತರುತ್ತದೆ (ರೋಮಾ 6:23; ಎಫೆಸ 2:1). ನಾವು ಪಾಪ ಮಾಡುವಾಗ ಆತ್ಮೀಕವಾಗಿ ಮರಣಿಸುತ್ತೇವೆ, ಆದರೆ ಈ ವಚನದ ಸನ್ನಿವೇಶದಲ್ಲಿ ಮರಣ ಎಂಬುದು ಶಾರೀರಿಕವೆಂದು ಕಾಣುತ್ತದೆ. ಸೈತಾನನು ಅಂಧಕಾರದ ಮತ್ತು ಮರಣ ಮಂಡಲದ ಅರಸನಾಗಿದ್ದಾನೆ (ನೋಡಿರಿ ಕೊಲೊಸ್ಸೆ 1:13, 14). ಸೈತಾನನ ಸೋಲು ಯೇಸುವಿನ ಪುನರುತ್ಥಾನದ ಮೂಲಕವಾಗಿ ಉಂಟಾಯಿತು ಅದು ಈ ಪತ್ರಿಕೆಯಲ್ಲಿ ಅಂತಿಮ ಸ್ತೋತ್ರಾರ್ಪಣೆಯಲ್ಲಿ ಮಾತ್ರವೇ ಪ್ರಸ್ತಾಪಿಸಲ್ಪಟ್ಟಿದ್ದಾಗ್ಯೂ (13:20), ಅದು 6:1, 2ರಲ್ಲಿ ಸೂಚ್ಯಾರ್ಥವಾಗಿ ತಿಳಿಸಲ್ಪಟ್ಟಿರುತ್ತದೆ.

ಸೈತಾನನ ಈ ಶಕ್ತಿಯನ್ನು ಸೋಲಿಸುವ ಉದ್ದೇಶಕ್ಕಾಗಿಯೇ "ವಾಕ್ಯವು ನರಾವತಾರವೆತ್ತಿ"ತು (ಯೋಹಾನ 1:14). **ಅಡಗಿಸಿಬಿಡುವದಕ್ಕೂ** (ಶಕ್ತಿಯಿಲ್ಲದ್ದಾಗಿ

ಮಾಡುವದಕ್ಕೆ) καταργέω (*katargeō*), ಎಂಬುದರ ಅರ್ಥವು KJV ಅನುವಾದವಾಗಿರುವ "ನಾಶಮಾಡುವದಕ್ಕೆ" ಎಂಬುದು ಸೂಚಿಸುವಂತೆ ಇಲ್ಲದಂತೆ ವಿನಾಶಗೊಳಿಸುವದು ಎಂದಾಗಿರುವದಿಲ್ಲ. ಬದಲಾಗಿ, ಅದರರ್ಥವು "ನಿಷ್ಪ್ರಯೋಜನ ಗೊಳಿಸು" ಅಥವಾ "ಶೂನ್ಯಗೊಳಿಸು" ಎಂದಾಗಿದೆ. ಯೋಹಾನನು ಸೈತಾನನ ಶಕ್ತಿಯ ವಿಷಯದಲ್ಲಿ ಅದನ್ನೇ ಹೇಳುತ್ತಾನೆ. ಮೊದಲನೆಯ ಯೋಹಾನ 3:8 ನಮಗೆ ತಿಳಿಸುವದೇನೆಂದರೆ, "ಸೈತಾನನ ಕೆಲಸಗಳನ್ನು ಲಯಮಾಡುವದಕ್ಕೋಸ್ಕರವೇ ದೇವಕುಮಾರನು ಪ್ರತ್ಯಕ್ಷನಾದನು." ಯೇಸುವು ಮಾತ್ರವೇ ಪರಿಪೂರ್ಣನಾಗಿ ಜೀವಿಸುವದಕ್ಕೆ ಮತ್ತು ಆ ಮೂಲಕ ಸೈತಾನನ ಉದ್ದೇಶಗಳನ್ನು ಸೋಲಿಸುವದಕ್ಕೆ ಶಕ್ತನಾಗಿದ್ದನು. ಆತನು ಸೈತಾನನನ್ನು ತನ್ನ ಜೀವನ ಮತ್ತು ದೇವರ ವಾಕ್ಯದ ಮೂಲಕ ಕಟ್ಟಿ ಹಾಕಿದ್ದನು (ಮತ್ತಾಯ 4:1-11). ಆತನು ದೆವ್ವಗಳನ್ನು ಬಿಡಿಸುವದಕ್ಕೆ ಮುಂಚೆ ಸೈತಾನನನ್ನು ಕಟ್ಟಿ ಹಾಕಬೇಕಾಗಿತ್ತು (ಮತ್ತಾಯ 12:22-29). ಸೈತಾನನು ಅಂತಿಮವಾಗಿ ಪದಚ್ಯುತಿಗೊಳಿಸಲ್ಪಡುವದು ಸಹ ಕಟ್ಟಿಹಾಕಲ್ಪಡುವಿಕೆಯೆಂದು ಚಿತ್ರಿಸಲ್ಪಟ್ಟಿರುತ್ತದೆ. ಪ್ರಕಟನೆ 20:7-10 ಆತನ ಅಂತಿಮ ಪದಚ್ಯುತಿಯೆಂದು ತೋರುತ್ತದೆ ಯಾಕೆಂದರೆ ಆತನು ಆ ಬಳಿಕ "ಬೆಂಕಿ ಗಂಧಕಗಳುರಿಯುವ ಕೆರೆಯಲ್ಲಿ ದೊಬ್ಬಲ್ಪಡುವನು."

ದೊಡ್ಡ ವಿಪರ್ಯಾಸವೇನೆಂದರೆ ಯೇಸು ಮರಣವನ್ನು ಜಯಿಸುವದಕ್ಕೋಸ್ಕರ ತನ್ನನ್ನು ಮರಣಕ್ಕೆ ಈಡಾಗುವಂತೆ ಮಾಡಿಕೊಂಡನು.[35] ಕ್ರಿಸ್ತ ಯೇಸುವಿನಲ್ಲಿರುವದು ಮಾತ್ರವೇ ನಮಗೆ ಸೈತಾನ, ಮರಣ, ಮತ್ತು ಸಮಾಧಿಯ ಮೇಲೆ ಜಯವನ್ನು ಕೊಡುತ್ತದೆ (1 ಕೊರಿಂಥ 15:55-58).

**ವಚನ 15. ಮರಣಭಯ** ಪ್ರಬಲವಾದದ್ದು. ಮನುಷ್ಯರು ಬೇರೆ ಯಾವದು ಸಹ ಅವರನ್ನು ಮಾಡುವಂತೆ ಒತ್ತಾಯಿಸಲ್ಪಡುವದಕ್ಕಾಗದ ಸಂಗತಿಗಳನ್ನು ಅದರ ನಿಮಿತ್ತವಾಗಿ ಮಾಡುತ್ತಾರೆ. ಮಹಾ ನಂಬಿಕೆಯುಳ್ಳ ಕೆಲವು ಧೈರ್ಯಶಾಲಿ ಆತ್ಮಗಳು ಅವಮಾನಕ್ಕಿಂತ ಮುಂಚೆ ಮರಣವನ್ನು ಸ್ವೀಕರಿಸಿಕೊಳ್ಳುತ್ತವೆ, ಆದರೆ ಬಹುಪಾಲು ಜನರಿಗೆ "ಮರಣ ಭಯ"ವು ದಬ್ಬಾಳಿಕೆಯ ಒಂದು ಬಲವಾದ ಸಾಧನವಾಗಿರುತ್ತದೆ. ಕ್ರಿಸ್ತನು ಇದನ್ನು ತೆಗೆದು ಬಿಡುವದಾದರೆ, ಯಾವನೂ ನಮಗೆ ಮರಣದ ಭಯ ಅಥವಾ ಬೆದರಿಕೆಯನ್ನೊಡ್ಡಿ ಕೆಟ್ಟದ್ದನ್ನು ಮಾಡುವಂತೆ ಒತ್ತಾಯಿಸಿ ಯಶಸ್ವಿಗೊಳ್ಳಲಾರನು.

**ಬಿಡಿಸುವದಕ್ಕೂ** ἀπαλλάξῃ (*apallaxēi*), ಎಂಬುದು ಬೇರೊಂದು ಕಡೆಯಲ್ಲಿ ಲೂಕನ ಸುವಾರ್ತೆಯಲ್ಲಿ ಮಾತ್ರವೇ ಬಳಲ್ಪಟ್ಟಿದೆ. ಅದು ಲೂಕ 12:58ರಲ್ಲಿ ಅದು "ತಂಟೆಹರಿಸಿಕೊಳ್ಳಲು ಪ್ರಯತ್ನ ಮಾಡು" ಎಂದು ಮತ್ತು ಅಪೊಸ್ತಲರ ಕೃತ್ಯಗಳು 19:12ರಲ್ಲಿ "ಬಿಟ್ಟು ಹೋದವು" ಎಂದು ಅನುವಾದಿಸಲ್ಪಟ್ಟಿದೆ. ಈ ಪದದ ಅರ್ಥವು "ಪ್ರಾಯಶ್ಚಿತ್ತದ ಮೂಲಕ ಪಾಪದಿಂದ ಬಿಡಿಸು" ಎಂದಾಗಿರುತ್ತದೆ. ಒಬ್ಬನ ನಂಬಿಕೆಯು ಮರಣ ಭಯಂಕರತೆಗಳನ್ನು ಜಯಿಸುವಷ್ಟು ಬಲಿಷ್ಠವಾಗಿದ್ದರೆ, ಅದು ರಕ್ಷಣೆಯುಂಟು ಮಾಡುವ ನಂಬಿಕೆಯ ಅತ್ಯಂಥ ದೊಡ್ಡ ಭರವಸೆಯನ್ನು ಒದಗಿಸುತ್ತದೆ. ಕ್ರಿಸ್ತನೊಂದಿಗೆ ಒಂದುಗೂಡಿ ಮರಣದ ನದಿಯ ಬಳಿಗೆ ಬರುವವನು ಅದಕ್ಕೆ ಹೆದರುವ ಅಗತ್ಯವಿಲ್ಲ. ಅಲ್ಲಿ ಖಂಡಿತವಾಗಿಯೂ ಇನ್ನು ಮೇಲೆ ಮರಣವು ಇರುವದಿಲ್ಲ: "ಅವರು ಇನ್ನು ಮರಣಕ್ಕೆ ಗುರಿಯಾಗುವದೇ ಇಲ್ಲ. ಪುನರುತ್ಥಾನವನ್ನು ಹೊಂದಿದವರಾಗಿದ್ದು ದೇವದೂತರಿಗೆ ಸರಿಸಮಾನರೂ ದೇವರ ಮಕ್ಕಳೂ ಆಗಿದ್ದಾರೆ" (ಲೂಕ 20:36). Martin Lutherನು ಹೇಳಿದ್ದೇನೆಂದರೆ, "ಮರಣಕ್ಕೆ ಹೆದರುವವನು ಅಥವಾ ಸಾಯುವದಕ್ಕೆ ಮನಸ್ಸಿಲ್ಲದವನು ಒಬ್ಬ ಸಾಕಾದಂಥ ಕ್ರೈಸ್ತನಲ್ಲ. ಅಂಥ ಜನರಿಗೆ ಇನ್ನೂ ಪುನರುತ್ಥಾನದಲ್ಲಿ ನಂಬಿಕೆಯಿರುವದಿಲ್ಲ, ಮತ್ತು ಬರಲಿರುವ ಜೀವಕ್ಕಿಂತಲೂ ಈ ಜೀವವನ್ನೇ ಬಹಳ ಪ್ರೀತಿಸುವವರಾಗಿದ್ದಾರೆ."[36]

Chrysostomನು ತನ್ನ ದಿನಗಳಲ್ಲಿ ಕ್ರೈಸ್ತೀಯ ಶವಸಂಸ್ಕಾರದ ವೇಳೆ ಸಾರ್ವಜನಿಕವಾಗಿ ಪ್ರದರ್ಶಿಸಲ್ಪಡುತ್ತಿದ್ದ ಆರ್ಭಟದ ಗೋಳಾಡುವಿಕೆಯನ್ನು ಟೀಕಿಸಿದನು:

> ಈ ಜೀವನದಿಂದ ಹೊರಟು ಹೋಗಿರುವವರ ಕುರಿತು ಸಾರ್ವಜನಿಕ ಸ್ಥಳಗಳಲ್ಲಿ ಗೋಳಾಡುವದನ್ನು, ನರಳಾಡುವದನ್ನು, ಬೊಬ್ಬೆಯಿಡುವದನ್ನು ಮತ್ತು ಎಲ್ಲಾ ಅಯುಕ್ತವಾದ ವರ್ತನೆಗಳನ್ನು ನಾನು ಗಮನಿಸುವಾಗ, ಅದನ್ನು ನೋಡುವ ಅನ್ಯಜನರ ಮತ್ತು ಯೆಹೂದ್ಯರು ಹಾಗೂ ಪಾಷಂಡವಾದಿಗಳ ಮುಂದೆ, ಮತ್ತು ನಮ್ಮನ್ನು ಈ ಕಾರಣಕ್ಕಾಗಿ ಅಪಹಾಸ್ಯ ಮಾಡಿ ನಗುವವರ ಮುಂದೆ ನನಗೆ ನಾಚಿಕೆಯಾಗುತ್ತಿತ್ತು . . . ನೀವೆಲಾ ಈ ಜೀವನವನ್ನು ಗೋಳಾಡದೆಯೇ ಬಿಟ್ಟು ಹೋಗುವಂತೆ ದೇವರು ದಯಪಾಲಿಸಲಿ![37]

ಒಬ್ಬ ಪ್ರಿಯರ ಮರಣದಿಂದ ಸಾಂತ್ವನ ಹೇಳಲಿಕ್ಕಾಗದಷ್ಟು ಅಳುವ ಸನ್ನಾಹವು ಅವಿಶ್ವಾಸಿಗಳನ್ನು ಸೃಷ್ಟಿಸುವದಾಗಿತ್ತೆಂದು ಆತನ ನಂಬಿಕೆಯಾಗಿತ್ತು.

ಮನುಷ್ಯರು ಮರಣಕ್ಕೆ ಭಯಪಡಬೇಕೆಂದು ದೇವರು ಯೋಜನೆ ಮಾಡಿದ್ದಕ್ಕೆ ಎರಡು ಕಾರಣಗಳನ್ನು Albert Barnes ಮುಂದಿಡುತ್ತಾನೆ. ಮೊದಲನೆಯದು, ಭಯವು ಜನರನ್ನು ಮರಣಕ್ಕಾಗಿ ಸಿದ್ಧಪಡಿಸಿಕೊಳ್ಳುವಂತೆ ನಡಿಸುವದು. ನಮಗೆ ಮರಣಿಸುವ ಕುರಿತು ಕಳಕಳಿಯೇ ಇಲ್ಲವಾದಲ್ಲಿ, ನಾವು ಅವಶ್ಯಕವಾಗಿರುವ ಸಿದ್ಧತೆಗಳನ್ನು ನಿರ್ಲಕ್ಷಿಸುವೆವು. ಎರಡನೆಯದಾಗಿ, ಭಯವು ಜನರನ್ನು ತಮ್ಮನ್ನು ತಾವೇ ಕೊಂದುಕೊಳ್ಳುವದರಿಂದ ತಡೆಯುತ್ತದೆ. ಮರಣಿಸುವದಕ್ಕೆ ಭಯವಿಲ್ಲದವರು ತಮ್ಮ ಪ್ರಾಣಗಳನ್ನು ತೆಗೆದುಕೊಳ್ಳುವಂತೆ ಹತಾಶೆಯು ಕಾರಣವಾಗಬಹುದಾಗಿದೆ.[38] ನಿಷ್ಠೆಯಿಲ್ಲದವರು ಮತ್ತು ಅವಿಧೇಯರು ಭಯಪಡಬೇಕಾಗಿರುವ "ಎರಡನೆಯ ಮರಣ" ಇರುತ್ತದೆ (ಪ್ರಕಟನೆ 20:14, 15; 21:8).

ಒಂದು ಬಲವಾದ ನಂಬಿಕೆಯು ಮರಣಕ್ಕೆ ಭಯಪಡದಂತೆ ಕ್ರೈಸ್ತರಿಗೆ ಹೇಗೆ ಸಹಾಯವನ್ನು ಮಾಡಬಲ್ಲದು? ಮೊದಲನೆಯದಾಗಿ, ಅದು ಮೇಲೆ ನಮಗೊಂದು ನಿವಾಸವಿರುತ್ತದೆಂಬ ಭರವಸೆಯನ್ನು ಕೊಡುತ್ತದೆ (2 ಕೊರಿಂಥ 5:1). ಎರಡನೆಯದಾಗಿ, ಅದು ಮರಣದ ಕೊಂಡಿಯನ್ನು ಅಂತ್ಯಗೊಳಿಸುತ್ತದೆ (1 ಕೊರಿಂಥ 15:54, 55). ಮೂರನೆಯದಾಗಿ, ಅದು ಈ ಭೂಮಿಯ ಮೇಲಿನ ಜೀವಿತಕ್ಕಿಂತಲೂ "ಉತ್ತಮೋತ್ತಮ" ಆಗಿರುವ ಒಂದು ನಿತ್ಯತ್ವದ ನಂಬಿಕೆಯನ್ನು ಒದಗಿಸುತ್ತದೆ (ಫಿಲಿಪ್ಪಿ 1:22, 23).

ಯೆಹೂದ್ಯರು ಧರ್ಮಶಾಸ್ತ್ರಾಧೀನರಾಗಿ ಜೀವಿಸುವ ವೇಳೆ ಈ ಭಯದಿಂದ ಎಂದಿಗೂ ತಪ್ಪಿಸಿಕೊಳ್ಳಲಿಲ್ಲ. *The Midrash* ಹೇಳಿಕೆಯನ್ನು ಒಳಗೊಂಡಿರುತ್ತದೆ: "ಈ ಜೀವನದಲ್ಲಿ ಮರಣವು ಮನುಷ್ಯನಿಗೆ ಸಂತೋಷದಿಂದಿರುವಂತೆ ಆಸ್ಪದವನ್ನೇ ಕೊಡುವದಿಲ್ಲ."[39] ಗ್ರೀಕ್ ನಾಟಕಕಾರನಾದ Euripidesನು (c. 485-406 ಕ್ರಿ.ಪೂ.) ಯಾವ ಮನುಷ್ಯನೇ ಆಗಲಿ ಆತನಿಗೆ ಮರಣ ಭಯವಿಲ್ಲವಾದರೆ ಆತನು ನಿಜವಾಗಿಯೂ ಗುಲಾಮನಾಗಿರುವದಕ್ಕೆ ಸಾಧ್ಯವಿಲ್ಲ ಎಂದು ಬರೆದನು.[40] ತನ್ನ ಪುನರುತ್ಥಾನದ ಮೂಲಕ, ಯೇಸು ಎಲ್ಲಾ ಮಾನವರನ್ನು ಅಂತಹ ದಾಸತ್ವದೊಳಗಿಂದ ಬಿಡಿಸಿದನು. ಆತನು ಸಮಾಧಿಯಿಂದ ಪುನರುತ್ಥಾನಗೊಳಿಸಲ್ಪಟ್ಟ ನಿಮಿತ್ತವಾಗಿ, ನಾವು ಸಹ ಪುನರುತ್ಥಾನಗೊಳ್ಳುವೆವೆಂದು ಬಲ್ಲೆವು!

**ವಚನ 16. ಆತನು ದೇವದೂತರಿಗೆ ಸಹಾಯವನ್ನು ಕೊಡುವವನಲ್ಲ [ಹಿಡಿದವನಲ್ಲ]** ಎಂಬುದು ಅಕ್ಷರಶಃ ದೇವದೂತರನ್ನು "ಆತನು ಹಿಡಿದುಕೊಳ್ಳುವವನಲ್ಲ" ಎಂದಾಗಿರುತ್ತದೆ. ಇದು ಇಬ್ರಿಯ 8:9ರಲ್ಲಿ ಬಳಸಲಾಗಿರುವ ಅದೇ ಕ್ರಿಯಾಪದವಾಗಿದೆ, ಅಲ್ಲಿ ದೇವರು "ಇವರ [ಇಸ್ರಾಯೇಲ್ಯರ] ಕೈಹಿಡಿದು ಐಗುಪ್ತದೇಶದೊಳಗಿಂದ ಕರಕೊಂಡು ಬಂದನು" ಎಂದು

ಬರೆಯಲಾಗಿರುತ್ತದೆ. ಆತನು ಸಹಾಯ ಮಾಡುವ ದೃಷ್ಟಿಯಿಂದ "ಹಿಡಿದುಕೊಳ್ಳುವನು." Richard Francis Weymouthನು ತನ್ನ ಅನುವಾದದಲ್ಲಿ ಸರಿಯಾದ ಯೋಚನೆಯನ್ನು ವ್ಯಕ್ತಪಡಿಸುತ್ತಾನೆ: "ನಿಶ್ಚಯವಾಗಿಯೂ ಆತನು ತನ್ನ ಸಹಾಯ ಹಸ್ತವನ್ನು ನಿರಂತರವಾಗಿ ದೇವದೂತರಿಗೆ ಚಾಚುತ್ತಿಲ್ಲ, ಆದರೆ ಅಬ್ರಹಾಮನ ಸಂತತಿಯವರಿಗೇ ಆಗಿದೆ." ಯೇಸು ಯಾವದನ್ನು "ಹಿಡಿದುಕೊಂಡನು"? ಆತನು ನಮ್ಮ "ಮಾನವ ಸ್ವಭಾವವನ್ನು ಹಿಡಿದುಕೊಂಡನು ಮತ್ತು ಅದನ್ನು ತನ್ನದಾಗಿ [ಮಾಡಿಕೊಂಡನು]"; ಈ ಕಾರಣಕ್ಕಾಗಿಯೇ, ಇದು ಕ್ರಿಸ್ತನ ನರಾವತಾರದ ಕುರಿತಾದ ಒಂದು ಬಲವಾದ ವಾಕ್ಯಭಾಗವೆಂದು Philip Edgcumbe Hughesನು ಪರಿಗಣಿಸುತ್ತಾನೆ.[41]

ಯೇಸು ಮನುಷ್ಯರಿಗೆ ಸಹಾಯ ಮಾಡುವದಕ್ಕೋಸ್ಕರ ಮನುಷ್ಯನಾಗಿ ಜೀವಿಸಿದನು, ಅವರು ಇಲ್ಲಿ **ಅಬ್ರಹಾಮನ ಸಂತತಿ**[ಯವರು] ಎಂದು ಕರೆಯಲ್ಪಟ್ಟಿದ್ದಾರೆ. ಈ ಮಾತು ಕೇವಲ ಯೆಹೂದ್ಯರಿಗೆ ಮಾತ್ರವೇ ಅನ್ವಯಿಸುವದಿಲ್ಲ, ಆದರೆ ನಂಬಿಕೆಯ ಮೂಲಕ ದೇವರ ಮಕ್ಕಳಾಗುವ ಎಲ್ಲರಿಗೂ ಅನ್ವಯವಾಗುತ್ತದೆ. ಹಳೆಯ ಒಡಂಬಡಿಕೆಯ ಅಡಿಯಲ್ಲಿದ್ದ ನಂಬಿಗಸ್ತರು "ನಾವಿಲ್ಲದೆ" ಪರಿಪೂರ್ಣಗೊಳಿಸಲ್ಪಡಲಿಲ್ಲ (11:40). ಈ ಭಾವನೆಯು ಸಹ ಪೌಲನದ್ದಾಗಿದೆ, ಯಾಕೆಂದರೆ ಗಲಾತ್ಯ 3:7, 26-29ರಲ್ಲಿ, "ನಂಬುವವರು" "ಅಬ್ರಹಾಮನ ಮಕ್ಕಳು" ಎಂದು ಕರೆಯಲ್ಪಟ್ಟಿದ್ದಾರೆ. ಪೌಲನಿಂದ ಒತ್ತಿ ಹೇಳಲ್ಪಟ್ಟಿರುವ ಮುಖ್ಯವಾದ ಸತ್ಯವು ಏನೆಂದರೆ "ಕ್ರಿಸ್ತನಲ್ಲಿ ದೀಕ್ಷಾಸ್ನಾನ ಮಾಡಿಸಿಕೊಂಡವರು" "ನಂಬಿಕೆಯ ಮೂಲಕ ದೇವರ ಮಕ್ಕಳಾಗಿರುವವರು" ಎಂಬದೆ (ಗಲಾತ್ಯ 3:26, 27). ಕ್ರೈಸ್ತರೆಲ್ಲರೂ ನಂಬಿಕೆಯ ಪಿತೃವಿನ – ಅಬ್ರಹಾಮನ – ಆತ್ಮೀಕ ಸಂತತಿಯವರಾಗಿದ್ದಾರೆ.

ದೇವದೂತರು ಪುನಃ 13:2ರಲ್ಲಿ ಪ್ರಸ್ತಾಪಿಸಲ್ಪಟ್ಟಿರುತ್ತಾರಾದರೂ, 16ನೇ ವಚನವು ದೇವದೂತರು ಯೇಸುವಿಗಿಂತ ಕಡಿಮೆಯಾದವರು ಮತ್ತು ದೇವದೂತರ ಮೂಲಕ ಪಡೆದುಕೊಳ್ಳು ಆಶೀರ್ವಾದಗಳು ನಮಗೆ ಕ್ರಿಸ್ತನಲ್ಲಿ ಸಿಕ್ಕುವ ಆಶೀರ್ವಾದಗಳಿಂತ ಕಡಿಮೆಯಾದವುಗಳು ಎಂಬುದರ ಕುರಿತ ಚರ್ಚೆಗೆ ಸಂಬಂಧಿಸಿದಂತೆ ಕಡೇ ವಚನವಾಗಿರುತ್ತದೆ. ಇದು ಕ್ರಿಸ್ತನು ಮಾನವ ರೂಪವನ್ನು ಧರಿಸಿಕೊಂಡನೆಂಬುದನ್ನು ಪುನರಾವರ್ತಿಸುವದಕ್ಕೆ ರೂಪಿಸಲ್ಪಟ್ಟದ್ದಲ್ಲ, ಆದರೆ ಆತನು ಏಕೆ ಹಾಗೆ ಮಾಡಿದನೆಂಬುದಕ್ಕೆ ಕಾರಣವನ್ನು ಕೊಡುವದೇ ಆಗಿರುತ್ತದೆ. ಆತನು ದೇವದೂತರಿಗೆ ಸಹಾಯ ಮಾಡುವ ಬಗ್ಗೆ ಚಿಂತಿತನಾಗಿರಲಿಲ್ಲ, ಆತನು ದೇವದೂತರನ್ನು ಬಿಡಿಸುವದಕ್ಕೂ ಬರಲಿಲ್ಲ, ಆದರೆ ನಮಗೆ ಸಹಾಯ ಮಾಡುವದಕ್ಕೆ ಬಂದನು. ಅವರಿಗೆ ಪರಲೋಕದ ಎಲ್ಲಾ ಸವಲತ್ತುಗಳಿರುವದರಿಂದ, ದೇವದೂತರಿಗೆ ಈ ಸಹಾಯದ ಅಗತ್ಯವಿಲ್ಲವೆಂದು ನಾವು ನೆನಸುತ್ತೇವೆ. ಹೇಗೂ, ಅವರು ಪಾಪ ಮಾಡಿರುವದಾದಲ್ಲಿ, ಅವರಿಗೆ ಆತನು ಕೊಟ್ಟಿರುವ ಸಹಾಯಕ್ಕಿಂತಲೂ ಹೆಚ್ಚು ಅಗತ್ಯವಿರುತ್ತದೆ (2 ಪೇತ್ರ 2:4). ಪಾಪವನ್ನು ಮಾಡಿದ ದೇವದೂತರು ತಾವು ಮಾಡುವದೇನೆಂದು ಪೂರ್ಣ ತಿಳುವಳಿಕೆಯಿದ್ದೇ ಮಾಡಿರಬಹುದಾಗಿದೆ, ಆದರೆ ಮನುಷ್ಯನಾದರೋ ವಂಚಿಸಲ್ಪಟ್ಟನು. ಈ ಕಾರಣಕ್ಕಾಗಿ, ಮಾನವ ವಿಶ್ವಾಸಿಗೆ ಕ್ಷಮಾಪಣೆಯ ನಿರೀಕ್ಷೆಯು ದಯಪಾಲಿಸಲ್ಪಟ್ಟಿದೆ. "ಒಂದು ವೇಳೆ ಆತನು ಒಬ್ಬ ದೇವದೂತನಾಗಿದ್ದರೆ . . . , ಆಗ ಯೇಸು ದೇವದೂತರಿಗೆ ಸಹಾಯವನ್ನು ಮಾಡಿರುತ್ತಿದ್ದನು, ಆದರೆ ಆತನು ಸಮಾಯ ಮಾಡುವದು ಮನುಷ್ಯರಿಗೆ ಆಗಿರುವದರಿಂದ, ಆ ಕಾರಣದಿಂದ ಆತನು ಒಬ್ಬ ದೇವದೂತನಾಗಿದ್ದಿರಲಾರನು."[42]

**2:17, 18**

**[17]ಆದದರಿಂದ ಆತನು ಎಲ್ಲಾ ವಿಷಯಗಳಲ್ಲಿ ತನ್ನ ಸಹೋದರರಿಗೆ ಸಮಾನನಾಗಬೇಕಾಗಿ ಬಂತು. ಹೀಗೆ ಆತನು ಜನರ ಪಾಪಗಳನ್ನು ನಿವಾರಣಮಾಡುವದಕ್ಕಾಗಿ ದೇವರ ಕಾರ್ಯಗಳಲ್ಲಿ ಕರುಣೆಯೂ ನಂಬಿಕೆಯೂ ಉಳ್ಳ ಮಹಾಯಾಜಕನಾದನು. [18]ತಾನೇ ಶೋಧಿಸಲ್ಪಟ್ಟು ಬಾಧೆಯನ್ನು ಅನುಭವಿಸಿರುವದರಿಂದ ಶೋಧಿಸಲ್ಪಡುವವರಿಗೆ ಸಹಾಯಮಾಡುವದಕ್ಕೆ ಶಕ್ತನಾಗಿದ್ದಾನೆ.**

**ವಚನ 17.** ಕ್ರಿಸ್ತನು ಅಬ್ರಹಾಮನ ಸಂತತಿಯವರಿಗೆ ಸಹಾಯವನ್ನು ಮಾಡುವಂತಾಗಲು, ಆತನು [ನಮಗೆ] **ಸಮಾನನಾಗಬೇಕಾಗಿ** ಬಂತು. **ಆತನು ಎಲ್ಲಾ ವಿಷಯಗಳಲ್ಲಿ** ("ಪ್ರತಿಯೊಂದು ವಿಷಯದಲ್ಲಿ"; NRSV) ನಮ್ಮಂತೆಯೇ ಆದನು. ಆತನು ನಮ್ಮ ಹಾಗೆಯೇ ಸರ್ವವಿಷಯಗಳಲ್ಲಿ ಶೋಧನೆಗೆ ಗುರಿಯಾದನು (4:14, 15). ಆತನು ಅನುಭವಿಸಿದ ಶೋಧನೆಗಳನ್ನು ಆಲೋಚಿಸಿರಿ: ಬಡತನದ ಶೋಧನೆಗಳು, ಜೊತೆಯ ಮನುಷ್ಯರಿಂದ, ತನ್ನ ಸ್ವಂತ ಸಹೋದರರು ಮತ್ತು ತಾಯಿಯಿಂದ ಸಹ; ತನ್ನ ಮಿತ್ರರಿಂದ ಸದುದ್ದೇಶವುಳ್ಳ ಬೇಡಿಕೊಳ್ಳುವಿಕೆಗಳಿಂದ; ಸೈತಾನನಿಂದಾದ ಪರಿಶೋಧನೆಗಳಿಂದ; ಶಾರೀರಿಕ ಬಾಧೆಯಿಂದ ಮತ್ತು ದೇವರಿಂದ ಕೈಬಿಡಲ್ಪಟ್ಟದ್ದರಿಂದ ಬಂದ ಶೋಧನೆಗಳು. "ಹೋಲಿಸಿ ನೋಡುವದಾದರೆ, ನಾವು ಇದುವರೆಗೂ ಶೋಧನೆಯೆಂಬ ಕಪ್ಪು ಸಮುದ್ರದ ಮೇಲ್ಭಾಗವನ್ನಷ್ಟೇ ನೋಡಿದ್ದೇವೆ. ಯೇಸು ಅದರ ಆಳಗಳಿಗೂ ಜಿಗಿದಿದ್ದಾನೆ. ಆತನಿಗೆ ಎಲ್ಲವೂ ಗೊತ್ತಿದೆ. ಆತನು ನಮ್ಮ ಜೀವಿತಗಳಲ್ಲಿ ಸೈತಾನನನ್ನು ಗದರಿಸುತ್ತಾನೆ."[43] ಆತನು ಬಾಧೆ ಪಟ್ಟನು, ಆತನು ನಿಜವಾಗಿಯೂ ನಮ್ಮ ಬಗ್ಗೆ ಅನುತಾಪ ಹೊಂದಿದ್ದಾನೆ; ಆತನು ಪರಿಪೂರ್ಣನಾದ ಮಧ್ಯಸ್ಥನು. ಆತನು ಇದೆಲ್ಲವನ್ನೂ **ಕರುಣೆಯೂ ನಂಬಿಕೆಯೂ ಉಳ್ಳ ಮಹಾಯಾಜಕನಾಗಿ** ಇರುವದಕ್ಕೆ ಮಾಡಿದನು.

"ಮಹಾಯಾಜಕನು" ಎಂಬ ಮಾತು ಇದೇ ಮೊದಲ ಸಾರಿ ಶಾಸ್ತ್ರಗಳಲ್ಲಿ ಯೇಸುವಿಗೆ ನೇರವಾಗಿ ಅನ್ವಯಿಸಲ್ಪಟ್ಟಿರುತ್ತದೆ. ಕ್ರಿಸ್ತನ ಪಾತ್ರವು ಅತ್ಯಂಥ ದೊಡ್ಡ ಶಕ್ತಿ ಮತ್ತು ಮಹತ್ವಪೂರ್ಣತೆಯ ಕುರಿತು ವಾದಿಸುವದಕ್ಕಾಗಿ ಇದನ್ನು ಬರೆಯುವ ಹೊತ್ತಿಗೆ ಯೆಹೂದಿ ಮಹಾಯಾಜಕತ್ವವು ಇನ್ನೂ ಅಸ್ತಿತ್ವದಲ್ಲಿದ್ದಿರಬಹುದಾಗಿದೆ. ಯೆಹೂದಿಮತದಲ್ಲಿರುವ ಆ ವರ್ಣರಂಜಿತ ಮತ್ತು ಪ್ರಬಲವಾದ ಸ್ಥಾನದ ಕುರಿತು ನಿರಂತರವಾಗಿ ಪರೋಕ್ಷವಾಗಿ ಪ್ರಸ್ತಾಪ ಮಾಡುವದರಿಂದ ಕೆಲವರನ್ನು ಪುನಃ ಹಳೆಯ ಒಡಂಬಡಿಕೆಯೆಡೆಗೆ ಸೆಳೆಯಬಹುದಾಗಿದೆ.

ನಮ್ಮ ಮಹಾಯಾಜಕನಾಗಿ ಸೇವೆ ಮಾಡುವದರಲ್ಲಿ ಕ್ರಿಸ್ತನ ಇಡೀ ಕೆಲಸವು **ಪಾಪಗಳನ್ನು ನಿವಾರಣೆಮಾಡುವದು ಆಗಿತ್ತು**. "ಪಾಪ ನಿವಾರಣೆಯು" "ಸಂಧಾನಪಡಿಸುವಿಕೆ" (KJV) ಅಥವಾ "ಪಾಪಪ್ರಾಯಶ್ಚಿತ್ತ" (NIV) ಆಗಿರುತ್ತದೆ. ಯೆಹೂದಿ ಮಹಾಯಾಜಕನು ತಾನು ಅರ್ಪಿಸಿದ ಯಜ್ಞದ ಮೂಲಕ ಒಂದು ಸಾಂಕೇತಿಕ ಕಾರ್ಯವನ್ನು ಮಾಡುವವನಾಗಿದ್ದನು, ಆದರೆ ಆತನ ಕಾರ್ಯವು ನಿಜವಾಗಿಯೂ ಪಾಪವನ್ನು ನಿವಾರಿಸುವದಕ್ಕಾಗಲಿಲ್ಲ. ಆತನ ಸ್ಥಾನ ಮತ್ತು ಆತನ ಕೆಲಸ ಎರಡೂ ಅಧಿಕವಾಗಿ ಧಾರ್ಮಿಕ ಆಚರಣೆಯಂತಿದ್ದವಷ್ಟೆ, ಉದಾಹರಣೆಗೆ, ಪವಿತ್ರ ಉಡುಪುಗಳನ್ನು ಧರಿಸಿಕೊಳ್ಳುವದು, ಆರೋನನಿಗೆ ಉತ್ತರಾಧಿಕಾರಿಯಾಗಿರುವದು, ಮತ್ತು, ಮೊದಲ ಶತಮಾನದಲ್ಲಿ, ದೇಶದ ಕಾನೂನಾತ್ಮಕ ವ್ಯವಹಾರಗಳಲ್ಲಿ ಪಾಲ್ಗೊಳ್ಳುವದು ಸಹ, ಅದೆಲ್ಲವೂ ಕ್ರಿಸ್ತನು ಮಾಡುವದಕ್ಕಿದ್ದ ಮಹಾನ್ ಕೆಲಸಕ್ಕೆ ಛಾಯೆಯಾಗಿದ್ದವು.

"ನಿವಾರಣೆಮಾಡು" ಎಂಬುದು ἱλάσκομαι (*hilaskomai*) ಎಂಬ ಪದದಿಂದ ಅನುವಾದಿಸಲ್ಪಟ್ಟಿರುತ್ತದೆ. ಈ ಪದವು ಗ್ರೀಕ್.ರು ತಾವು ತಮ್ಮ ದೇವರುಗಳು ಕೋಪವನ್ನು

ಶಾಂತಗೊಳಿಸುತ್ತಿದ್ದರೆಂಬುದನ್ನು-ಇದು ಹೊಸ ಒಡಂಬಡಿಕೆಗೆ ಅಪರಿಚಿತವಾಗಿರುವ ಯೋಚನೆಯಾಗಿದೆ – ಸೂಚಿಸುವದಕ್ಕೆ ಅವರು ಬಳಸುತ್ತಿದ್ದ ಪದವಾಗಿದೆ. ಒಡಂಬಡಿಕೆ ಮಂಜೂಷದ ಮೇಲಿದ್ದ "ಕೃಪಾ ಸಿಂಹಾಸನ"ವನ್ನು ಸೂಚಿಸುವದಕ್ಕೆ LXX ಇದೇ ಪದವನ್ನು ಬಳಸುತ್ತದೆ, ಅದರ ಮೇಲೆಯೇ ಪಾಪಪರಿಹಾರಕ ದಿನದಂದು ಅರ್ಪಿಸಲಾಗುತ್ತಿದ್ದ ದೋಷಪರಿಹಾರಕ ಯಜ್ಞದ ರಕ್ತವನ್ನು ಪ್ರೋಕ್ಷಿಸಲಾಗುತ್ತಿತ್ತು (ವಿಮೋಚನಕಾಂಡ 25:16-22). ದೇವರು ಕ್ರಿಸ್ತನ ಮರಣದಲ್ಲಿ ತನ್ನ ಸ್ವಂತ ಪರಿಶುದ್ಧತೆಯ ಬೇಡಿಕೆಗಳನ್ನು ಸಂಧಿಸುವವನಾಗಿದ್ದನು.[44] ಆತನ ಬಾಧೆಯನ್ನನುಭವಿಸುವ ಯೋಚನೆಯು Phillips ತರ್ಜುಮೆಯ ಭಾವಾನುವಾದದಲ್ಲಿ ಪರಿಣಾಮಕಾರಿಯಾಗಿ ವ್ಯಕ್ತಪಡಿಸಲ್ಪಟ್ಟಿರುತ್ತದೆ: "ಶೋಧನೆಯಲ್ಲಿ ತನ್ನ ಸ್ವಂತ ಶೋಧನೆಯ ಕಾರಣದಿಂದ . . ."

ವರ್ಷಕ್ಕೊಮ್ಮೆ, ಜನರ ಪಾಪಗಳಿಗೆ ಪ್ರಾಯಶ್ಚಿತ್ತ ಮಾಡುವದಕ್ಕಾಗಿ ಮಹಾಯಾಜಕನು ಪರಿಶುದ್ಧ ಸ್ಥಳವನ್ನು ಪ್ರವೇಶಿಸುತ್ತಿದ್ದನು. ಮೊದಲ ಶತಮಾನದಲ್ಲಿ, "Yahweh" ಎಂಬ ಪವಿತ್ರ ಹೆಸರು ಉಚ್ಚರಿಸಲ್ಪಟ್ಟ ಏಕೈಕ ಸಂದರ್ಭವು Yom Kippur (ದೋಷಪರಿಹಾರಕ ದಿನ) ದಿನದಂದು ಎಂದು ಹೇಳಲಾಗುತ್ತದೆ. ಅದರ ಸಮರ್ಪಕವಾದ ಉಚ್ಚರಣೆಯು ಕಾಣೆಯಾಗಿರುತ್ತದೆಂಬುದರಲ್ಲಿ ಆಶ್ಚರ್ಯವೇನಿಲ್ಲ! "ಯೆಹೋವ" ಎಂಬ ಹೆಸರು ಕೇವಲ ಒಂದು ಮಿಶ್ರ ತಳಿಯದ್ದಾಗಿದ್ದು ಅದನ್ನು ಸಾಮಾನ್ಯವಾಗಿ ನಿಖರವಾದ ಉಚ್ಚಾರಣೆಯೆಂದು ಅಂಗೀಕರಿಸಲಾಗುವದಿಲ್ಲ.

ಈ ಪತ್ರಿಕೆಯ ಪ್ರಾಮುಖ್ಯವಾದ ಉದ್ದೇಶವು ಯೆಹೂದಿ ಮಹಾಯಾಜಕನು ಯೇಸುವಿಗಿಂತ ಕಡಿಮೆಯಾದವನು – ಮತ್ತು ಹಾಗಿದ್ದರೂ ಯೇಸುವಿನ ಛಾಯೆಯಾಗಿದ್ದನು ಎಂಬದನ್ನು ತೋರಿಸಿ ಕೊಡುವದಾಗಿತ್ತು. ಕ್ರಿಸ್ತನಲ್ಲಿ ನಾವು "ದೇವರಿಗೆ ಸಮರ್ಕರಾದ ನೀತಿಸ್ವರೂಪಿಗಳು" ಆದೆವು (2 ಕೊರಿಂಥ 5:18-21). ಪಾಪಗಳಿಗೆ ನಿವಾರಣೆಯಾಗು ವದಕ್ಕೆ ಒಂದು ಅವಶ್ಯಕವಾದ ದಾರಿಯಾಗಿ ಆತನು ನರಾವತಾರವೆತ್ತುವದು ಅಗತ್ಯವಾಗಿತ್ತು.[45] ಅದಕ್ಕೆ ಮನುಷ್ಯರೊಳಗೆ ಯಾವದೇ ಮಹಾಯಾಜಕನು ಪಾಪಕ್ಕೆ ಪ್ರಾಯಶ್ಚಿತ್ತ ಮಾಡಬಹುದಾದಕ್ಕಿಂತಲೂ ಒಂದು ಅತ್ಯಂಥ ಶ್ರೇಷ್ಠವಾದ ಯಜ್ಞದ ಅಗತ್ಯವಿತ್ತು.

ನಾವು ಮಾಡಿದ ಮತ್ತು ನಾಚಿಕೆ ಪಡುವ ಒಂದಕ್ಕಾಗಿ ಕ್ಷಮಾಪಣೆಯನ್ನು ಅನುಭವಿಸುವ ತನಕ, ಯೇಸುವು ಮಾಡಿರುವ ಕಾರ್ಯದ ಪರಿಣಾಮವು ಬೀರತಕ್ಕ ವಿಧದಲ್ಲಿ ನಮ್ಮ ಮೇಲೆ ಪ್ರಭಾವವನ್ನು ಬೀರುವದಕ್ಕೆ ಸಾಧ್ಯವಿಲ್ಲ. ಕ್ರಿಸ್ತನು ನಮಗೋಸ್ಕರ ಮರಣಿಸದೆಯೇ ನಮ್ಮ ಪರಿಸ್ಥಿತಿಯನ್ನು ಅರ್ಥಮಾಡಿಕೊಂಡಿರಬಹುದಿತ್ತಾದರೂ, ಆತನು ಬರುವ ಹೊರತು ಆತನ ಅನುತಾಪವನ್ನು ನಂಬುವದಕ್ಕೆ ನಮಗೆ ಬಹಳಷ್ಟು ಕಷ್ಟವಾಗುತ್ತಿತ್ತು. "ಒಂದು ಚಿತ್ರವು ಸಾವಿರ ಮಾತುಗಳಷ್ಟು ಯೋಗ್ಯವಾದದ್ದು; ಆದರೆ ಒಂದು ಪ್ರಾತ್ಯಕ್ಷಿಕೆಯು 10,000 ಪದಗಳಷ್ಟು ಯೋಗ್ಯವಾದದ್ದು. ಆ ಕಾರಣದಿಂದಲೇ ಯೇಸು ಭೂಮಿಗೆ ಬಂದನು."[46] ಆತನು ನಮ್ಮೆಲ್ಲಾ ವೇದನೆಗಳನ್ನು ಅನುಭವಿಸುವ ಮೂಲಕ ತನ್ನ ಪ್ರೀತಿಯನ್ನು ತೋರ್ಪಡಿಸಿದನು; ಆದದರಿಂದ, ನಾವು ಶೋಧನೆಗೊಳಗಾದಾಗ ನಮಗೆ ಹೇಗೆ ನೆರವು ನೀಡಬೇಕೆಂದು ಬಲ್ಲವನಾಗಿದ್ದಾನೆ. ಹಾಗಿಲ್ಲದಿದ್ದರೂ ಆತನಿಗೆ ಸಹಾಯ ಮಾಡುವ ಶಕ್ತಿಯು ಇರುತ್ತಿತ್ತು, ಆದರೆ ಈಗ ಆತನು ನಮ್ಮ ವಿಷಯದಲ್ಲಿ ಅನುತಾಪ ಪಡುವದಕ್ಕೆ ಉತ್ತಮವಾಗಿ ಅರ್ಹತೆಯನ್ನು ಹೊಂದಿರುತ್ತಾನೆ.

**ವಚನ 18.** "ಸಹಾಯ ಮಾಡುವದಕ್ಕೆ" ಅಥವಾ "ನೆರವು ನೀಡುವದಕ್ಕೆ" (KJV) ಎಂಬುದಕ್ಕಿರುವ ಪದವು βοηθέω (*boētheō*), ಇದು "ಅಗತ್ಯವಿದ್ದಾಗ ಸಹಾಯವನ್ನು ತರುವದು" ಎಂದರ್ಥವನ್ನು ಕೊಡಬಲ್ಲದು.[47] "ನಂಬಿಗಸ್ತ" ಮತ್ತು "ಮಹಾಯಾಜಕ" ಎಂಬ

ಬಳಕೆಯು ಈ ಎರಡು ವಚನಗಳನ್ನು 3:1, 2ರಲ್ಲಿ ತಕ್ಷಣವೇ ಬರುವ ವಿಷಯದೊಂದಿಗೆ ಜೋಡನೆ ಮಾಡುವ "ಕೊಕ್ಕೆ" ಎಂದು ಕರೆಯಲ್ಪಟ್ಟಿರುತ್ತದೆ.[48]

ಕ್ರಿಸ್ತನು **ಶೋಧಿಸಲ್ಪಡುವವರಿಗೆ** ಸಹಾಯವನ್ನು ಮಾಡುವನು. ಈ ಪತ್ರಿಕೆಯನ್ನು ಸ್ವೀಕರಿಸಿಕೊಂಡವರು ಯೆಹೂದಿ ಮತಕ್ಕೆ ಹಿಂದಿರುಗಬೇಕೆಂದು ಘೋರವಾಗಿ ಶೋಧನೆಯನ್ನು ಎದುರಿಸಿರಬಹುದಾಗಿದೆ, ಆದರೆ ಹಾಗೆ ಮಾಡದಂತೆ ಅವರಿಗೆ ಪ್ರೋತ್ಸಾಹ ಮಾಡಲಾಯಿತು. ಅವರ ಮಹಾಯಾಜಕನು, ತನ್ನ ಪರಲೋಕದ ಸಕಲ ವೈಭವದೊಂದಿಗೆ, ಅವರಿಗೋಸ್ಕರ ವಿಜ್ಞಾಪನೆಯನ್ನು ಮಾಡುವವನಾಗಿ ಸ್ವತಃ ದೇವರ ಸನ್ನಿಧಿಯಲ್ಲಿಯೇ ಇರುತ್ತಾನೆಂದು ಅವರಿಗೆ ಹೇಳಲಾಯಿತು (ಇಬ್ರಿಯ 7:25). ಅದಕ್ಕಿಂತಲೂ ಹೆಚ್ಚು ಪ್ರೋತ್ಸಾಹಕರ ಸಂಗತಿಯೇನೆಂದರೆ ಆತನು ನಮ್ಮಂತೆಯೇ ಶೋಧಿಸಲ್ಪಟ್ಟನೆಂಬುದನ್ನು ತಿಳಿದುಕೊಳ್ಳುವದೇ ಆಗಿದೆ. ನಾವು ಇದನ್ನು ಯಾವ ಪ್ರಮಾಣದಲ್ಲಿ ವಿಶ್ವಾಸಿಸುತ್ತೇವೋ ಅಷ್ಟು ಪ್ರಮಾಣದಲ್ಲಿ ನಮ್ಮ ನಂಬಿಕೆಯು ಇರುತ್ತದೆ!

ಯೇಸುವು ನಮ್ಮ ಪರಿಪೂರ್ಣನಾದ ಮಹಾಯಾಜಕನಾಗಿ ಸೇವೆ ಮಾಡುವಂತಾಗಲು ಸ್ವಲ್ಪ ಕಾಲ ನಮ್ಮ ಮಾನವತ್ವದಲ್ಲಿ ಪಾಲುಗಾರನಾದನು. ಆತನು ಶೋಧನೆ ಮತ್ತು ಬಾಧೆಯನ್ನು ಅರ್ಥಮಾಡಿಕೊಳ್ಳುವಷ್ಟರ ವರೆಗೂ ದೇವದೂತರಿಗಿಂತ ಸ್ವಲ್ಪ ಕಡಿಮೆಯಾಗಿ ಮಾಡಲ್ಪಟ್ಟನು. ಆತನ ಸೃಷ್ಟಿಯ ಭಾಗವಾಗಿ ಜೀವಿಸುವ ಮತ್ತು ಮರಣಿಸುವ ಮೂಲಕ, ಆತನು ಮರಣದ ಬಂಧಗಳನ್ನು ಮುರಿಯುವದಕ್ಕೆ ಶಕ್ತನಾಗಿದ್ದನು. ಭೂಲೋಕದ ನ್ಯಾಯವಿಚಾರಣೆಗಳನ್ನು ಮತ್ತು ನಮ್ಮ ಪರವಾಗಿ ಶಿಲುಬೆಯ ಮರಣವನ್ನು ಸಹ ಅನುಭವಿಸುವದಕ್ಕೆ ಮನಸ್ಸು ಮಾಡುವಿಕೆಯು ಆತನು ನಮ್ಮ ಮೇಲೆ ಹೊಂದಿರುವ ಸರಿಸಾಟಿಯಿಲ್ಲದ ಪ್ರೀತಿಯನ್ನು ತೋರ್ಪಡಿಸುತ್ತದೆ. ಆತನು ಒದಗಿಸಿರುವ ಪಾಪನಿವಾರಣೆಯು ಇಲ್ಲದೆ ಹೋಗಿದ್ದರೆ ನಾವು ಎಷ್ಟೊಂದು ಕಳೆದು ಹೋಗಿರುತ್ತಿದ್ದೆವು!

## ಹೆಚ್ಚಿನ ಅಧ್ಯಯನಕ್ಕಾಗಿ: ಸೈತಾನ

ಯೇಸು "ಮರಣದಿಂದಲೇ" (ವ. 14) ಸೈತಾನನನ್ನು ನಾಶಗೊಳಿಸುವದಕ್ಕೆ ಬಂದನು. ಸ್ಪಷ್ಟವಾಗಿರುವಂತೆ, ಈ ನಾಶನವು ಸೈತಾನನ ಕೆಲವೊಂದು "ಅಧಿಕಾರಗಳನ್ನು" ನಾಶನವಾಗಿತ್ತು. ಈ ಪ್ರಕಟನೆಯು ಕೊಡಲ್ಪಡುವ ತನಕ, ಸೈತಾನನು "ಮರಣ ದೂತನು" ಎಂದು ಬಣ್ಣಿಸಲ್ಪಟ್ಟಿರಬಹುದಾಗಿದೆ. ದೇವರು ಮತ್ತು ಸೈತಾನನ ನಡುವಿನ ನಿರ್ಣಾಯಕವಾದ ಎದುರುಗೊಳ್ಳುವಿಕೆಯು ಶಿಲುಬೆಯ ಮೇಲೆ ಸಂಭವಿಸಿತು.[49] ಇದು ಖಂಡಿತವಾಗಿಯೂ ಯೇಸುವು ಬಂದದ್ದಕ್ಕೆ ಮುಖ್ಯ ಕಾರಣವಾಗಿತ್ತು: ಸೈತಾನನ ಶಕ್ತಿಯು ಮುರಿಯಲ್ಪಡಲೇ ಬೇಕಾಗಿತ್ತು. ಸೈತಾನನಿಗೆ ಈ ಲೋಕದಲ್ಲಿ ಉಳಿದಿರುವ ಶಕ್ತಿಗಾಗಿ ಆತನಿಗೆ ಅತಿಯಾದ ಶ್ರೇಯಸ್ಸನ್ನು ಕೊಡದಿರೋಣ, ಯಾಕೆಂದರೆ ಕ್ರಿಸ್ತನು ಆತನನ್ನು ಸೋಲಿಸಿರುತ್ತಾನೆ![50] "ಪಿಶಾಚನು ಮತ್ತು ಸೈತಾನ" (ಎರಡರ ಅರ್ಥವು "ದೂಷಕನು" ಎಂದಾಗಿದ್ದು, ಇಬ್ರಿಯ, ಗ್ರೀಕ್, ಮತ್ತು ಆಂಗ್ಲದಲ್ಲಿ ಅದೇ ಹೆಸರು ಇರುತ್ತದೆ; ಪ್ರಕಟನೆ 20:2) ಮಾನವರನ್ನು ಮೋಸಗೊಳಿಸಿ ಪಾಪದ ಪರಿಣಾಮವಾಗಿ ಮರಣವನ್ನು ತಂದನು.[51] ವಾಸ್ತವಾಂಶದಲ್ಲಿ, ಆತನು ಸಾಧ್ಯವಾದ ಎಲ್ಲಾ ವಿಧದಲ್ಲಿಯೂ ನಂಬಿಸಿ ವಂಚಿಸುವವನಾಗಿದ್ದಾನೆ ಆತನು ನಕಲಿಯಾಗಿದ್ದಾನೆ. ಆತನು ಗರ್ಜಿಸುವ ಸಿಂಹದಂತೆ, ಯಾರನ್ನು ನುಂಗಲಿ ಎಂದು ನೋಡುತ್ತಾ ತಿರುಗಾಡುವವನು (1 ಪೇತ್ರ 5:8), ಆದರೆ ಆತನು ನಿಜವಾದ "ಯೂದಾ ಕುಲದಲ್ಲಿ ಜನಸಿದ ಸಿಂಹ" ಅಲ್ಲ, ಆತನೇ ಮೆಸ್ಸೀಯನು (ಪ್ರಕಟನೆ 5:5).

ಮರಣಕ್ಕೆ ಕಾರಣನು ದೇವರಲ್ಲ, ಆದರೆ ಸೈತಾನನೇ ಎಂದು ಯೆಹೂದ್ಯರು ನಂಬುತ್ತಿದ್ದರು.

ಯೇಸುವು ಸೈತಾನನ ಕುರಿತಾಗಿ "ಆತನು ಸತ್ಯದಲ್ಲಿ ನಿಲ್ಲುವವನಲ್ಲ" ಎಂದು ಹೇಳಿದನು, ಅಂದರೆ ಆತನು ಒಂದು ಕಾಲದಲ್ಲಿ ಅದರಲ್ಲಿದ್ದನು ಎಂದರ್ಥವನ್ನು ಸೂಚಿಸುತ್ತದೆ. ಆತನು ಒಬ್ಬ "ಸುಳ್ಳುಗಾರನು" ಮತ್ತು ಆದಿಯಿಂದಲೂ ಒಬ್ಬ "ಕೊಲೆಗಾರನು," ಮನುಷ್ಯರನ್ನು ಪಾಪ ಮಾಡುವಂತೆ ವಂಚಿಸುವವನು ಮತ್ತು ಆ ಮೂಲಕ ಮರಣಕ್ಕೆ ಕಾರಣನಾಗುವವನು ಆಗಿದ್ದಾನೆ (ಯೋಹಾನ 8:44). "ಸೈತಾನನಿಗೆ ಪ್ರಾಪ್ತವಾದ ಶಿಕ್ಷಾವಿಧಿ" ಎಂಬ ಪದವು (1 ತಿಮೊಥೆ 3:6) ಸೈತಾನನು ಯಾವನ ಮೇಲಾದರೂ ಬರುವಂತೆ ಮಾಡಿರುವ ಒಂದು ದಂಡನೆಯು ಆಗಿರುವದಿಲ್ಲ, ಯಾಕೆಂದರೆ ಆತನಿಗೆ ಆ ಅಧಿಕಾರವಿರುತ್ತದೆಂಬುದು ಸಂದೇಹಕರವಾದದ್ದು. ಬದಲಾಗಿ, ಈ ಪದಗಳ ಅರ್ಥವು ಗರ್ವದ ಕಾರಣದಿಂದ "ಸೈತಾನನು ಬಿದ್ದಂಥ ಶಿಕ್ಷಾವಿಧಿ" ಎಂದಾಗಿರಬಹುದು. ಆತನು ಕೇವಲ ಪರೋಕ್ಷವಾಗಿ ಮಾತ್ರವೇ ನಮ್ಮ ಮರಣಕ್ಕೆ ಕಾರಣನಾಗಿರುತ್ತಾನೆ.

ದೇವದೂತರು ಪಾಪ ಮಾಡಿದಾಗ ಅವರು "ನರಕಕ್ಕೆ ದೊಬ್ಬಲ್ಪಟ್ಟರು" ಎಂದು ಪೇತ್ರನು ಹೇಳುತ್ತಾನೆ (2 ಪೇತ್ರ 2:4). ಸೈತಾನನು ಪರಲೋಕದಿಂದ ದೊಬ್ಬಲ್ಪಟ್ಟ ಬಳಿಕವಷ್ಟೆ ಮನುಷ್ಯನ ಬೀಳುವಿಕೆಯನ್ನು ಉಂಟು ಮಾಡಿದನೆಂದು ಸ್ಪಷ್ಟವಾಗಿತ್ತು. ದೇವರು ಏಕೆ ಇದನ್ನು ಅನುಮತಿಸಿದನು, ನಮಗೆ ಹೇಳುವದಕ್ಕಾಗುವದಿಲ್ಲ – ಆದರೆ ದೇವರು ಕೊಡುವಂತಹ ಅಧಿಕಾರವನ್ನು ಮಾತ್ರವೇ ಸೈತಾನನು ಹೊಂದಲು ಸಾಧ್ಯ (ಯೋಬನು 1:12; 2:6). ಬಹುಶಃ ಮನುಷ್ಯನನ್ನು ಪರೀಕ್ಷಿಸಲು ಮತ್ತು ಆತನನ್ನು ಬಲಪಡಿಸುವದಕ್ಕಾಗಿ ಸೈತಾನನ ಚಟುವಟಿಕೆಗಳಿಗೆ ಅವಕಾಶ ಕೊಟ್ಟಿರಬಹುದಾಗಿದೆ, ಯಾಕೆಂದರೆ ಶೋಧನೆಯು ಎದುರಿಸಲ್ಪಟ್ಟರೆ, ಅದು ಒಬ್ಬನನ್ನು ಉತ್ತಮನನ್ನಾಗಿಸುತ್ತದೆ ಮತ್ತು ದೇವರಿಗೆ ಹೆಚ್ಚಾದ ಮಹಿಮೆಯನ್ನು ತರುತ್ತದೆ (ಯೋಬನ ಜೀವಿತವು ಅನಂತರದಲ್ಲಿ ಮಾಡಿದ ಪ್ರಕಾರವೇ). ಮಾನವರು ಸೈತಾನನ ಸಲಹೆಗಳಂತೆ ಆತ್ಮೀಕವಾಗಿ ಮತ್ತು ಶಾರೀರಿಕವಾಗಿ ಮರಣಿಸಿದರು. ಒಂದು ಅರ್ಥದಲ್ಲಿ, ಅದು ಆತನಿಗೆ ಮಾನವರ ಮೇಲೆ ನಿಯಂತ್ರಣವನ್ನು ಒದಗಿಸಿತು, ಹೀಗೆ ಸೈತಾನನನ್ನು ಇಹಲೋಕಾಧಿಪತಿಯನ್ನಾಗಿ ಮಾಡಿತು (ಯೋಹಾನ 12:31; 14:30; 16:11; ನೋಡಿರಿ 2 ಕೊರಿಂಥ 4:4). ಆ ನಂತರದಲ್ಲಿ ಮನುಷ್ಯನು ಸೈತಾನನ ಒಬ್ಬ ವಾಸ್ತವಿಕದಂತೆ ತೋರುವ ಗುಲಾಮನಾದನು (ಯೋಹಾನ 8:34; ರೋಮಾ 6:16).

## ಅನ್ವಯಿಸುವಿಕೆ

### ಯಾವದು ತಪ್ಪಿಹೋಗುವದಕ್ಕೆ ಕಾರಣವಾಗುತ್ತದೆ? (2:1-4)

ದೂರಕ್ಕೆ ತಪ್ಪಿಹೋಗುವಿಕೆಯು ಹಲವಾರು ಮೂಲಗಳಿಂದ ಬರಬಲ್ಲದು: *ಕೆಲವರು ಕಲಿತುಕೊಂಡ ಸತ್ಯದ ಪ್ರಾಮುಖ್ಯತೆಯನ್ನು ಪೂರ್ಣವಾಗಿ ಗ್ರಹಿಸಿಕೊಳ್ಳುವದಿಲ್ಲ.* ಸತ್ಯವನ್ನು ಕಲಿತುಕೊಳ್ಳುವದಕ್ಕೆ ದ್ವಾರವು ತೆರೆಯಲ್ಪಡುವಾಗ, ಅದು ಒಬ್ಬನ ಆತ್ಮವನ್ನು ರಕ್ಷಿಸಬಲ್ಲದು, ಅನೇಕರು ಅದನ್ನು ತನ್ನ ಅನುದಿನದ ಜೀವಿತಕ್ಕೆ ಅಪ್ರಾಮುಖ್ಯವೆಂದು ಪಕ್ಕಕ್ಕೆ ಬಿಸಾಡುತ್ತಾರೆ. ಆ ದಾರಿಯನ್ನು ಅನುಸರಿಸುವದು ಅಪಾಯಕರವಾದದ್ದು. ಪೌಲನು ನೀತಿ, ಸ್ವ-ನಿಗ್ರಹ, ಮತ್ತು ಬರಲಿರುವ ನ್ಯಾಯತೀರ್ಪುಗಳ ಕುರಿತು ವಾದ ಮಾಡುವ ಮೂಲಕ ಫೇಲಿಕ್ಸನನ್ನು ಎಚ್ಚರಿಸಿದನು (ಅಪೊಸ್ತಲರ ಕೃತ್ಯಗಳು 24:25). ಫೇಲಿಕ್ಸನು ಅಂಥ ಕಾರ್ಯಗಳನ್ನು ಸಂಧಿಸುವದಕ್ಕೆ "ಸಮಯ ದೊರಕಿದಾಗ" ಮಾಡೋಣ ಎಂದು ಇಚ್ಛಿಸಿದನು. ಒಂದು "ಸಮಯ ದೊರಕುವದು" ಎಂದಿಗೂ ನಡೆಯುವದಿಲ್ಲ. ಪಾಪಕ್ಕಾಗಿ ಪಶ್ಚಾತ್ತಾಪ ಪಡುವ ಅಗತ್ಯತೆಯು ಎಂದಿಗೂ ಸುಲಭ ಅಥವಾ

ನಿರ್ಲಕ್ಷದ್ದಲ್ಲ. ನಾವು ಬರಲಿರುವ ನ್ಯಾಯತೀರ್ಪಿನ ಬಗ್ಗೆ ಅಪರಿಚಿತ ಪಾಪಿಗಳಿಗೆ ಜ್ಞಾಪಕಪಡಿಸುವದಕ್ಕೆ ಸಿಕ್ಕುವ ಪ್ರತಿಯೊಂದು ಸದವಕಾಶಗಳನ್ನು ಬಳಸಿಕೊಳ್ಳತಕ್ಕದ್ದು. ಪೌಲನು ಬರಲಿರುವ ನ್ಯಾಯತೀರ್ಪನ್ನು ವಿಧೇಯರಾಗುವಂತೆ ಜನರಿಗೆ ಬೇಡಿಕೊಳ್ಳುವದಕ್ಕಾಗಿ ಒಂದು ತಳಹದಿಯನ್ನಾಗಿ ಬಳಸಿಕೊಂಡನು. ನ್ಯಾಯತೀರ್ಪಿನ ದಿನವು ಬರುತ್ತಿದೆ ಎಂದು ಆತನಿಗೆ ಗೊತ್ತಿತ್ತು ಮತ್ತು ಅದು ಕರ್ತನಿಗೆ ಭಯಪಡುವದಕ್ಕೆ ಕಾರಣವಾಗಿರುತ್ತದೆ (2 ಕೊರಿಂಥ 5:10, 11).

*ತಪ್ಪಿಹೋಗುವದಕ್ಕೆ ಒಂದು ಕಾರಣವೆಂದರೆ ಹೊಸ ಒಡಂಬಡಿಕೆಯ ಅಡಿಯಲ್ಲಿ ನಾವು ಹೆಚ್ಚಿನ ಪಾಪಗಳಿಗೆ ಕ್ಷಮೆಯನ್ನು ಪಡೆದುಕೊಳ್ಳಬಹುದೆಂದು ಯೋಚಿಸುವದು.* ನಾವು ಹಳೆಯ ಒಡಂಬಡಿಕೆಯ ಅಡಿಯಲ್ಲಿ ಅಗತ್ಯವಿರುವ ದಶಮಾಂಶ ಕೊಡುವಿಕೆ ಬಗ್ಗೆ ಓದುತ್ತೇವೆ ಮತ್ತು "ನಾನು ಕಟ್ಟುನಿಟ್ಟಾದ ವ್ಯವಸ್ಥೆಯ ಅಡಿಯಲ್ಲಿ ಜೀವಿಸಬೇಕಾದದ್ದಿಲ್ಲ ಮತ್ತು ಅಷ್ಟೊಂದು ಕೊಡಬೇಕಾದದ್ದಿಲ್ಲ ಎಂಬುದಕ್ಕೆ ಸಂತೋಷಿಸುತ್ತೇನೆ" ಎಂದು ಯೋಚಿಸುತ್ತೇವೆ. ವಾಸ್ತವದಲ್ಲಿ, ಹೊಸ ಒಡಂಬಡಿಕೆಯ ಅಡಿಯಲ್ಲಿ ನಮ್ಮ ಜವಾಬ್ದಾರಿಗಳು ಇನ್ನೂ ಎಷ್ಟೋ ದೊಡ್ಡವುಗಳಾಗಿರುತ್ತವೆ; ಒಂದು ಯೆಹೂದಿ ವ್ಯವಸ್ಥೆಯನ್ನು ನಿರ್ವಹಿಸಿಕೊಂಡು ಹೋಗುವದಕ್ಕಿಂತಲೂ ಸುವಾರ್ತೆಯನ್ನು ಸಾರುವದಕ್ಕೆ ಹೆಚ್ಚು ದಾರಾಳತನದ ಅಗತ್ಯವಿರುತ್ತದೆ. ಕೆಲವರು ಕನಿಷ್ಠವಾದದ್ದನ್ನು ಮಾಡುವವರಾಗಿ ಯಶಸ್ವಿಗೊಳ್ಳಲು ಮತ್ತು ಬೆಳೆಯುವದಕ್ಕೆ ಪ್ರಯತ್ನವನ್ನು ಮಾಡುವರು. ಯೇಸುವು "ಎರಡು ಮೈಲು" ಹೋಗುವದರಲ್ಲಿರುವ ಸಂತೋಷದ ಕುರಿತಾಗಿ ಕಲಿಸಿ ಕೊಟ್ಟನು (ನೋಡಿರಿ ಮತ್ತಾಯ 5:41). ಅಲ್ಲದೆ ನಾವು ಆಜ್ಞಾಪಿಸಿರುವದನ್ನೆಲ್ಲಾ ಮಾಡಿಯಾದ ಮೇಲೆ, ನಾವು ಆಗಲೂ "ನಾವು ಆಳುಗಳು, ಪ್ರಯೋಜನವಿಲ್ಲದವರು" ಆಗಿದ್ದೇವೆಂಬುದನ್ನು ಸಹ ಆತನು ಕಲಿಸಿದನು (ಲೂಕ 17:10).

*ನಾವು ಸುಲಭವಾಗಿ ಈ ಜೀವನ ಭೋಗಗಳ ಕಡೆಗೆ ಆಕರ್ಷಿತರಾಗುತ್ತೇವೆ, ಅದು ತಪ್ಪಿಹೋಗುವದಕ್ಕೆ ಅತ್ಯಂಥ ದೊಡ್ಡ ಕಾರಣವಾಗಿರಬಹುದು.* ನಮ್ಮ ಹೃದಯಗಳು ಸುಲಭವಾಗಿ "ಈ ಜೀವಮಾನದಲ್ಲಿ ಆಗುವ ಚಿಂತೆ ಐಶ್ವರ್ಯ ಭೋಗಗಳಿಂದ ಅಡಗಿಸಲ್ಪಡ" ಬಲ್ಲೆವು (ಲೂಕ 8:14). ಆನೇಕ ಯುವ ಜನರು ಆತ್ಮೀಕ ವೈರಾಗ್ಯದಿಂದ ಆರಂಭಿಸುವದನ್ನು ನಾವು ಕಾಣುತ್ತೇವೆ, ಆದರೆ ಎಂದಿಗೂ ನಂಬಿಕೆಯ ಆಳಕ್ಕೆ ಬರುವದಿಲ್ಲ. ಅವರು ತಮಗೆ ಗ್ರಹಿಕೆಯಿಲ್ಲದೆಯೆ ತಪ್ಪಿಹೋಗುವವರಾಗಿರುತ್ತಾರೆ, ಅನೇಕ ಸಾರಿ ತಮ್ಮ ಆತ್ಮಗಳ ನಿತ್ಯವಾದ ಕೇಡಿನ ಕಡೆಗೆ ಜಾರಿ ಹೋಗುತ್ತಾರೆ. ಭೋಗಗಳು ನಮ್ಮನ್ನು ದೇವರಿಂದ ದೂರಕ್ಕೆ ಕೊಂಡೊಯ್ಯುವಾಗ, ನಾವು ಪ್ರಾಮುಖ್ಯವಾದವುಗಳ ವಿಷಯದಲ್ಲಿ ನಿರೀಕ್ಷೆಯಿಲ್ಲದಷ್ಟು ಕಳೆದು ಹೋಗುತ್ತೇವೆ. ನಾವು "ನನಗೆ ಸಮಯವಿಲ್ಲ" ಎಂದು ಯೋಚಿಸಲಾರಂಭಿಸುತ್ತೇವೆ, ಮತ್ತು ನಮ್ಮ ಮುಖ್ಯ ಗಮನದ ಅಂಶವಾಗಿರುವಂತಹ ಭೋಗವನ್ನು ಸರಿಯೆಂದು ಸಮರ್ಥಿಸಿಕೊಳ್ಳುವದಕ್ಕೆ ನೆಪಗಳನ್ನು ಹೇಳಲಾರಂಭಿಸುತ್ತೇವೆ.

ಸುವಾರ್ತೆಯು ಈಗಲೂ ರಕ್ಷಿಸುವ ಶಕ್ತಿಯನ್ನು ಹೊಂದಿರುವದಾಗಿದೆ (ರೋಮಾ 1:16). ಒಬ್ಬ ಚಿಕ್ಕ ಹುಡುಗನನ್ನು ಶುಚಿಮಾಡುವದಕ್ಕೆ ಆತನ ದೇಹಕ್ಕೆ ಸಾಬೂನು ಹಚ್ಚುವದು ಹೇಗೆ ಅಗತ್ಯವಾಗಿರುತ್ತದೋ ಹಾಗೆಯೇ, ಪಾಪವನ್ನು ತೊಳೆದು ಹಾಕುವದಕ್ಕಾಗಿ ಸುವಾರ್ತೆಯನ್ನು ಲೇಪಿಸಿಕೊಳ್ಳುವದು ಅಗತ್ಯವಾಗಿರುತ್ತದೆ. ಬೈಬಲಿನಲ್ಲಿರುವ ಸಮೃದ್ಧವಾದ ಸತ್ಯವು ಲೋಕವನ್ನು ರಕ್ಷಿಸಬಲ್ಲದು; ಆದರೆ ಔಷಧವನ್ನು ಸೇವಿಸುವ ವರೆಗೂ ಅದು ಹೇಗೆ ಗುಣಪಡಿಸಲಾರದೋ, ಹಾಗೆಯೇ ಸುವಾರ್ತೆಯು ಕೇಳಲ್ಪಟ್ಟು ವಿಧೇಯವಾಗಲ್ಪಡದಿದ್ದರೆ ಅದು

ರಕ್ಷಣೆಯನ್ನುಂಟು ಮಾಡಲಾರದು.

### ಯಾವದು ಪಾಪವಾಗಿರುತ್ತದೆ (2:1, 2)

ದುರಾಶೆಗಾಗಿ ಮರಣದಂಡನೆಯು ವಿಧಿಸಲ್ಪಟ್ಟದ್ದರ ಬಗ್ಗೆ ಹಳೆಯ ಒಡಂಬಡಿಕೆಯಲ್ಲಿ ಕೊಡಲ್ಪಟ್ಟಿರುವ ಒಂದು ಉದಾಹರಣೆಯು ಆಕಾನನದ್ದಾಗಿದೆ (ಯೆಹೋಶುವ 7), ಮತ್ತು ಹೊಸ ಒಡಂಬಡಿಕೆಯಲ್ಲಿ ಅದೇ ಅಂತ್ಯಸ್ಥಿತಿಯನ್ನು ಅನುಭವಿಸಿದ ಒಬ್ಬ ದಂಪತಿಯೆಂದರೆ ಅನನೀಯ ಮತ್ತು ಸಪ್ಫೈರಳು (ಅಪೊಸ್ತಲರ ಕೃತ್ಯಗಳು 5). ಪಾಪವು ದೇವರ ನಿರ್ದಿಷ್ಟವಾದ ಚಿತ್ತದ ಒಂದು ಉಲ್ಲಂಘನೆ ಆಗಿರುತ್ತದೆ. 1 ಯೋಹಾನ 3:4ರಲ್ಲಿ, "ಅಧರ್ಮ" ಎಂಬುದರ ಅರ್ಥವು ಧರ್ಮಶಾಸ್ತ್ರಕ್ಕೆ ವಿರುದ್ಧವಾಗಿ ಹೋಗುವದು, ಅಥವಾ ಅದನ್ನು "ಮೀರುವದು" ಎಂದಾಗಿದೆ. ಇದಕ್ಕಿರುವ ಪದವು ἀνομία (*anomia*), ಅದು ಅಕ್ಷರಶಃ "ಧರ್ಮಶಾಸ್ತ್ರಕ್ಕೆ ವಿರುದ್ಧ" ಎಂದಾಗಿರುತ್ತದೆ. ಬಿದ್ದು ಹೋಗುವ ಅನೇಕ ಕ್ರೈಸ್ತರು ಎದ್ದುಕಾಣುವ ನೈತಿಕ ಉಲ್ಲಂಘನೆಗಳಿಗಾಗಿ ದಂಡನೆಗೆ ಒಳಗಾಗುವದಿಲ್ಲ, ಆದರೆ ತಾವು ಏನು ಮಾಡಿರಬೇಕಾಗಿತ್ತೋ ಅದನ್ನು ನಿರ್ಲಕ್ಷ್ಯ ಮಾಡಿದ್ದಾಗಿಯೇ ಆಗಿರಲಿದೆ. ನಿತ್ಯವಾದ ರಕ್ಷಣೆಯ ಭರವಸೆಯನ್ನು ಹೊಂದಿರಬೇಕಾದರೆ, ಒಬ್ಬನು 2 ಪೇತ್ರ 1:5-11ರಲ್ಲಿರುವ "ಕ್ರೈಸ್ತೀಯ ಸದ್ಗುಣಗಳನ್ನು" ಸೇರಿಸಿಕೊಳ್ಳತಕ್ಕದ್ದು. ಒಬ್ಬನು ಅದನ್ನು ಮಾಡುವಾಗ, ಆತನು "ಎಂದಿಗೂ ಎಡಹುವದಿಲ್ಲ" (ವ. 10). ಆದುದರಿಂದ, ಪೇತ್ರನು ಮುಂದಿಟ್ಟ ಶರತ್ತುಗಳನ್ನು ಅನುಸರಿಸುವದಾದರೆ ಕೃಪೆಯಿಂದ ಎಂದಿಗೂ ಬಿದ್ದು ಹೋಗದಿರುವ ಸಾಧ್ಯತೆಯಿರುತ್ತದೆ. ಒಬ್ಬನು ತನ್ನ ನಂಬಿಕೆಗೆ "ಸದ್ಗುಣವನ್ನು" ಕೂಡಿಸಿಕೊಳ್ಳುವದಾದರೆ (ವ. 5) ಮತ್ತು ಹಾಗೆಯೇ ಪಟ್ಟಿಯಲ್ಲಿರುವದನ್ನೆಲ್ಲಾ ಹಂತಹಂತವಾಗಿ ಕೂಡಿಸಿಕೊಂಡು ಹೋಗುವದಾದರೆ ಪ್ರಗತಿಪರವಾದ ಬೆಳವಣಿಗೆಯನ್ನು ಅನುಭವಿಸಬಲ್ಲನು.

### ದೇವಜನರಿಂದಾಗುವ ಪಾಪಗಳು (2:1-4)

Warren W. Wiersbe ಯು "The Sins of the Saints" (ದೇವರಜನರ ಪಾಪಗಳು) ಎಂಬುದರ ಮೇಲೆ ಪ್ರಸಂಗಗಳ ಸರಣಿಯನ್ನು ನೀಡಿದ ಒಬ್ಬ ಬೋಧಕನ ಕುರಿತು ಹೇಳುತ್ತಾನೆ. ಆತನು ಸಭೆಯ ಸದಸ್ಯರಲ್ಲೊಬ್ಬನಿಂದ ಕಠೋರವಾಗಿ ಛೀಮಾರಿ ಹಾಕಲ್ಪಟ್ಟನು. ಆ ಸದಸ್ಯನು, "ಅಂತೂ, ಬೇರೆ ಜನರ ಜೀವಿತಗಳಲ್ಲಿನ ಪಾಪಕ್ಕೂ ಒಬ್ಬ ಕ್ರೈಸ್ತನ ಜೀವನದಲ್ಲಿನ ಪಾಪಕ್ಕೂ ವ್ಯತ್ಯಾಸವಿರುತ್ತದಷ್ಟೆ" ಎಂದು ಹೇಳಿದನು. ಅದಕ್ಕೆ ಸೇವಕನು, "ಹೌದು, ಅದು ಅತ್ಯಂತ ಕೆಟ್ಟದ್ದು!"[52] ಎಂದು ಉತ್ತರಿಸಿದನು.

### ನಾವು ತಪ್ಪಿಸಿಕೊಳ್ಳುವದು ಹೇಗೆ? (2:3)

2:3ರಲ್ಲಿರುವ ಪ್ರಶ್ನೆಯು ಭಾವೋತ್ತೇಜಕವಾದದ್ದು, ಅದರಲ್ಲಿಯೇ ಉತ್ತರವು ಸೂಚ್ಯಾರ್ಥವಾಗಿ ಇರುತ್ತದೆಂದು ಅದರ ಅರ್ಥವಾಗಿದೆ: *ಈ ಅತ್ಯಂತ ವಿಶೇಷವಾದ ರಕ್ಷಣೆಯನ್ನು ನಾವು ಅಲಕ್ಷ್ಯ ಮಾಡಿದರೆ ತಪ್ಪಿಸಿಕೊಳ್ಳುವ ದಾರಿಯೇ ಇಲ್ಲ!* ಉತ್ತರವು 2 ಥೆಸಲೋನಿಕ 1:7-9ರಲ್ಲಿ ಸರಳವಾಗಿ ಕೊಡಲ್ಪಟ್ಟಿದೆ. ಕೆಲವರ ಹೃದಯಗಳು ಎಷ್ಟೊಂದು ಕಠಿಣವಾಗುತ್ತವೆಂದರೆ ಅವರು ವಿಮೋಚನೆಯ ಸಾಧ್ಯತೆಯನ್ನು ದಾಟಿ ಹೋದವರಾಗಿರುತ್ತಾರೆ. ಇದು ಸತ್ಯವೆಂಬುದನ್ನು ನಾವು ನಮ್ಮ ಇಬ್ರಿಯ 6:4-6 ಮತ್ತು 10:26-29ರ ಅಧ್ಯಯನದಲ್ಲಿ ಕಂಡುಕೊಳ್ಳುವೆವು. 1 ತಿಮೊಥೆ 4:1-3ರಲ್ಲಿ, ಕೆಲವರು "ಸ್ವಂತ ಮನಸ್ಸಿನಲ್ಲಿ ಅಪರಾಧಿಗಳೆಂಬ ಬರೆಯುಳ್ಳವರಾಗಿ" ಇರುತ್ತಾರೆ ಮತ್ತು ಸತ್ಯದ ಬದಲಾಗಿ ಸುಳ್ಳನ್ನು ಬೋಧಿಸುವರೆಂದು ಪೌಲನು ಹೇಳುತ್ತಾನೆ. ಪಶುಗಳ ಮೇಲೆ ಒಂದು ಬರೆ ಹಾಕುವದರಿಂದ ಹದ ಮಾಡಿದ ತೊಗಲಿನ ಮೇಲೆ ಕೂದಲುಗಳು

ಬೆಳೆಯುದಂತೆ ತಡೆಯುವಂತೆಯೇ, ಸತ್ಯವು ಯಾವದೇ ಪರಿಣಾಮ ಬೀರದಷ್ಟರ ಮಟ್ಟಿಗೆ ಮನಸ್ಸಾಕ್ಷಿಯ ಮೇಲೆ ಬರೆಯನ್ನು ಹಾಕಬಹುದಾಗಿದೆ. ಒಬ್ಬ ಕವಿಯು ಹೀಗೆ ಬರೆದನು,

ಒಂದು ಸಮಯ ಇದೆ, ಅದು ಯಾವಾಗ ಎಂದು ನಮಗೆ ತಿಳಿಯದು,
  ಎಲ್ಲಿ ಎಂದು ನಮಗೆ ತಿಳಿಯದ ಒಂದು ಹಂತ ಇರುವದು,
ಅದು ಮನುಷ್ಯರ ಅಂತ್ಯಾವಸ್ಥೆಯನ್ನು ಗುರುತಿಸುವದು,
  ಮಹಿಮೆಗೋ ಅಥವಾ ಹತಾಶೆಗೋ.
ನಮಗೆ ಕಾಣಿಸಿದ ಒಂದು ಗೆರೆ ಇರುವದು,
  ಅದು ಪ್ರತಿಯೊಂದು ಹಾದಿಯನ್ನು ದಾಟುವದು,
ದೇವರ ತಾಳ್ಮೆ ಮತ್ತು ಆತನ ಕೋಪದ ನಡುವಿನ ಮರೆಯಾಗಿರುವ ಗಡಿರೇಖೆ.[53]

ಇಬ್ರಿಯ 6:4-6 ವಚನಗಳು ಈ ರೇಖೆಯನ್ನು ಒಬ್ಬ ಮತಭ್ರಷ್ಟನು ದಾಟಬಹುದಾಗಿದೆ ಎಂಬುದನ್ನು ಸೂಚಿಸುತ್ತವೆ. ಅದು ಆರಾಧನೆಯನ್ನು ನಿರ್ಲಕ್ಷಿಸುವದರಿಂದ ಮತ್ತು "ದೇವಕುಮಾರನನ್ನು ತಿಳಿದು" ಬಿಡುವಂಥ ಆತ್ಮವನ್ನು ಅಭಿವೃದ್ಧಿ ಪಡಿಸಿಕೊಳ್ಳುವಷ್ಟರ ಮಟ್ಟಿಗೆ "ಬೇಕೆಂದು ಪಾಪಮಾಡುವ" ಮೂಲಕ ಅದು ಆರಂಭಗೊಳ್ಳುತ್ತದೆಂಬದಾಗಿ ಇಬ್ರಿಯ 10:25-29 ವಚನಗಳು ಸೂಚಿಸುತ್ತವೆ. "ಜೀವಸ್ವರೂಪನಾದ ದೇವರ ಕೈಯಲ್ಲಿ ಸಿಕ್ಕಿ ಬೀಳುವದು ಭಯಂಕರವಾದದ್ದು" (10:31). ಇಂತಹ ವಾಕ್ಯಭಾಗಗಳು ಪೌಲನು ಏಕೆ "ಕರ್ತನ ಭಯವು ನಮಗಿರುವದರಿಂದ ನಾವು ಮನುಷ್ಯರನ್ನು ಒಡಂಬಡಿಸುತ್ತೇವೆ" (2 ಕೊರಿಂಥ 5:10, 11) ಎಂದು ಹೇಳಿದನೆಂಬುದನ್ನು ಅರ್ಥಮಾಡಿಕೊಳ್ಳುವದಕ್ಕೆ ಸಹಾಯ ಮಾಡುತ್ತವೆ. ನಾವು ಅಪನಂಬಿಗಸ್ತರಾಗಿದ್ದರೆ ನಮ್ಮನ್ನು ಕಾಪಾಡುವಂತೆ ದೇವರ ಕೃಪೆಯ ಮೇಲೆ ಅವಲಂಭಿತರಾಗುವದಕ್ಕೆ ಸಾಧ್ಯವಿಲ್ಲ. ನಾವು ಬಿಟ್ಟು ಹೋಗುವದರ ಅಪಾಯದ ಬಗ್ಗೆ ಅರಿವು ಉಳ್ಳವರಾಗಿರತಕ್ಕದ್ದು, ಅದು ಈ ಜೀವನದಲ್ಲಿ ನಿರೀಕ್ಷೆರಹಿತತೆಗೆ ನಡಿಸುವದು ಮಾತ್ರವೇ ಫಲಿತಗೊಳ್ಳುವದಿಲ್ಲ, ಆದರೆ ನಿತ್ಯವಾದ ನಾಶನದಲ್ಲಿ ಫಲಿತಗೊಳ್ಳುವ ಸಾಧ್ಯತೆಯೂ ಇರುತ್ತದೆ.

## ಅದ್ಭುತಗಳು ಅನಾವಶ್ಯಕ

ಅದ್ಭುತಗಳು ನಿಂತುಹೋಗಿವೆ; ಸಂದೇಶವು ದೃಢೀಕರಿಸಲ್ಪಟ್ಟ ಬಳಿಕ, ಅವುಗಳು ಅನಾವಶ್ಯಕಗೊಂಡವು. ದೃಢೀಕರಿಸುವ ಪ್ರಕ್ರಿಯೆಯು ಈಗಾಗಲೆ ಗತಕಾಲದಲ್ಲಿರುತ್ತದೆಂಬದನ್ನು ಮಾರ್ಕ 16:20 ಘೋಷಿಸುತ್ತದೆ. ಅದ್ಭುತಗಳು ಕ್ರೈಸ್ತರ ವ್ಯಕ್ತಿಗತವಾದ ಅಗತ್ಯತೆಗಳನ್ನು ಸೇರ್ಪಡೆಗೊಳಿಸುವದಕ್ಕಾಗಿರಲಿಲ್ಲ. ಬಹುಶಃ ತಿಮೊಥೆಯನಿಗೆ ಹೊಟ್ಟೆ ನೋವಿಗೋಸ್ಕರ "ಸ್ವಲ್ಪ ದ್ರಾಕ್ಷಾರಸವನ್ನು" ತೆಗೆದುಕೋ ಎಂದು ಹೇಳಿದ್ದಕ್ಕೆ ಅದು ಸಹ ಒಂದು ಕಾರಣವಾಗಿರಬಲ್ಲದು (1 ತಿಮೊಥೆ 5:23). ನಾವು ಅಪೊಸ್ತಲನನ್ನು ಹೀಗೆ ಕೇಳತಕ್ಕದ್ದು, "ಪೌಲನೇ, ಏಕೆ ನೀನು ಯುವಕನಾದ ತಿಮೊಥೆಯನನ್ನು ನಿನ್ನ ಅದ್ಭುತಕರ ವರದಿಂದ ಸ್ವಸ್ಥಪಡಿಸಲಿಲ್ಲ?" ಪೌಲನು ಅನಾರೋಗ್ಯದಲ್ಲಿದ್ದ ತ್ರೊಫಿಮನನ್ನು ಮಿಲೇತದಲ್ಲಿ ಬಿಟ್ಟು ಹೋಗಬೇಕಾಯಿತು (2 ತಿಮೊಥೆ 4:20). ಪೌಲನ ಈ ಕೃತ್ಯವನ್ನು ನಾವು ಖಂಡಿಸಬೇಕೋ?

ಇಂದು ಜೀವಿಸುವ ಮನುಷ್ಯರಲ್ಲಿ ಒಂದು ಗಾಯವನ್ನು ಕ್ಷಣ ಮಾತ್ರದಲ್ಲಿಯೇ ಗುಣ ಪಡಿಸುವಂತ ವ್ಯಕ್ತಿಯೊಬ್ಬನು ಇರುವದಿಲ್ಲ. ಅದೊಂದು ಅದ್ಭುತವಾಗುವದು.

## ನಂಬಿಕೆಯ ಪ್ರಾರ್ಥನೆ

ಇಂದು ಕ್ರಿಸ್ತನ ಶಕ್ತಿಯಿಂದ ಗುಣಪಡಿಸುತ್ತೇನೆಂದು ಹೇಳಿಕೊಳ್ಳುವ ಅನೇಕ ಬೋಧಕರು

ರೋಗಿಗಾಗಿ ಪ್ರಾರ್ಥಿಸುವಂತೆ ತಮ್ಮ "ಸಭಾಪಾಲಕ"ನನ್ನು (ಏಕವಚನ) ಕರೆಯುತ್ತಾರೆ ಹೊರತು "ಹಿರಿಯರನ್ನು" (ಬಹುವಚನ) ಅಲ್ಲ ಎಂಬುದನ್ನು ಗಮನಿಸಿರಿ. ಯಾಕೋಬನು ಗುಣಪಡಿಸುವ ವರವನ್ನು ಹೊಂದಿರಬಹುದಾಗಿದ್ದ ಹಿರಿಯರ ಪ್ರಾರ್ಥನೆ ಮತ್ತು ನಂಬಿಕೆಯ ಮೂಲಕ ಸ್ವಸ್ಥತೆಯಾಗುವದೆಂದು ನಿಶ್ಚಯವನ್ನು ಕೊಡುತ್ತಾನೆ (1 ಕೊರಿಂಥ 12:9; ಯಾಕೋಬ 5:14-16). ಇಂದು ರೋಗದಲ್ಲಿರುವ ಜನರಿಗೆ, "ನಿಮ್ಮಲ್ಲಿ ಸಾಕಷ್ಟು ನಂಬಿಕೆಯಿದ್ದರೆ ನಿಮಗೆ ಗುಣವಾಗುವದು" ಎಂದು ಹೇಳಲಾಗುತ್ತದೆ. ಹೇಗೂ, ಯಾಕೋಬನು "ನಂಬಿಕೆಯಿಂದ ಮಾಡಿದ ಪ್ರಾರ್ಥನೆ," ಪ್ರಾರ್ಥನೆ ಮಾಡುವವನಲ್ಲಿರುವ ನಂಬಿಕೆಯನ್ನು ಕುರಿತು ಮಾತಾಡುತ್ತಿದ್ದಾನೆ. ಒಂದು ಪ್ರಶ್ನೆಯು ಹೀಗಿರುತ್ತದೆ, "ದೇವರು ಪಾಪದಲ್ಲಿ ಜೀವಿಸುವವನಿಗೆ ಸ್ವಸ್ಥತೆಯನ್ನು ಕೊಡುವಾಗ, ಗುಣಪಡಿಸುವಂತಹ ನಂಬಿಕೆಯುಳ್ಳ ಜನರು ಇರುವದಾದಲ್ಲಿ ಒಬ್ಬ ಮುಗ್ಧ ಕೂಸನ್ನು ಸಾಯುವಂತೆ ಏಕೆ ಆತನು ಅನುಮತಿಸುತ್ತಾನೆ?" ದೇವರ ಮಾರ್ಗಗಳು ಕೆಲವು ಸಾರಿ ಭೇದಿಸಿ ಗ್ರಹಿಸಿಕೊಳ್ಳಲಾಗದ ವುಗಳು ಆಗಿರುತ್ತಾವದಾರೂ, ಅದ್ಭುತಗಳ ಉದ್ದೇಶವೇನೆಂದು ಶಾಸ್ತ್ರಗಳಲ್ಲಿ ತಿಳಿಸಲ್ಪ ಟ್ಟಿರುತ್ತದೆ – ಸುವಾರ್ತೆಯು ನಂಬಲ್ಪಟ್ಟು ಅದು ನಿತ್ಯಜೀವವನ್ನು ಪಡದುಕೊಳ್ಳುವದರಲ್ಲಿ ಫಲಿತಗೊಳ್ಳುವಂತಾಗಲು ಆ ಸುವಾರ್ತೆಯನ್ನು ದೃಢೀಕರಿಸುವದಕ್ಕಾಗಿಯೇ (ಯೋಹಾನ 20:30, 31). ನಿರಂತರವಾದ ದೃಢೀಕರಣದ ಯಾವ ಅಗತ್ಯತೆಯೂ ಇರುವದಿಲ್ಲ.

ಯಾಕೋಬ 5ರಲ್ಲಿನ ಪರಿಸ್ಥಿತಿಯು ಹಿರಿಯರಿಗೆ ಅದ್ಭುತಕರವಾಗ ಶಕ್ತಿಗಳಿದ್ದಂಥ ಕಾಲಕ್ಕೆ ಸೀಮಿತವಾದದ್ದಾಗಿದೆ. ಇಂದು ಅದಕ್ಕೆ ಹೋಲಿಸುವಂಥ ಶಕ್ತಿಯುಳ್ಳ ಹಿರಿಯರು ಇರುವದಿಲ್ಲ. ಎಣ್ಣೆಯಿಂದ ಅಭಿಷೇಕಿಸುವದು ಒಂದು ಸಂತೋಷ ಪಡುವ ಸಂಕೇತವಾಗಿದ್ದಿರಬಹುದು ಯಾಕೆಂದರೆ ಒಂದು ಅದ್ಭುತಕರವಾದ ಸ್ವಸ್ಥತೆಯು ನಿಶ್ಚಯವಾಗಿ ಸಂಭವಿಸುವದಾಗಿತ್ತು. ಸಂಭಾವ್ಯವಾಗಿ, ಅಭಿಷೇಕಿಸುವದು ಸ್ವಸ್ಥಗೊಳಿಸಿ, ಉಡುಪು ಧರಿಸಿಕೊಂಡು, ಯಾವದೋ ಒಂದು ಸ್ವಸ್ಥತೆಯನ್ನು ಕೊಂಡಾಡುವದರ ಸಂಕೇತವಾಗಿತ್ತು. ಅದು "ಆನಂದ ತೈಲ" ಆಗಿರಬಹುದು (ಕೀರ್ತನೆ 45:6, 7; ಇಬ್ರಿಯ 1:8, 9ರಲ್ಲಿ ಉಲ್ಲೇಖಿಸಲ್ಪಟ್ಟಿರುತ್ತದೆ). ಮೇಜಿನ ಬಳಿಯಲ್ಲಿ ಊಟ ಮಾಡುವದು ಮತ್ತು ತೈಲದಿಂದ ಅಭಿಷೇಕಿಸುವದು ಕೀರ್ತನೆ 23:5ರಲ್ಲಿ ಅಂತಹ ಒಂದು ಸಂಭ್ರಮದ ಸಂದರ್ಭದ ಸಂಕೇತವಾಗಿದ್ದವು.

"ಯೇಸು ಕ್ರಿಸ್ತನು ನಿನ್ನೆ ಇದ್ದ ಹಾಗೆ ಈಹೊತ್ತೂ ಇದ್ದಾನೆ, ನಿರಂತರವೂ ಹಾಗೆಯೇ ಇರುವನು" (ಇಬ್ರಿಯ 13:8), ಆದರೆ ಆ ವಾಸ್ತವಾಂಶದ ಅರ್ಥವು ಆತನು ಮುಂಚೆ ಮಾಡುತ್ತಿದ್ದ ರೀತಿಯಲ್ಲಿ ಈಗಲೂ ಅದ್ಭುತಗಳನ್ನು ನಡಿಸುತ್ತಾನೆಂದಾಗಿರುವದಿಲ್ಲ. ಒಮ್ಮೆ ಆತನು ಮನುಷ್ಯರೊಳಗೆ ನಡೆದಾಡಿದನು, ಆದರೆ ಇಂದು ಆತನು ನಮ್ಮ ಮಧ್ಯದಲ್ಲಿ ಶರೀರಧಾರಿಯಾಗಿ ಇರುವದಿಲ್ಲ. ದೇವರು ಒಮ್ಮೆ ಮನುಷ್ಯರನ್ನು ಮಣ್ಣಿನಿಂದ ಸೃಷ್ಟಿಸಿದನು, ಆದರೆ ಆತನು ಇಂದು ಅದನ್ನು ನೇರವಾಗಿ ಮಾಡುವದಿಲ್ಲ. ಕ್ರಿಸ್ತನು ಯಾವಾಗಲೂ ಏಕರೀತಿಯಾಗಿರುವನು, ಆದರೆ ಆತನು ಯಾವಾಗಲೂ ಏಕರೀತಿಯಲ್ಲಿ ಕಾರ್ಯ ಮಾಡುವದಿಲ್ಲ.

### ಜನರಿಗೋಸ್ಕರ ದೇವರ ಕಳಕಳಿ (2:6-8)

ನಾವು ಭೌತವಸ್ತುವನ್ನು ಕುರಿತು ಯೋಚಿಸುವಾಗ, ದೇವರು ತನ್ನ ಅಪರಿಮಿತವಾದ ಶ್ರೇಷ್ಠತೆಯಲ್ಲಿ, ಈ ಭೂಮಂಡಲದ ಕಲ್ಲು ಹರಳಿನ ಮೇಲಿರುವ ಚಿಕ್ಕ ಜನರ ವಿಷಯದಲ್ಲಿ ಕಾಳಜಿಯುಳ್ಳವನಾಗಿದ್ದಾನೆಂಬುದಕ್ಕೆ ನಾವು ಸ್ತಬ್ಧಗೊಂಡಿರುತ್ತೇವೆ! Hubble telescope (ಹಬ್ಬಲ್ ದೂರದರ್ಶಕ ಸಾಧನ) ಮತ್ತು ಇತರ ವೈಜ್ಞಾನಿಗ ಪ್ರಗತಿಯ ಕಾರಣದಿಂದ, ನಾವು

ಅಂತರಿಕ್ಷವು ಎಷ್ಟು ವಿಸ್ತಾರವಾದದ್ದು ಮತ್ತು ಗ್ರಹಿಸಿಕೊಳ್ಳಲಾಗದ್ದು ಎಂಬುದನ್ನು ಕಲಿತುಕೊಳ್ಳುತ್ತಿದ್ದೇವೆ. ನಮ್ಮ ಸೌರ ಮಂಡಲದ ಮಧ್ಯಭಾಗವು ಹೋಲಿಸಿ ನೋಡಿದರೆ ಮಹತ್ವವಿಲ್ಲದ ಸೂರ್ಯನಾಗಿರುತ್ತದೆ. ನಮ್ಮ ನಕ್ಷತ್ರಮಂಡಲದಿಂದ ನಮ್ಮ ಸೂರ್ಯನು 35,000ಕ್ಕೂ ಅಧಿಕ ಜ್ಯೋತೀರ್ಷಗಳಷ್ಟು ದೂರದಲ್ಲಿರುತ್ತಾನೆಂದು ನಮಗೆ ಹೇಳಲಾಗಿರುತ್ತದೆ. ಇಡೀ ವಿಶ್ವದ ಸೃಷ್ಟಿಕರ್ತನು ತನ್ನ ಕುಮಾರ ರೂಪದಲ್ಲಿ ನಮ್ಮ ಚಿಕ್ಕ ಗ್ರಹಕ್ಕೆ ಬಂದನು.

2002ರಲ್ಲಿ ಸೂರ್ಯನ ಕುರಿತಾದ ಒಂದು ಲೇಖನದಲ್ಲಿ, *Newsweek* ಮ್ಯಾಗಜಿನ್ ಹೀಗೆ ವರದಿ ಮಾಡಿತ್ತು, "ಕಳೆದ ವರ್ಷ ವಿಜ್ಞಾನಿಗಳು ಇದು ವರೆಗೂ ನೋಡಿರದ ರೀತಿಯಲ್ಲಿ ಸೂರ್ಯನು ಅತ್ಯಂಥ ದೊಡ್ಡದಾದ [ಸೌರಜ್ವಾಲೆ] ಹೊರಬಿಟ್ಟಿತು." ಸೌರ ಮಂಡಲದೊಳಗೆ "ಮರಣಾಂತಿಕವಾದ ವಿಕಿರಣದ ದೊಡ್ಡದಾದ ಶ್ಲೇಷ್ಮ" ಒಂದು ಸಮೂಹವನ್ನು ಉಗುಳಿತ್ತು! ಒಂದು ಅಗ್ನಿಯ ನಾಲಿಗೆಯು ನೂರಾರು ಮೈಲುಗಳಷ್ಟು ದೂರದ ವರೆಗೂ ಚಾಚಿತ್ತು. ಅದೃಷ್ಟವಶಾತ್, ಸೌರ ಮಂಡಲವು ಬೃಹತ್ತಾಕಾರದ್ದಾಗಿದ್ದು ಭೂಮಿಯು ಒಂದು ಅತಿ ಚಿಕ್ಕ ದೂಳಿನ ಕಣವಾಗಿರುತ್ತದೆ. ಈ ಅಗ್ನಿಜ್ವಾಲೆಯ ಗುರಿಯಿಂದ ನಾವು ತಪ್ಪಿದೆವು – ಆದರೆ ಯಾವಾಗಲೂ ಅದೇ ರೀತಿಯಿರುತ್ತದೆಂದು ಹೇಳಲಾಗದು. ಒಂದು "ನೇರವಾದ ಅಪ್ಪಳಿಸುವಿಕೆಯಿಂದ ವಿದ್ಯುತ್ ಕಡಿದು ಹೋಗಿ, ಸಂವಹನಗಳ ಸಾಧನಗಳು ವಿಫಲವಾಗಿರುತ್ತಿದ್ದವು ಮತ್ತು ವಿಕಿರಣದಿಂದ ಹುಟ್ಟುವ ಮಕ್ಕಳಲ್ಲಿ ನ್ಯೂನ್ಯತೆಗಳು ಸಂಭವಿಸುತ್ತಿದ್ದವು, [ಒಂದು ಅಮೋಘವಾದ] ಉತ್ತರ ಧ್ರುವ ಪ್ರಭೆಯ ಬಗ್ಗೆಯಂತೂ ಹೇಳುವದೇ ಬೇಡ." "ಇನ್ನೂ ದೊಡ್ಡದಾದ ಗರಿಯು ಊಹಿಸಿಕೊಳ್ಳಬಹು ದಾದಂಥ ಅತ್ಯಂಥ ದೊಡ್ಡದಾದ ಹಾನಿಯನ್ನು ಮಾಡಬಲ್ಲದು" ಎಂದು ಲೇಖಕನು ಸಮ್ಮತಿಸುತ್ತಾನೆ, ಆದರೆ "ಅಂಥ ಸಂಭಾವ್ಯತೆಗಳು ಎಳ್ಳಷ್ಟೂ ಇರುವದಿಲ್ಲ" ಎಂದು ಒಪ್ಪಿಕೊಳ್ಳುತ್ತಾನೆ.[54] ದೇವರು ಹೇಗೆ ಭೂಮಿಯನ್ನು ನಾಶಗೊಳಿಸುವದಕ್ಕೆ ಅಂಥ ಸ್ಫೋಟವನ್ನು ಬಳಸುವನೆಂಬುದು ಸುಲಭವಾಗಿರುತ್ತದೆ (ನೋಡಿರಿ 2 ಪೇತ್ರ 3:10-13). ದೇವರು ವಾಕ್ಯವನ್ನು ನುಡಿಯುವಾಗ ಲೋಕವು ನಾಶಗೊಳ್ಳುವಂತೆ ಅನುಮತಿಸುವನು, ಆದರೆ ಪಶ್ಚಾತ್ತಾಪ ಪಡುವದಕ್ಕೆ ನಮಗೆ ಅವಕಾಶವನ್ನು ಕೊಡುತ್ತಾನೆ (2 ಪೇತ್ರ 3:9). ದೇವರು ವಿಶ್ವವನ್ನು ತನ್ನ ನಿಯಂತ್ರಣದಲ್ಲಿ ಇಟ್ಟುಕೊಂಡಿರುತ್ತಾನೆ.

### ಪಶ್ಚಾತ್ತಾಪ ಪಡುವದಕ್ಕೆ ಒಂದು ಸಮಯ (2:9, 10)

ದುಷ್ಟಜನರು ಪಶ್ಚಾತ್ತಾಪ ಪಡುವಂತೆ ಮಾಡುವಂತದ್ದು ಯಾವದು? ಏಡ್ಸ್ ರೀತಿಯ ಜಯಿಸಲಿಕ್ಕಾಗದಂತಹ ಸಾಲುಸಲಾದ ವ್ಯಾಧಿಗಳು ಮನುಷ್ಯರಿಗೆ ಬುದ್ಧಿ ಬರುವಂತೆ ಮಾಡುತ್ತವೋ? ಸೆಪ್ಟೆಂಬರ್ 11, 2001ರಲ್ಲಿ New York City, Pentagon, ಮತ್ತು Pennsylvaniaದ ಒಂದು ಮೈದಾನದಲ್ಲಿ ಸಂಭವಿಸಿದ ಭಯೋತ್ಪಾದನಾ ದಾಳಿಗಳು ಅಮೆರಿಕದ ಜನರನ್ನು ಆತ್ಮೀಕವಾಗಿ ದೊಡ್ಡ ಪ್ರಮಾಣದಲ್ಲಿ ಎಚ್ಚೆತ್ತುಕೊಳ್ಳುವಂತೆ ಮಾಡುವದೆಂಬದಾಗಿ ತೋರಿತ್ತು. ಇನ್ನೊಂದು ಸರಣಿ ಭಯೋತ್ಪಾದನಾ ದಾಳಿಯಿಂದ, ಅಥವಾ ಒಂದು ಚಂಡಮಾರುತ ಅಥವಾ ಭೂಕಂಪದ ಉಂಟಾಗುವ ವಿಧ್ವಂಸನ ಹಾಗೂ ಮರಣದ ಫಲಿತವಾಗಿ ಒಂದು ಬೃಹತ್ ಉಜ್ಜೀವನವು ಸುಲಭವಾಗಿ ಸಂಭವಿಸಬಹು ದಾಗಿದೆ. ಈ ವಿಧವಾದ ದುರಂತರ ಘಟನೆಗಳು ಜನರನ್ನು ಎಚ್ಚೆತ್ತುಕೊಳ್ಳುವಂತೆ ಮತ್ತು ತಾವು ತಮ್ಮನ್ನು ಕಾಪಾಡಿಕೊಳ್ಳಲಾರರೆಂಬುದನ್ನು ಅರಿತುಕೊಳ್ಳುವಂತೆ ಮಾಡಬಲ್ಲವು, ಮತ್ತು ಹೀಗೆ ಏಕೈಕ ಸತ್ಯವಾದ ಜೀವವುಳ್ಳ ದೇವರ ಕಡೆಗೆ ತಿರುಗಿಕೊಳ್ಳುವಂತೆ ಮಾಡುತ್ತದೆ! ಲೂಕ 13:1-5ರಲ್ಲಿ,

ಯೇಸು ಪಶ್ಚಾತ್ತಾಪ ಪಡುವಂತೆ ಜನರನ್ನು ಬೇಡಿಕೊಳ್ಳುವದಕ್ಕೆ ಆಕಸ್ಮಿಕ ಹಾಗೂ ಉದ್ದೇಶಪೂರ್ವಕವಾದ ಮರಣಗಳನ್ನು ಬಳಸಿಕೊಳ್ಳುತ್ತಾನೆ. ಸತ್ತು ಹೋದ ಆ ಜನರು ಬದುಕಿರುವವರಿಗಿಂತ ಹೆಚ್ಚು ಕೆಟ್ಟವರೇನೂ ಆಗಿರಲಿಲ್ಲ; ಆದರೆ ಅವರ ಮರಣಗಳು ನಮಗೆ ಪಶ್ಚಾತ್ತಾಪ ಪಡುವಂತೆ ಬುದ್ಧಿವಾದಗಳಾಗಿರತಕ್ಕದ್ದೆಂದು ಹೇಳುತ್ತಾನೆ. ನಾವು ಈಗಿನ ಅದೇ ರೀತಿಯ ಘಟನೆಗಳನ್ನು ಯೇಸುವಿನ ಪ್ರಕಾರವಾಗಿಯೇ ಬಳಸಿಕೊಳ್ಳತಕ್ಕದ್ದು.

## ಕ್ಷಮಾಪಣೆಯನ್ನು ನ್ಯಾಯವೆಂದು ಸಮರ್ಥೀಸುವದು (2:9, 10)

ದೇವರು ಸಾಧ್ಯವಿರುವದಾದಲ್ಲಿ ಲೋಕವನ್ನು ರಕ್ಷಿಸುವದಕ್ಕೆ ತನ್ನ ಮಗನ ಮರಣದಿಂದಲ್ಲದೆ, ಬೇರೆ ಯಾವದಾದರೂ ದಾರಿಯನ್ನು ಕಂಡುಕೊಂಡಿರುತ್ತಿದ್ದನು. ದೇವರು ಬೇರೆ ಯಾವ ರೀತಿಯಲ್ಲಿ ನಮ್ಮ ಪಾಪಗಳಿಗೆ ಈಡು ಸಲ್ಲಿಸುವದಕ್ಕೆ ಸಾಧ್ಯ? ಪಾಪವು ಎಷ್ಟೋ ಭಯಂಕರ, ಎಷ್ಟೋ ಹೇಯಕರ ಮತ್ತು ಬೃಹತ್ತಾಕಾರದ್ದಾಗಿದ್ದು, ನಮ್ಮಲ್ಲಿ ಒಬ್ಬರ ಪಾಪಗಳ ಕ್ಷಮಾಪಣೆಯನ್ನಾದರೂ ಸಂಪಾದಿಸಿಕೊಳ್ಳುವದಕ್ಕೆ ನಮ್ಮಲ್ಲೊಬ್ಬರೂ ಈಡು ಕೊಡುವದಕ್ಕೆ ಸಾಧ್ಯವಿಲ್ಲದವರಾಗಿದ್ದೇವೆ.

ಮಾನವರ ಮೇಲಿರುವ ತನ್ನ ಪ್ರೀತಿಯ ಕಾರಣದಿಂದ, ದೇವರು ಪಾಪದ ಸಾಲವನ್ನು ತೀರಿಸುವದಕ್ಕೆ ದಾರಿಯೊಂದನ್ನು ಕಂಡು ಹಿಡಿದನು. ಅದಕ್ಕೆ ಒಂದು ಪರಿಪೂರ್ಣವಾದ ಯಜ್ಞದ ಪೂರ್ಣ ಬೆಲೆಯ ಅಗತ್ಯವಿತ್ತು. ಆತನ ಮಗನು ಮಾತ್ರವೇ ಆ ಮಾನದಂಡವನ್ನು ಸಂಧಿಸುವದಕ್ಕೆ ಸಾಧ್ಯವಿತ್ತು. ಆ ಮಗನಾದ ಕ್ರಿಸ್ತನು, ನರಾವತಾರವೆತ್ತಿ ಭೂಮಿಯ ಮೇಲೆ ಜೀವಿಸುವದಕ್ಕೆ, ಮತ್ತು ಮಾನವರ ಪಾಪಗಳಿಗಾಗಿ ಸಾಯುವದಕ್ಕೆ ಒಪ್ಪಿಕೊಂಡನು. ನಾವು "ನೀತಿಸ್ವರೂಪಿಗಳಾಗುವಂತೆ . . . ನಮಗೋಸ್ಕರ ಪಾಪಸ್ವರೂಪಿ ಯಾದನು" (2 ಕೊರಿಂಥ 5:21).

ದೇವರು ಕ್ರೈಸ್ತ ವ್ಯವಸ್ಥೆಯೊಳಗೆ, ಒಂದು ನಿಜವಾದ ಯಜ್ಞಕ್ಕೆ ಅಗತ್ಯವಾಗುವ ಸಾಲವನ್ನು ತೀರಿಸುವದಕ್ಕೆ ಒಂದು ದಾರಿಯನ್ನು ಹೊಂದಿರುತ್ತಾನೆ. ಬಹುಪಾಲು ಧರ್ಮಗಳು ಅಪರಾಧಗಳಿಗಾಗಿ ಒಂದು ನ್ಯಾಯವಾದ ಈಡು ಸಲ್ಲಿಸಲ್ಪಡುವಿಕೆಯನ್ನು ಅಗತ್ಯವೆಂದು ಎಣಿಸುವದಿಲ್ಲ, ಆದರೆ ಅವುಗಳು ಮನಬಂದಂತೆ ಯಾರಾರು ದಂಡನೆಗೆ ಗುರಿಯಾಗಬಲ್ಲರು ಮತ್ತು ಪಾಪಗಳಿಗೆ ಒಂದು ಯಜ್ಞವಿಲ್ಲದೆ ಯಾರಾರು ರಕ್ಷಿಸಲ್ಪಡಬಲ್ಲರು ಎಂಬುದನ್ನು ನಿರ್ಧರಿಸಬಲ್ಲವು. ಹೀಗೆ ಅವುಗಳು ದೇವರ ನೀತಿಯನ್ನು ಕಾಪಾಡಿಕೊಂಡು ಹೋಗುವ ಯಾವದೇ ನ್ಯಾಯವಾದ ದೈವಶಾಸ್ತ್ರೀಕ ವ್ಯವಸ್ಥೆಯನ್ನು ಹೊಂದಿರುವದಿಲ್ಲ. ಯಾವದು ಹೆಚ್ಚು ತಾರ್ಕಿಕವೆಂದು ತೋರುತ್ತದೆ: ಒಂದು ನ್ಯಾಯವಾದ ಈಡು ಕೊಡಬೇಕೆಂಬ ಕ್ರೈಸ್ತೀಯ ಭಾವನೆಯೋ ಅಥವಾ "ನಾನು ಸ್ನೇಹಪರನಾದ್ದರಿಂದ ಎಲ್ಲವೂ ಕ್ಷಮಿಸಲ್ಪಟ್ಟಿದೆ" ಎಂದಷ್ಟೆ ಘೋಷಿಸುವ ದೇವರೋ? (ನೋಡಿರಿ ರೋಮಾ 3:23-26.)

## ಕ್ರಿಸ್ತನ ಬಾಧೆಗೆ ಆಕ್ಷೇಪಣೆಗಳು (2:10)

ಅವರ ಮೆಸ್ಸೀಯನು ಬಾಧೆಯನ್ನನುಭವಿಸಿ ಮರಣಿಸಿದನೆಂಬುದು ಅನೇಕ ಇಬ್ರಿಯರಿಗೆ ಒಂದು ಮುಖಭಂಗದಂತಾಗಿತ್ತು. ಅದು ಶಾಸ್ತ್ರಗಳಿಗನುಸಾರವಾಗಿತ್ತೆಂಬುದು ಮಾತ್ರವೇ ಅಲ್ಲ, ಆದರೆ ಅದು ಅವರ ಪ್ರಯೋಜನಾರ್ಥವಾಗಿ ಸಂಪೂರ್ಣ ತಕ್ಕದ್ದಾಗಿತ್ತು ಎಂಬುದನ್ನು ಸಹ ಅವರು ಅರಿತುಕೊಳ್ಳುವ ಅಗತ್ಯವಿತ್ತು. ಶತಮಾನಗಳಿಂದ ಬಾಧೆಯನ್ನನುಭವಿಸಿದ ಯೆಹೂದ್ಯರಷ್ಟೆ ಜನರು ತಮ್ಮ ಹೊಸ ಅರಸನಿಗಾಗಿ, ತನ್ನನ್ನು ಅವರು ಬಾಧೆಯನ್ನನುಭವಿಸಿದ ರೀತಿಯಲ್ಲಿಯೇ

ಅವರಿಗೋಸ್ಕರ ಬಾಧೆಯನ್ನನುಭವಿಸುವದಕ್ಕೆ ಸಿದ್ಧನಿದ್ದ ಆತನ ಬಗ್ಗೆ ಅವರು ಶ್ಲಾಘನೆ ಮತ್ತು ಸಂತೋಷವನ್ನು ವ್ಯಕ್ತಪಡಿಸುವದು ಅವರಿಗೆ ಸಹಜವಾಗಿರತಕ್ಕದ್ದಾಗಿತ್ತು. ಯಾರೋ ಒಬ್ಬನು ಬೇರೆಯವರ ಪರವಾಗಿ ಕಾರ್ಯಮಾಡಿ ಅವರ ಹೃದಯಗಳನ್ನು ಮೃದುಗೊಳಿಸಿ ಪಾಪಿಗಳನ್ನು ತನ್ನೆಡೆಗೆ ಸೆಳೆದುಕೊಳ್ಳುವದಕ್ಕೆ ಆಕರ್ಷಿಸುವ ಶಕ್ತಿಯಿರುವದು ದೇವರಿಗೆ ಗೊತ್ತಿತ್ತು. ಇದೆಲ್ಲವೂ “ಬಹು ಮಂದಿ ಪುತ್ರರನ್ನು ಪ್ರಭಾವಕ್ಕೆ ಸೇರಿಸಲು” ಮಾಡಿದ್ದಾಗಿತ್ತು (ವ. 10) — ಅದು ಸೊಲೊಮೋನನ ಪ್ರಭಾವಕ್ಕಿಂತ ಎಷ್ಟೋ ಹೆಚ್ಚು ಅದ್ಭುತಕರವಾಗಿತ್ತು. ದೇವರು ಎಂದಿಗೂ ಕೆಲವೇ ಕೆಲವರನ್ನು ರಕ್ಷಿಸಬೇಕೆಂದು ಇಚ್ಛಿಸಲಿಲ್ಲ, ಆದರೆ ಎಲ್ಲಾ ಜನರನ್ನು ಪಶ್ಚಾತ್ತಾಪಕ್ಕೆ ಕರೆ ತರಬೇಕೆಂದು ಬಯಸಿದನು (1 ತಿಮೊಥೆ 2:4; 2 ಪೇತ್ರ 3:9). ಯಾವನೂ ಸಹ ತನ್ನ ಸ್ವ-ಗ್ರಹಿಕೆಯ ಜ್ಞಾನದಲ್ಲಿ ದೇವರು ನಮ್ಮ ಮುಂದಿಟ್ಟಿರುವ ವಿಧಾನಕ್ಕಿಂತಲೂ ಉತ್ತಮವಾದ ವಿಧಾನವನ್ನು ತಾನು ರೂಪಿಸಿರುತ್ತಿದ್ದೆನೆಂದು ಊಹಿಸಿಕೊಳ್ಳದಿರಲಿ (ಯೋಹಾನ 12:32). ಸುವಾರ್ತೆಯನ್ನು ಸಾರುವಿಕೆಯು ಈಗಲೂ ಜನರನ್ನು ತನ್ನೆಡೆಗೆ ಸೆಳೆದುಕೊಳ್ಳಲು ದೇವರ ದಾರಿಯಾಗಿರುತ್ತದೆ (ಯೋಹಾನ 6:44, 45).

### ಕ್ರಿಸ್ತನ ಸ್ಥಾನದಲ್ಲಿ (2:11)

ಯೇಸು ಮತ್ತಾಯ 25:40ರಲ್ಲಿ ಒಬ್ಬನು ಕ್ರಿಸ್ತನಲ್ಲಿನ ತನ್ನ ಸಹೋದರನಿಗೆ ಸಹಾಯ ಮಾಡುವದಾದರೆ ಆತನು ಸ್ವತಃ ಕರ್ತನಿಗೆ ಸಹಾಯ ಮಾಡಿದವನಾಗುತ್ತಾನೆಂಬ ಅದ್ಭುತವಾದ ಹೇಳಿಕೆಯನ್ನು ನೀಡುತ್ತಾನೆ. ನಾವು ಮತ್ತೊಬ್ಬ ವ್ಯಕ್ತಿಗೆ ಒಂದು ಉಪಕಾರವನ್ನು ಮಾಡುವದಾದರೆ, “ನಾನು ಆತನಿಗೆ ಕ್ರಿಸ್ತನಾಗಿರುತ್ತೇನೆ” ಎಂದು ನಾವು ಯೋಚಿಸಬಹುದು. ಇಲ್ಲ, ನೀವು ತಪ್ಪು ತಿಳಿದಿದ್ದೀರಿ. ಆ ವ್ಯಕ್ತಿಯು *ನಿಮಗೆ* ಕ್ರಿಸ್ತನಾಗಿರುತ್ತಾನೆ! ನಾವು ಕ್ರಿಸ್ತನಲ್ಲಿರುವ ಸಹೋದರ ಮತ್ತು ಸಹೋದರಿಯರನ್ನು ಅತ್ಯಂಥ ಗೌರವದಿಂದ ಕಾಣುವಾಗ, ಅವರ ಪ್ರಯೋಜನಾರ್ಥವಾಗಿ ವೈಯಕ್ತಿಕ ತ್ಯಾಗಗಳನ್ನು ಮಾಡುವಷ್ಟರ ಮಟ್ಟಿಗೆ ಅವರನ್ನು ಗೌರವಿಸುವ ಮೂಲಕ ನಾವು ಕ್ರಿಸ್ತನೊಂದಿಗೆ ಗುರುತಿಸಿಕೊಳ್ಳುತ್ತೇವೆ. ನೀವು ಕ್ರಿಸ್ತನನ್ನು ಭೇಟಿಯಾಗಲಿಚ್ಛಿಸುವಿರೋ? ನೀವು ಆತನಿಂದ “ಸಹೋದರ” ಎಂದು ಕರೆಸಿಕೊಳ್ಳಲು ಇಚ್ಛಿಸುವಿರೋ? ಹಾಗಾದರೆ ಇಂದು, ಅಗತ್ಯತೆಯಲ್ಲಿರುವ ಒಬ್ಬ ಸಹೋದರ ಅಥವಾ ಸಹೋದರಿಯನ್ನು ಹುಡುಕಿಕೊಳ್ಳಿರಿ, ಮತ್ತು ಆ ಅಗತ್ಯತೆಯನ್ನು ಸಂಧಿಸಿರಿ. ಹಾಗೆ ಮಾಡುವ ಮೂಲಕ ನೀವು ಯೇಸುವಿಗೆ ಸೇವೆ ಮಾಡಿದವರಾಗುವಿರಿ!

### ಮರಣ: ಸೈತಾನನ ಒಂದು ಮುಖ್ಯ ಅಧಿಕಾರ (2:14, 15)

ಮರಣವು ಎಲ್ಲರಿಗೂ ಖಚಿತವಾಗಿ ಬರುತ್ತದೆ ಆದರೆ ಮಾನವರ ಕಡೇ ಸಂತತಿಗೆ, ಕ್ರಿಸ್ತನು ಹಿಂದಿರುಗಿ ಬರುವಾಗ ಭೂಮಿಯ ಮೇಲಿರುವವರಿಗೆ ಅದು ಬರುವಂಥದ್ದಲ್ಲ (ಇಬ್ರಿಯ 9:27; 1 ಥೆಸಲೋನಿಕ 4:13-17). ಮರಣದ ಬಗ್ಗೆ ಗಂಭೀರವಾಗಿ ಯೋಚಿಸುವಂಥ ಆದರೆ ಅಲ್ಪ ನಂಬಿಕೆಯುಳ್ಳ ಜನರು ಮರಣದ ಕುರಿತು ಅತಾರ್ಕಿಕವಲ್ಲದ ಭಯಗಳನ್ನು ಬೆಳೆಸಿಕೊಳ್ಳುವರು. ಮರಣಿಸುವದಕ್ಕೆ ಹೆದರುವದು ಸಹಜವಾದದ್ದು ಆದರೆ ಅನಾವಶ್ಯಕವಾದದ್ದು.

ಒಬ್ಬ ಯುವಕನಾಗಿ, ನನ್ನ ಅಜ್ಜಿಯು ಮರಣದ ಬಗ್ಗೆ ಹೊಂದಿದ್ದ ಮನೋಭಾವವನ್ನು ಕಂಡು ನಾನು ಒಂದು ರೀತಿಯಲ್ಲಿ ಆಘಾತಗೊಂಡಿದ್ದೆನು. ಆಕೆಯು Arkansasನ Grubbsನಲ್ಲಿರುವ ಸಭೆಯ ಕಟ್ಟಡದ ಹಿಂದುಗಡೆಯಲ್ಲಿಯೇ ಇದ್ದ ತನ್ನ ಮುಂದಿನ ವರಾಂಡದಲ್ಲಿ ಕುಳಿತಿರುವಾಗ, ಹೀಗೆ ಹೇಳಿದಳು, “ನಾನು ಸಾಯುವದಕ್ಕೆ ಪರಿಪೂರ್ಣವಾಗಿ ಮನಸ್ಸುಳ್ಳವಳಾಗಿದ್ದೇನೆ.

ನಾನಂತೂ ಕಾತರದಿಂದ ಕಾಯುತ್ತಿದ್ದೇನೆ. ನನಗೆ ಅದರ ಬಗ್ಗೆ ಯಾವ ಭಯವೂ ಇಲ್ಲ." ಆಕೆಯ ನಂಬಿಕೆಯು ಆಕೆಯು ಇಚ್ಛಿಸುವ ಹಂತದ ವರೆಗೂ ತಲುಪಿತ್ತು; ಆಕೆಯ ಕುರುಬನು "ಮರಣಾಂಧಕಾರದ ಕಣಿವೆಯಲ್ಲಿ ನಡೆಯುವಾಗಲೂ" ಆಕೆಯೊಂದಿಗೆ ಇರುವನೆಂಬ ದೃಢವಿಶ್ವಾಸ ಹೊಂದಿದ್ದಳು. ನನಗೆ ಆಗ ಆ ದೃಢವಿಶ್ವಾಸವನ್ನು ಹೊಂದಬೇಕೆಂದು ಇಚ್ಛಿಸಿದೆನು ಮತ್ತು ಆ ವೇಳೆಯಲ್ಲಿ ಅದು ನನ್ನಲ್ಲಿರಲಿಲ್ಲ. ಈಗ, ಮೂವತ್ತೈದಕ್ಕೂ ಹೆಚ್ಚು ವರ್ಷಗಳಾದ ಬಳಿಕ, ನಾನು ಅದರ ಹತ್ತರಕ್ಕೆ ಬಂದಿದ್ದೇನೆ – ಆದರೆ, ಸಕಲ ಪ್ರಾಮಾಣಿಕತೆಯಲ್ಲಿ ಹೇಳುವದಾದರೆ, ನನ್ನ ನಂಬಿಕೆಯು ಆ ಮಟ್ಟಕ್ಕೆ ಬೆಳೆದಿದೆಯೋ ಎಂಬ ಖಚಿತತೆ ನನಗಿರುವದಿಲ್ಲ.

1999ರ ಅಗಸ್ಟ್ ತಿಂಗಳಿನಲ್ಲಿ, ನಾನು ಅಧಿಕವಾದ ಜ್ವರ ಬಾಧೆಯಿಂದ ಆಸ್ಪತ್ರೆಗೆ ರಭಸವಾಗಿ ಸಾಗಿಸಲ್ಪಟ್ಟೆನು, ಮತ್ತು ಮರಣವು ಬರುತ್ತಲಿದೆ ಎಂದು ಭಾವಿಸಿದೆನು. ಹೇಗೂ, ನನ್ನ ಹೆಂಡತಿ, ನನ್ನೆಲ್ಲಾ ಮಕ್ಕಳು ಹಾಗು ಒಬ್ಬ ಅಳಿಯ ಇವರೆಲ್ಲರನ್ನೊಳಗೊಂಡಿದ್ದ ಮೂರು ತಂಡಗಳು ಪ್ರಯಾಣಿಸುವ ವಾಹನಗಳಲ್ಲಿ, ನಾನು ಎದುರುನೋಡಿರದಂತಹ ಸಮಾಧಾನವನ್ನು ಅನುಭವಿಸಿದೆನು. ನಾನು ಹೀಗೆ ಅಂದುಕೊಂಡೆನು, "ಇದು ನನ್ನ ಸಮಯ, ನಾನು ದೇವರಲ್ಲಿ ಮತ್ತು ನನ್ನೊಂದಿಗಿರುವ ನನ್ನ ಮಕ್ಕಳಲ್ಲಿ ನಂಬಿಕೆಯನ್ನು ಹೊಂದುವದಕ್ಕಿಂತ ಬೇರೆ ಯಾವದೇ ಉತ್ತಮ ದಾರಿಯು ನನಗಿರುವದಿಲ್ಲ." ಆ ಸಂದರ್ಭ ಮತ್ತು ಹಲವಾರು ವರ್ಷಗಳ ಬಳಿಕ ಸ್ವಲ್ಪದರಲ್ಲಿಯೇ ಸಂಭವಿಸಬೇಕಿದ್ದ ವಾಹನ ಅಪಘಾತವು ಮರಣಿಸುವ ಕುರಿತು ಗಂಭೀರವಾಗಿ ಯೋಚಿಸುವಂತೆ ಮಾಡಿತ್ತು. ನಾನು ಯೇಸುವಿನಲ್ಲಿ ಹೊಂದಿರುವ ನಂಬಿಕೆಯು ಮರಣ ಭಯವನ್ನು ನಾಶಗೊಳಿಸುವಂತೆ ಸಹಾಯ ಮಾಡಿರುತ್ತದೆ. ನಾವು ದೊಡ್ಡವರಾಗಿ ಬೆಳೆಯುತ್ತಾ ಹೋದಂತೆ, ನಾವು ಮರಣದ ಬಗ್ಗೆ ಹೆಚ್ಚು ಸಾರಿ ಯೋಚಿಸುತ್ತೇವೆ, ವಿಶೇಷವಾಗಿ ನಮ್ಮ ಮಿತ್ರರಲ್ಲಿ ಕೆಲವರು ಲೋಕವನ್ನು ಬಿಟ್ಟು ಹೋಗುವಾಗ ಹಾಗೆ ಯೋಚಿಸುತ್ತೇವೆ. ಕಾಲ ಮತ್ತು ಅನುಭವಗಳು ನಮಗೆ ಮರಣಕ್ಕಾಗಿ ಸಿದ್ಧಗೊಳ್ಳುವಂತೆ ಸಹಾಯ ಮಾಡುತ್ತವೆ, ಮತ್ತು ಆ ಅನುಭವಗಳನ್ನು ದೇವರಿಂದ ಬಂದ ಆಶೀರ್ವಾದಗಳೆಂದು ಎಣಿಸಿಕೊಳ್ಳಬಹುದಾಗಿದೆ – ಆ ಸಮಯದಲ್ಲಿ ಅವುಗಳು ಎಷ್ಟೇ ಕಠಿಣವೆಂದು ತೋರಿದರೂ ಸರಿಯೇ (ರೋಮಾ 8:28). ದೇವರ ವಾಗ್ದಾನಗಳಲ್ಲಿ ನಂಬಿಕೆ ಮತ್ತು ದೃಢವಿಶ್ವಾಸವು ನಮಗೆ ಅಗತ್ಯವಿರುವ ಎಲ್ಲಾ ಆದರಣೆಯನ್ನು ಒದಗಿಸಬಲ್ಲದು.

## ಯೇಸು ನಮಗೆ ಏನನ್ನು ತಂದನು (2:14, 15)

ಕೆಲವು ವರ್ಷಗಳ ಹಿಂದೆ, *Reader's Digest* ಮ್ಯಾಗಜಿನ್ *Peace Child* ಎಂಬ ಪುಸ್ತಕದ ಒಂದು ವಿಭಾಗವನ್ನು ಮರುಮುದ್ರಣ ಮಾಡಿತ್ತು.[55] New Guinea triedದ ಕಾಡುಗಳಲ್ಲಿದ್ದ ಒಬ್ಬ ಮಿಶನರಿಯು ಹೇಗೆ ಕಾದಾಟದಲ್ಲಿದ್ದ ಎರಡು ಗುಂಪುಗಳ ನಡುವೆ ಸಮಾಧಾನವನ್ನು ಏರ್ಪಡಿಸುವದಕ್ಕೆ ಪ್ರಯತ್ನಿಸಿದನೆಂಬುದನ್ನು ಅದು ಬಣ್ಣಿಸುವದಾಗಿತ್ತು. ಆತನು ದೀರ್ಘಕಾಲದಿಂದ ಮರೆತುಹೋಗಿದ್ದಂಥ ಅವರೊಳಗಿದ್ದ "ಸಮಾಧಾನ ಮಗು" ಎಂಬ ಒಂದು ಪ್ರಾಚೀನ ಪದ್ಧತಿಯ ಬಗ್ಗೆ ತಿಳಿದುಕೊಂಡನು. ಒಂದು ಬುಡಕಟ್ಟು ಜನಾಂಗದ ಕುಟುಂಬವು ತಮ್ಮ ಹಸುಕೂಸನ್ನು ವಿರೋಧಿ ಗುಂಪಿನ ಬುಡಕಟ್ಟು ಜನಾಂಗದ ಕುಟುಂಬವೊಂದರ ವಶಕ್ಕೆ ಒಪ್ಪಿಸುತ್ತಿತ್ತು, ಅದೇ ರೀತಿಯಲ್ಲಿ ಎರಡನೆಯ ಕುಟುಂಬದವರು ತಮ್ಮ ಮಕ್ಕಳಲ್ಲೊಬ್ಬರನ್ನು ಹಾಗೆಯೇ ಅವರಿಗೆ ಒಪ್ಪಿಸಿ ಕೊಡುತ್ತಿದ್ದರು. ಹೀಗೆ ಇದು ಮಕ್ಕಳ ಮೂಲಕ ಆ ಬುಡಕಟ್ಟು ಜನಾಂಗಗಳ ನಡುವೆ ಒಂದಾಗಿ ಕೂಡಿಸುತ್ತಿತ್ತು ಮತ್ತು ಸಮಾಧಾನದ ಖಚಿತಪಡಿಸುವದಾಗಿತ್ತು. ಈ ಸಂಪ್ರದಾಯದ ಬಗ್ಗೆ ತಿಳಿದುಕೊಂಡವನಾಗಿ ಮಿಶನರಿಯು ಆ

ಸಾದೃಶ್ಯವನ್ನು ಬಳಸಿ ಯೇಸುವು ಏನು ಮಾಡಿದ್ದಾನೆಂಬುದನ್ನು ವಿವರಿಸಿದನು. ದೇವರ ಸಮಾಧಾನದ ಮಗುವಾಗಿ, ನಮ್ಮ ಪಾಪಗಳಿಗೋಸ್ಕರ ತನ್ನನ್ನು ಅರ್ಪಿಸಿಕೊಳ್ಳಲು ಮತ್ತು ಆ ಮೂಲಕ ಯಾವಾತನೊಂದಿಗೆ ನಮ್ಮ ಪಾಪಗಳು ವೈರತ್ವವುಂಟು ಮಾಡಿದ್ದವೋ ಅವನೊಂದಿಗೆ ನಮ್ಮನ್ನು ಸಂಧಾನಪಡಿಸುವದಕ್ಕೆ ಆತನು ಲೋಕಕ್ಕೆ ಕಳುಹಿಸಲ್ಪಟ್ಟನು (ಎಫೆಸ 2:14).

W. B. West Jr., ಈ ಕೆಳಗಿನ ದೃಷ್ಟಾಂತವನ್ನು ಹಂಚಿಕೊಳ್ಳುತ್ತಾನೆ. ಒಬ್ಬ ತಾಯಿಯು ಇತ್ತೀಚೆಗಷ್ಟೆ ತನ್ನ ಮಗುವನ್ನು ಕಳಕೊಂಡಿದ್ದ ಮತ್ತೊಬ್ಬ ತಾಯಿಯನ್ನು ಸಾಂತ್ವನ ಮಾಡುವದಕ್ಕೆ ಬಂದಿದ್ದಳು. ಆಕೆಯು ವೇದನೆಯಲ್ಲಿರುವ ಒಬ್ಬ ತಾಯಿಯ ಬಾಧೆಯ ಕುರಿತು ಸುಂದರವಾಗಿ ಮಾತಾಡಿದಳು ಆದರೆ ಅಷ್ಟಾಗಿ ಆದರಣೆಯನ್ನುಂಟು ಮಾಡಲಿಲ್ಲ. ಇನ್ನೊಬ್ಬಳು ಬಂದು ನಾಜೂಕಿಲ್ಲದ ರೀತಿಯಲ್ಲಿ ಮಾತಾಡಿದಳು, ಆದರೆ ಆಕೆಯು, "ನಿನ್ನ ದುಃಖ ನನಗೆ ಅರ್ಥವಾಗುತ್ತದೆ, ಯಾಕೆಂದರೆ ಸ್ಮಶಾನದಲ್ಲಿ ಒಂದು ಚಿಕ್ಕ ಸಮಾಧಿಯಿದ್ದು ಅದರಲ್ಲಿ ನನ್ನ ಕೂಸಿನ ಮೂಳೆಗಳನ್ನು ಹೂತಿರುತ್ತೇನೆ" ಎಂದು ಹೇಳಿದಳು. ಆಕೆಯ "ಸಹಾನುಭೂತಿ ಎಷ್ಟೋ ಹೆಚ್ಚು ಅರ್ಥಪೂರ್ಣವಾಗಿತ್ತು" ಎಂದು ಸಹೋದರ West ವ್ಯಾಖ್ಯಾನಿಸುತ್ತಾನೆ.

ಯೇಸು ನಮಗೆ ದೇವರೊಂದಿಗೆ ಹಾಗೂ ನಮ್ಮೊಂದಿಗೆ ಸಾಮಾಧಾನ ಮನಸ್ಸು, ಸಂತೃಪ್ತಿ, ಮತ್ತು ಸಂತೃಪ್ತಿಗಳ ಸಾಧ್ಯತೆಯನ್ನು ತಂದನು. ಇದಕ್ಕಿಂತ ದೊಡ್ಡದಾದ ಯಾವ ಆಶೀರ್ವಾದಗಳನ್ನು ಕಲ್ಪಿಸಿಕೊಳ್ಳಲಾಗದು. "ಇದು ಪರಿಣಾಮಕಾರಿಯಾಗಿ ಮರಣದ ಅಂಜಿಕೆಯನ್ನು ತೆಗೆದುಹಾಕುವ ಮತ್ತು ಈ ಅಂಶವನ್ನು – ದೇವರು ತನ್ನನ್ನು ಇಡುವಂಥ ಎಲ್ಲಾ ಪರಿಸ್ಥಿತಿಗಳಲ್ಲಿ ಜೀವಿಸುವದಕ್ಕೆ ಮನಸ್ಸುಳ್ಳವನನ್ನಾಗಿ ಮನುಷ್ಯನನ್ನು ರೂಪಿಸುವದು – ಭದ್ರಪಡಿಸುವ ಏಕೈಕ ಸಂಗತಿಯಾಗಿದೆ."[56]

ಲೋಕದ ಜನರು ಮರಣದಿಂದ ಶೋಚನೀಯವಾಗಿ ಓಡಿಹೋಗುವ ಪ್ರಯತ್ನ ಮಾಡುತ್ತಾರೆ:

> ತಾವು ಅದರಿಂದ ದೂರವಿರಬಹುದೋ ಎಂದು ಎಂದಿಗೂ ಯೋಚಿಸುವದಿಲ್ಲ; ಮತ್ತು ಅದು ಅವರ ಮೇಲೆ ಒತ್ತಾಯದಿಂದ ಹೇರಲ್ಪಟ್ಟಾಗ, ಅದು ಅವರನ್ನು ದಿಗಿಲು ಬೀಳಿಸುತ್ತದೆ. ಅವರು ಆ ಯೋಚನೆಯನ್ನು ಹೊರಗೊಡಿಸುವದಕ್ಕೆ ಪ್ರಯತ್ನಿಸುವರು. ಅವರು [ಬೇರೆ ದೇಶಗಳಿಗೆ] ಪ್ರಯಾಣಿಸುವರು; ಅವರು ವ್ಯಾಪಾರಗಳಲ್ಲಿ ದುಮುಕುವರು; ಅವರು ಮನಸ್ಸುಗಳನ್ನು ನಿರರ್ಥಕವಾದವುಗಳಿಂದ ತುಂಬಿಸಿಕೊಳ್ಳುತ್ತಾರೆ; ಅವರು ತಮ್ಮ ಭಯಗಳನ್ನು ಅಮಲೇರಿಸುವ ಪಾತ್ರಗಳಲ್ಲಿ ಮುಳುಗಿಸಿಕೊಳ್ಳುತ್ತಾರೆ; ಆದರೆ ವಾಸ್ತವತೆಯು ಎದುರಾಗುವಾಗ ಇದೆಲ್ಲವೂ ಮರಣವನ್ನು ಮತ್ತಷ್ಟು ಭಯಂಕರ ಹಾಗೂ ಭಯಭರಿತಗೊಳಿಸುತ್ತದೆ.[57]

ಯೆಶಾಯನು ಹೀಗೆ ಬರೆದನು, "ದುಷ್ಟರಿಗೆ ಸಮಾಧಾನವೇ ಇಲ್ಲ ಎಂದು ಯೆಹೋವನು ನುಡಿಯುತ್ತಾನೆ" (ಯೆಶಾಯ 48:22).

ಕ್ರೈಸ್ತನು ಮರಣದಲ್ಲಿ ಉಜ್ವಲವಾದ ಬದಿಯನ್ನು ಕಾಣುವನು: "ಮಾನವತ್ವದಲ್ಲಿ ನಾವು ನಮ್ಮ ವ್ಯಾಪ್ತಿಯ ಕಡೇ ಹಂತಕ್ಕೆ ಬರುವಾಗ, ನೈತಿಕವಾಗಲಿ ಅಥವಾ ಶಾರೀರಿಕವಾಗಿ ಯಾವದೇ ಸಂಪನ್ಮೂಲಗಳು ಉಳಿದಿಲ್ಲ ಎಂಬಂತೆ ತೋರುವಾಗ, ಕ್ರಿಸ್ತನು ತನ್ನ 'ಪುತ್ರರ' ಬಳಿಯಲ್ಲಿ ಅವರನ್ನು ತನ್ನ ಅಂತಿಮ ಮಹಿಮೆಗೆ ಕರೆದೊಯ್ಯುವದಕ್ಕೆ ಪೂರ್ಣವಾಗಿ ಅರ್ಹನಾಗಿದ್ದಾನೆಂಬ ವಾಗ್ದಾನದೊಂದಿಗೆ ಬರುವವನಾಗಿದ್ದಾನೆ." ನಮ್ಮ ಸಮಕಾಲಿನರು ಜೀವನದ ಮತ್ತು ಲಯತ್ವದ ಒತ್ತಡವನ್ನು ಸಮರ್ಥವಾಗಿ ನಿಭಾಯಿಸುವದಕ್ಕೆ ಸಾಧ್ಯವಿಲ್ಲವಾದರೂ, ಯೇಸುವು "ನಮಗೆ ನಮ್ಮ ತೀಕ್ಷ್ಣವಾದ ಶೋಧನೆಯ ವೇಳೆಯಲ್ಲಿ ಸಹಾಯ

ಮಾಡುವದಕ್ಕೆ ಶಕ್ತನಾಗಿದ್ದಾನೆ . . . ಆತನು ನಮ್ಮನ್ನು ಆತ್ಮೀಕವಾಗಿ ಕುಸಿದು ಬೀಳುವಿಕೆಯಿಂದ ತಪ್ಪಿಸಿ ಕಾಪಾಡುವದಕ್ಕೆ ಮತ್ತು ನಮ್ಮನ್ನು ದೇವರಿಗೆ ಆತನ ವಿಮೋಚಿಸಲ್ಪಟ್ಟ ಮಕ್ಕಳಾಗಿ ಅರ್ಪಿಸುವದಕ್ಕೆ ಶಕ್ತನಾಗಿದ್ದಾನೆ."[58] ಇದೆಲ್ಲವನ್ನೂ ಮಾಡುವಾತನನ್ನು ತಿಳಿದುಕೊಂಡಿರುವದು ಮರಣ ಭಯವನ್ನು ಜಯಿಸುವಂತೆ ನಮಗೆ ಸಹಾಯ ಮಾಡುತ್ತದೆ.

**"ಸಹಾಯಮಾಡುವದಕ್ಕೆ ಶಕ್ತನಾಗಿದ್ದಾನೆ" (2:18)**

"ಸಹಾಯ" ಎಂಬುದಕ್ಕಿರುವ ಪದವು KJVಯಲ್ಲಿ "ನೆರವು" ಎಂದಿರುತ್ತದೆ. ಅದರರ್ಥವು "ಒಂದು ಅಳುತ್ತಿರುವ ಮಗುವಿನ ಸಹಾಯಕ್ಕೆ ಓಡಿ ಹೋಗುವದು" ಎಂದಾಗಿದೆ.[59] ಒಬ್ಬ ಪ್ರೀತಿಸುವ ತಂದೆಯಂತೆ, ಯೇಸುವು ದೇವರ ಮಕ್ಕಳಿಗೆ ಸಹಾಯದ ಅಗತ್ಯವಿರುವಾಗಲೆಲ್ಲಾ ಅದನ್ನು ಒದಗಿಸುವವನಾಗಿದ್ದಾನೆ. ಅದು ಸರಿಯಾಗಿ ನಾವು ಬಯಸುವ ಸಮಯದಲ್ಲಿ, ಅಥವಾ ಅದು ಬರತಕ್ಕದ್ದೆಂದು ನಾವು ಯೋಚಿಸುವ ಸಮಯದಲ್ಲಿ ಬರದೆ ಇರಬಹುದು, ಆದರೆ ಅದು ಬಂದೇ ಬರುವದು – ಅನೇಕ ಸಾರಿ ನಾವು ಊಹಿಸಿರದಂತಹ ದಾರಿಗಳಲ್ಲಿ ಬರುವದು. ನಾನು ಇತ್ತೀಚಿಗೆ ಪುನಃ, ಇನ್ನೊಂದು ಕಣ್ಣಿಗೆ ಕಟ್ಟುವಂತಹ ಉದಾಹರಣೆಯನ್ನು ನೋಡಿದ್ದೇನೆ, ನನ್ನ ಮಗಳು ತನ್ನ ಅವಳಿ ಕೂಸುಗಳು ಸ್ವಲ್ಪ ಬಿಕ್ಕುವ ಸದ್ದು ಮಾಡಿದರೂ ಸಾಕು ಅವರ ಸಹಾಯಕ್ಕೆ ಓಡಿ ಹೋಗುತ್ತಿದ್ದಳು. ಆಕೆಯು ಆಗಾಗ ಭೇಟಿ ಕೊಡುತ್ತಿದ್ದ ವೇಳೆಗಳಲ್ಲಿ (ತನಗೆ ಅತಿಯಾದ ಕೆಲಸದಲ್ಲಿ ಆಕೆಯ ತಾಯಿಯ ಸಹಾಯವನ್ನು ಬೇಡುವದಕ್ಕೆ), ಕಳೆದು ಹೋಗಿರುವ ವರ್ಷಗಳಲ್ಲಿ ನಾನು ನನ್ನ ಸ್ವಂತ ಮಕ್ಕಳಿಗೆ ನಾನು ತೋರಿಸಿದ್ದಕ್ಕಿಂತಲೂ ಹೆಚ್ಚು "ಮುನ್ನುಗ್ಗಿ ಸಹಾನುಭೂತಿ"ಯನ್ನು ತೋರಿಸುವವನಾಗಿ ಬಿಟ್ಟಿರುತ್ತೇನೆ.

ಯೇಸು ಅದೇ ರೀತಿಯಲ್ಲಿ ಮಾಡುತ್ತಾನೆ. ಸೈತಾನನಿಂದ ಶೋಧಿಸಲ್ಪಡುವದೆಂದರೆ ಏನೆಂದು ಆತನಿಗೆ ಗೊತ್ತಿದೆಯಾದ್ದರಿಂದ ಆತನು ನಮಗೆ ಸಹಾಯವನ್ನು ಮಾಡುತ್ತಾನೆ, ಆತನು ಸೈತಾನನ ಶೋಧನೆಗೆ ಸೋತು ಹೋಗಿದ್ದರೆ ಆತನನ್ನು ಶಿಲುಬೆಗೆ ಹೋಗುವದರಿಂದ ಸೈತಾನನು ತಡೆದಿರುತ್ತಿದ್ದನು (ಮತ್ತಾಯ 4:8, 9). ಸೈತಾನನಂತೆಯೇ ಅದೇ ಆತ್ಮದೊಳಗೆ ಬಿದ್ದದ್ದಕ್ಕಾಗಿ ಆತನು ಪೇತ್ರನನ್ನು ಗದರಿಸಿದನು (ಮತ್ತಾಯ 16:21-23), ಮತ್ತು ತಾನು ಇನ್ನು ಸ್ವಲ್ಪ ಹೊತ್ತಿನಲ್ಲಿ ಬೀಳಲಿದ್ದೇನೆಂದು ಅರಿತಿದ್ದರಿಂದ ತನ್ನ ಶಿಷ್ಯರನ್ನು ಶೋಧನೆಯಲ್ಲಿ ಬೀಳದಂತೆ ಪ್ರಾರ್ಥಿಸಿರಿ ಎಂದು ಬೇಡಿಕೊಂಡನು (ಲೂಕ 22:39-46). ನಾವು ಸೈತಾನನ ಪ್ರಲೋಭನೆಗಳಿಗೆ ಒಳಗಾಗಿ ನಾಶಗೊಳ್ಳದಂತೆ ಆತನು ತಂದೆಯ ಮುಂದೆ ನಮಗೋಸ್ಕರ ವಿಜ್ಞಾಪನೆ ಮಾಡುತ್ತಾನೆ (ಲೂಕ 22:31, 32; ಇಬ್ರಿಯ 7:25).

---

## ಅಡಿಟಿಪ್ಪಣಿಗಳು

[1]F. F. Bruce, *The Epistle to the Hebrews*, The New International Commentary on the New Testament (Grand Rapids, Mich.: Wm. B. Eerdmans Publishing Co., 1964), 27. [2]Mari ಮತ್ತು Nuzi ವಿಧಿಗಳು ಮೂಲಪಿತೃಗಳ ಕಾಲಾವಧಿಗೆ ಸಮೀಪವಿದ್ದ ಕಾಲಗಳಿಗೆ ಸೇರಿದವುಗಳಾಗಿದ್ದು ಹಳೆಯ ಒಡಂಬಡಿಕೆಯ ಪದ್ಧತಿಗಳ ಮೇಲೆ ಬೆಳಕು ಚೆಲ್ಲುತ್ತವೆ. [3]James Moffatt, *A Critical and Exegetical Commentary on the Epistle to the Hebrews* (New York: Charles Scribner's Sons, 1924; reprint, Edinburgh: T. & T. Clark, 1952), 18. [4]Neil R. Lightfoot, *Jesus Christ Today: A Commentary on the Book of Hebrews* ರಲ್ಲಿ ಯೇಸುವಿನ, Philo, ಮತ್ತು ಇಬ್ರಿಯರಿಗೆ ಪತ್ರಿಕೆಯಲ್ಲಿನ ಬೋಧನೆಗಳಲ್ಲಿ ಈ ವಿಧಾನದ ಹಲವಾರು ಉದಾಹರಣೆಗಳು ಕೊಡಲ್ಪಟ್ಟಿರುತ್ತವೆ (Grand Rapids, Mich.: Baker Book House, 1976), 81. [5]Philip Edgcumbe Hughes, *A Commentary on the Epistle to the Hebrews* (Grand Rapids, Mich.: Wm. B.

Eerdmans Publishing Co., 1977), 76. [6]ಈ ವರಗಳ ಕುರಿತ ಸವಿಸ್ತಾರವಾದ ವಿವರಣೆಗೆ, ನೋಡಿರಿ ನೋಡಿ 1 Cor. 12:4-11, 28-30. [7]James D. Bales, *Studies in Hebrews* (Shreveport, La.: Lambert Book House, 1972), 29. [8]Philo *On the Unchangeableness of God* 74; *Concerning Noah's Work as a Planter* 90; *On Drunkenness* 61. [9]Bruce, 35. [10]Jimmy Allen, *Survey of Hebrews* (Searcy, Ark.: by the author, 1980), 37.

[11]Robert Milligan, *A Commentary on the Epistle to the Hebrews*, New Testament Commentaries (Cincinnati: Chase and Hall, 1876; reprint, Nashville: Gospel Advocate Co., 1975), 99. [12]ಗ್ರೀಕ್ ಮೂಲ ಪದ ἐπισκέπτομαι (*episkeptomai*) ಎಂಬುದು, ἐπίσκοπος (*episkopos*) ಎಂಬ ನಾಮಪದದ ಭಾಷಾಕುಲಕ್ಕೆ ಸೇರಿದ್ದಾಗಿದ್ದು, "ನೋಡಿಕೊಳ್ಳುವವನು" ಅಥವಾ "ಆರೈಕೆ ಮಾಡುವವನು" ಎಂದರ್ಥವಾಗಿದೆ. [13]Milligan, 99. [14]Warren W. Wiersbe, *Be Confident: An Expository Study of the Epistle to the Hebrews* (Wheaton, Ill.: Victor Books, 1982), 28. [15]Gerald F. Hawthorne, "Hebrews," in *The New International Bible Commentary*, ed. F. F. Bruce, H. L. Ellison, and G. C. D. Howley (Grand Rapids, Mich.: Zondervan Publishing House, 1986), 1509. [16]Wiersbe, 28. [17]Hawthorne, 1509. [18]ಕ್ಯಾಲ್ವಿನ್ ವಾದವು ಐದು ಮೂಲಭೂತ ತತ್ವಗಳನ್ನು ಬೋಧಿಸುತ್ತದೆ, ಅವು ಅನೇಕ ಸಾರಿ, "TULIP" ಎಂಬ ಪ್ರಥಮಾಕ್ಷರಿ ಆಗಿರುತ್ತವೆ: T = Total Depravity (ಸಂಪೂರ್ಣ ಭ್ರಷ್ಟತೆ), U = Unconditional Election (ಶರತ್ತುರಹಿತ ಆಯ್ಕೆ), L = Limited Atonement (ಮಿತವಾದ ಪ್ರಾಯಶ್ಚಿತ್ತ), I = Irresistible Grace (ವಿರೋಧಿಸಲಾಗದ ಕೃಪೆ), ಮತ್ತು P = Perseverance of the Saints (ದೇವಜನರ ಸಂರಕ್ಷಣೆ). [19]Bruce, 43. [20]Wiersbe, 29.

[21]Bruce, 43. [22]Gareth L. Reese, *A Critical and Exegetical Commentary on the Epistle to the Hebrews* (Moberly, Mo.: Scripture Exposition Books, 1992), 28, n. 53. [23]τελειόω (*teleioō*) ಎಂಬ ಪದದ ರೂಪಗಳು ಇಬ್ರಿಯರಿಗೆ ಪತ್ರಿಕೆಯಲ್ಲಿ ಹದಿನಾಲ್ಕು ಸಾರಿ ಬಳಸಲ್ಪಟ್ಟಿದೆ. ಈ ಪದವನ್ನು ಪ್ರಯತ್ನಿಸುವ ಒಂದು ಗುರಿ ಅಥವಾ ಕಾಣಿಸುತ್ತಿರುವ ಅಂತ್ಯ ಎಂಬುದಕ್ಕಾಗಿ ಬಳಸಬಹುದು ಅಥವಾ ಅದರರ್ಥವು "ಸಂಪೂರ್ಣ," "ಪರಿಪಕ್ವ," ಅಥವಾ "ಪೂರ್ಣವಾಗಿ ಬೆಳೆದ" ಎಂದಾಗಿರಬಹುದು. ಇದು ಎಂದಿಗೂ ಪಾಪರಹಿತ ಪರಿಪೂರ್ಣತೆಯನ್ನು ಸೂಚಿಸುವದಿಲ್ಲ. (Reese, 29, n. 54.) [24]"ಇದರರ್ಥವು ಬಾಧೆಯನ್ನನುಭವಿಸುವದು ಕರ್ತನಾದ ಯೇಸು ಕ್ರಿಸ್ತನ ನೈತಿಕ ತಪ್ಪುಗಳನ್ನು ಗುಣಪಡಿಸಿತೆಂದು ಆಗಿರುವದಿಲ್ಲ. ಇದು ಅಸಾಧ್ಯವಾದದ್ದಾಗಿತ್ತು, ಯಾಕೆಂದರೆ ಆತನು ಪಾಪವಿಲ್ಲದವನಾಗಿದ್ದನು" (Thomas Hewitt, *The Epistle to the Hebrews: An Introduction and Commentary*, The Tyndale New Testament Commentaries [Grand Rapids, Mich.: Wm. B. Eerdmans Publishing Co., 1960], 70). [25]ವಿಗ್ರಹಾರಧಕ ಜನಾಂಗದ ದೇವರುಗಳಿಗೆ "ಪ್ರಾಯಶ್ಚಿತ್ತ" (ಪ್ರಸನ್ನಗೊಳಿಸುವಿಕೆ) ಮಾಡಬೇಕಿತ್ತು, ಆದರೆ ನಮ್ಮ ದೇವರಿಗೆ ಅಗತ್ಯವಿಲ್ಲ. ಆತನು ಮಾನವರ ಮೇಲಿಟ್ಟಿರುವ ಪ್ರೀತಿಯ ನಿಮಿತ್ತ ನಮ್ಮ ಮೇಲೆ ಆತನಿಗೆ ಕೋಪವಿರುವದಿಲ್ಲ. ಹಳೆಯ ಒಡಂಬಡಿಕೆಯ ಯುಗದಲ್ಲಿ ಪಾಪಗಳನ್ನು "ನಿರ್ಲಕ್ಷಿಸುವ" ದೇವರ ನ್ಯಾಯವು ಒಂದು ತಕ್ಕ ಬೆಲೆಯನ್ನು ತೆತ್ತುವ ಮೂಲ ಸಮರ್ಥೀಸಲ್ಪಡಬೇಕಾಗಿತ್ತು. ವಿಗ್ರಹಾರಾಧಕ ಜಗತ್ತಿನ ಯಾವದೂ ಸಹ ರೋಮಾ 3:23-26ರಲ್ಲಿ ಚರ್ಚೆಯ ವಿಷಯಕ್ಕೆ ಹೋಲಿಕೆಯಾಗಲಾರದು. [26]"ತಂದೆ," "ಕುಟುಂಬ," ಅಥವಾ "ಮನೆಯವರು" ಎಂಬ ಪದಗಳು ಅನುವಾದಕರಿಂದ ಒದಗಿಸಲ್ಪಟ್ಟವುಗಳು, ಯಾಕೆಂದರೆ ಮೂಲ ವಾಕ್ಯದಲ್ಲಿ ಅಂಥ ಪದವು ಇರುವದಿಲ್ಲ. [27]Bruce, 45. [28]ಕೀರ್ತನೆ 22:18, ಆತನ ಉಡುಪುಗಳಿಗಾಗಿ ಚೀಟು ಹಾಕುವದರ ಕುರಿತಾಗಿದ್ದು ಅದು ಮತ್ತಾಯ 27:35 ನೆರವೇರಿಸಲ್ಪಟ್ಟದ್ದೆಂದು ಸೂಚಿಸಲ್ಪಟ್ಟಿರುತ್ತದೆ. [29]Hughes, 108. [30]ನೋಡಿ 1 Pet. 2:8; 1 Cor. 1:18, 23.

[31]Hawthorne, 1510. [32]ಈ ಹೇಳಿಕೆಗಳು ಒಂದು ಇಮ್ಮಡಿ ಅರ್ಥವನ್ನು ಹೊಂದಿರುವ ಸಾಧ್ಯತೆ ಅಧಿಕವಿರುತ್ತದೆ, ಅದರಲ್ಲಿ ಹಲವಾರು ಯೋಚನೆಗಳನ್ನು ಮೆಸ್ಸೀಯನಿಗೆ ಅನ್ವಯಿಸಬಹುದಾಗಿದೆ. ಉದಾಹರಣೆಗೆ, ಯೆಶಾಯ 7:14 ಮತ್ತು ಮತ್ತಾಯ 1:22, 23ರಲ್ಲಿರುವ "ಇಮ್ಮಾನುವೇಲ್" ಎಂಬುದನ್ನು ನೋಡಿರಿ. ಯೆಶಾಯನ ದಿನಗಳಲ್ಲಿ ಹುಟ್ಟಿದ ಮಗುವೊಂದನ್ನು "ಇಮ್ಮಾನುವೇಲ್" ಎಂದು ಕರೆದಿರಬಹುದಾಗಿದೆ, ಅದೇ ವೇಳೆಯಲ್ಲಿ ಪ್ರವಾದನೆಯು ಮೆಸ್ಸೀಯನಲ್ಲಿ ತನ್ನ ಇನ್ನೂ ಅಧಿಕವಾದ ನೆರವೇರಿಕೆಯನ್ನು ಹೊಂದಿದ್ದಾಗಿತ್ತುಮ ಆತನಿಗೆ ಆ ಹೆಸರು ನಿಜವಾಗಿಯೂ ವರ್ಣನಾತ್ಮಕವಾಗಿತ್ತು. (ಇದು Bruce, 46-47; Reese, 31, n. 65ದಲ್ಲಿರುವ ಚರ್ಚೆಯಾಗಿದೆ.) [33]Bruce, 46. Bruce's reference is to C. H. Dodd, *According to the Scriptures: The Sub-Structure of New Testament Theology* (New York: Charles Scribner's Sons, 1953), 126-38. [34]Brooke Foss Westcott, *The Epistle to the Hebrews: The Greek Text with Notes and Essays* (London: Macmillan & Co., 1889; reprint, Grand Rapids, Mich.: Wm. B. Eerdmans Publishing Co., 1973), 52. [35]Hawthorne, 1510. [36]Quoted in Hughes, 114. [37]Ibid., 115. [38]Albert Barnes, *Notes on the New*

*Testament: Hebrews to Jude* (London: Blackie & Son, 1884-85; reprint, Grand Rapids, Mich.: Baker Book House, 1985), 72. [39]*Midrash Tanchuma. Midrash*ವು ಶಾಸ್ತ್ರಗಳ ಭಾಗದ ಮೇಲೆ ಬರೆಯಲ್ಪಟ್ಟ ಯೆಹೂದಿ ಬರಹಗಳ ಒಂದು ಸಂಗ್ರಹವಾಗಿರುತ್ತದೆ. ಈ ರಬ್ಬಿಗಳ ವ್ಯಾಖ್ಯಾನಗ್ರಂಥಗಳು ವಾಕ್ಯಭಾಗದ ಮೇಲ್ಭಾಗದಲ್ಲಿರುವದರ ನಿಗೂಢವಾದ ಅರ್ಥಗಳನ್ನು ಹೊರ ತರುವದಾಗಿ ಹೇಳಿಕೊಳ್ಳುತ್ತವೆ. [40]ಈ ಹೇಳಿಕೆಯು Euripidesನಿಂದ ರಚಿಸಲ್ಪಟ್ಟ ಒಂದು ನಾಟಕದ ತುಣುಕು ಆಗಿರುತ್ತದೆ.

[41]Hughes, 119. [42]Hugh Montefiore, *A Commentary on the Epistle to the Hebrews*, Harper's New Testament Commentaries (New York: Harper & Row, 1964), 66. [43]James T. Draper, Jr., *Hebrews, the Life That Pleases God* (Wheaton, Ill.: Tyndale House Publishers, 1976), 65. [44]Hughes, 122. [45]"ಪ್ರಾಯಶ್ಚಿತ್ತ"ವು ವರ್ತಮಾನಕಾಲ ರೂಪದಲ್ಲಿರುತ್ತದೆ, ಯೇಸು ಕ್ರೈಸ್ತರನ್ನು ನಿರಂತರವಾಗಿ ಶುದ್ಧಮಾಡುತ್ತಲೇ ಇರುವನೆಂಬುದನ್ನು ಸೂಚಿಸುತ್ತದೆ. (ನೋಡಿರಿ 1 ಯೋಹಾನ 1:7.) ನಾವು ಪಾಪ ಮಾಡುವಾಗ ಯೇಸುವಿನ ರಕ್ತವು ಪಾಪಗಳನ್ನು ಅನುದ್ದಿಷ್ಟವಾಗಿ ಮತ್ತು ನಾವು ಒಪ್ಪಿಕೊಂಡು ಪ್ರಾಮಾಣಿಕವಾಗಿ ಅರಿಕೆಮಾಡುವಾಗ ಖಚಿತವಾಗಿ ಮುಚ್ಚುವದಾಗಿರುತ್ತದೆ (1 ಯೋಹಾನ 1:8-10). [46]Dale Hulett, lecture presented at Michigan Christian College (now Rochester College), 12 March 1966. [47]Wiersbe, 31. [48]Lightfoot, 80. [49]Hughes, 111. [50]Draper, 60.

[51]ಯೋಬನ ಪ್ರಕರಣವನ್ನು ಪರಿಗಣಿಸಿರಿ, ಆತನು ಸಹ ದೇವರ ನಿಗ್ರಹಿಸುವ ವಾಕ್ಯವಿಲ್ಲದಿದ್ದರೆ ಮರಣಿಸಿರುತ್ತಿದ್ದನು (ಯೋಬ 1:6-12). [52]Wiersbe, 36. [53]Joseph Addison Alexander, "The Doomed Man," *Masterpieces of Religious Verse*, ed. James Dalton Morrison (New York: Harper & Brothers, 1948), 312. [54]Fred Guterl, "Now, That's a Bad Sunburn!" *Newsweek*, 17 June 2002, 48. [55]Don Richardson, *Peace Child* (Glendale, Calif.: Regal Books, 1974). [56]Barnes, 71. [57]Ibid., 72. [58]Raymond Brown, *The Message of Hebrews: Christ Above All*, The Bible Speaks Today (Downers Grove, Ill.: Inter-Varsity Press, 1982), 73. [59]Wiersbe, 31.